ಸಂಪುಟ : 13 Volume | ಸಂಚಿಕೆ : 209 Issue | ಪುಟಗಳು : 08 Pages | ಶುಕ್ರವಾರ 03 ಅಕ್ಟೋಬರ್ 2025 | ₹2 | RNINO:KARKAN/2011/48371 | BDR/054/2026-20274 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ
Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

**ಬೆಳಗು**
" ಪ್ರೀತಿ ಇದ್ದಲ್ಲ ನಂಬಿಕೆ ಇರಲೇ ಬೇಕೆಂದಿಲ್ಲ ಆದರೆ ನಂಬಿಕೆ ಇದ್ದಲ್ಲ ಪ್ರೀತಿ ಇದ್ದೇ ಇರುವುದು "
. ಸಂತ ಕಬೀರ .

ಸಂಪಾದಕರು: ರಮೇಶ ರೆಡ್ಡಿ

ದಸರಾ: ಸೀಮೋಲ್ಲಂಘನ ಪೂಜೆ 2 | ಬೆಟ್ಟದ ದೇವಿಗೆ ವಿಶೇಷ ಪೂಜೆ 7 | ನೂಕುನುಗ್ಗಲು : ಯುವತಿ ಅಸ್ವಸ್ಥ 8

# ವಿಶ್ವವಿಖ್ಯಾತ ದಸರಾ ಜಂಬೂಸವಾರಿಗೆ ಚಾಲನೆ

ಮಲ್ಲಮ್ಮ ನುಡಿವಾರ್ತೆಮೈಸೂರು: ಅ.2:ಲಕ್ಷಾಂತರಜನರುಕಾತುರದಿಂದ ಕಾದಿದ್ದವಿಶ್ವವಿಖ್ಯಾತಮೈಸೂರುದಸರಾ ಜಂಬೂಸವಾರಿಗೆ ಅದ್ದೂರಿ ಚಾಲನೆ ನೀಡಲಾಯಿತು.ಸಂಜೆ 4.42ರಿಂದ 5.06ಅವಧಿಯಶುಭಕುಂಭಲಗ್ನದಲ್ಲಿ ಚಾಮುಂಡೇಶ್ವರಿಮೂರ್ತಿಗೆಪುಷ್ಪಾರ್ಚನೆ ಮಾಡುವಮೂಲಕಸಿಎಂಸಿದ್ದರಾಮಯ್ಯ ಚಾಲನೆನೀಡಿದರು. ಸಿಎಂಜೊತೆಉಪ ಮುಖ್ಯಮಂತ್ರಿಗಳಾದಡಿ.ಕೆಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಹೆಚ್.ಸಿ.ಮಹದೇವಪ್ಪ,ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಸಚಿವರಾದಶಿವರಾಜ್‌ತಂಗಡಗಿ, ಜಿಲ್ಲಾಧಿಕಾರಿಗಳಾದಜಿ.ಲಕ್ಷ್ಮೀಕಾಂತ ರೆಡ್ಡಿ,ಪೊಲೀಸ್‌ಆಯುಕ್ತೆಸೀಮಾಲಾಟ್ಕರ್ ಪುಷ್ಪಾರ್ಚನೆಮಾಡಿದರು.ಅಲಂಕೃತಗೊಂಡ 750ಕೆಜಿತೂಕದಚಿನ್ನದಅಂಬಾರಿಯಲ್ಲಿ ವಿರಾಜಮಾನಳಾಗಿದ್ದನಾಡಅಧಿದೇವತೆ ಚಾಮುಂಡಿತಾಯಿಯನ್ನುಹೊತ್ತು6ನೇ ಬಾರಿಅಭಿಮನ್ಯುರಾಜಗಾಂಭೀರ್ಯದಿಂದ ಹೆಜ್ಜೆಹಾಕಿದನು.ದಸರಾಮೆರವಣಿಗೆಯಲ್ಲಿ



ನಿಶಾನೆಆನೆಯಾಗಿಧನಂಜಯಹೆಜ್ಜೆ ಹಾಕಿದರೆಕುಮ್ಕಿಆನೆಗಳಾಗಿಕಾವೇರಿ ಮತ್ತು ರೂಪ, ನೌಫತ್ ಆನೆಯಾಗಿ ಗೋಪಿ, ಪಟ್ಟದ ಆನೆಯಾಗಿ ಶ್ರೀಕಂಠಮತ್ತುಲಕ್ಷ್ಮಿ ಹೆಜ್ಜೆಹಾಕುತ್ತಿವೆ. ಸಾಲಾನೆಯಾಗಿಮಹೇಂದ್ರ,ಭೀಮ, ಕಂಜನ್, ಏಕಲವ್ಯ, ಪ್ರಶಾಂತ, ಸುಗ್ರೀವ, ಹೇಮಾವತಿ ಈ ಆನೆಗಳು ಅಭಿಮನ್ಯುವಿಗೆ ಸಾಥ್ ನೀಡಿದವು. ಅಂಬಾರಿಯಲ್ಲಿವಿರಾಜಮಾನಳಾಗಿದ್ದ ಚಾಮುಂಡಿತಾಯಿಯನ್ನುಕಣ್ತುಂಬಿಕೊಂಡು ಜನರು ಧನ್ಯತಾ ಭಾವ ಮೆರೆದರು. ದಸರಾ ಜಂಬೂಸವಾರಿ ವೀಕ್ಷಿಸಲು ಅರಮನೆ ಅಂಗಳದಲ್ಲಿ 48 ಸಾವಿರ ಆಸನಗಳವ್ಯವಸ್ಥೆಮಾಡಲಾಗಿತ್ತು.ದಸರಾ ಜಂಬೂಸವಾರಿಗೆ ಸ್ತಬ್ಧಚಿತ್ರ ಹಾಗೂ ವಿವಿಧ ಕಲಾತಂಡಗಳು ಮೆರುಗು ನೀಡುತ್ತಿವೆ. ಒಟ್ಟು57ಸ್ತಬ್ಧಚಿತ್ರಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿವೆ. ಮೆರವಣಿಗೆಯಲ್ಲಿಸಾಗುವದಾರಿಯಲ್ಲಿ 140ಕ್ಕೂ ಹೆಚ್ಚು ಕಲಾ ತಂಡಗಳು ಭಾಗಿಯಾಗಿವೆ.

## ಶಕ್ತಿ ಯೋಜನೆಯು ಮತ್ತೊಂದು ವಿಶ್ವ ದಾಖಲೆ



CERTIFICATE
INTERNATIONAL WORLD RECORDS OF EXCELLENCE BOOK OF RECORDS
RECORD HOLDER
KSRTC, BMTC, NWKRTC, KKRTC, SRI RAMALINGA REDDY (HONBLE TRANSPORT MINISTER), GOVERNMENT OF KARNATAKA
THE WORLD RECORD OF "HIGHEST NUMBER OF BUS RIDES WOMEN AVAILED FREE TRAVEL SCHEME IN KARNATAKA (MASS)" WAS ACHIEVED BY KSRTC, BMTC, NWKRTC, KKRTC, SRI RAMALINGA REDDY (HONBLE TRASPORT MINISTER), GOVERNMENT OF KARNATAKA ON 16TH JULY 2025 FROM BENGALURU (KARNATAKA) INDIA. 500 CRORE FREE BUS RIDES AVAILED BY WOMEN UNDER THE 'SHAKTI SCHEME', LAUNCHED BY THE KARNATAKA GOVERNMENT ON JUNE 11, 2023, TO PROMOTE WOMEN'S EMPOWERMENT, AS OF RECORDS UP TO JULY 16, 2025
SALUTE THE TALENT
WWW.INTERNATIONALBOOKOFRECORDS.COM

ಮಲ್ಲಮ್ಮ ನುಡಿ ವಾರ್ತೆ
ಬೆಂಗಳೂರು,ಅ02:ರಾಜ್ಯಸರ್ಕಾರದ ಮಹಿಳಾ ಸಬಲೀಕರಣದೆಡೆಗಿನ ಮಹತ್ವಾಕಾಂಕ್ಷೆಯೋಜನೆಯಾದ ಶಕ್ತಿ ಯೋಜನೆಯು 500 ಕೋಟಿ ಮಹಿಳಾಟಿಕೇಟ್ ಉಚಿತಪ್ರಯಾಣ ಮತ್ತೊಂದು ವಿಶ್ವ ದಾಖಲೆಗೆ *q|wqb|qbo@miSewg &wogSewgiCeooqe ಸೇರ್ಪಡೆಯಾಗಿರುವುದುಹೆಮ್ಮೆಯ ವಿಷಯವಾಗಿದೆ ಎಂದು ಸಾರಿಗೆ ಸಚಿವರಾದ ರಾಮಲಿಂಗಾರೆಡ್ಡಿ ಅವರು ತಿಳಿಸಿದ್ದಾರೆ.

ಈಗಾಗಲೇEogq@miwogSewgನಲ್ಲಿಸೇರ್ಪಡೆಯಾಗಿತ್ತು. ನಾಲ್ಕು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ಸಮಸ್ತ ಅಧಿಕಾರಿ/ ಸಿಬ್ಬಂದಿಗಳಿಗೆ ಹಾಗೂಕಾರ್ಮಿಕಮುಖಂಡರುಗಳಿಗೆಹಾಗೂಅವರು ಧನ್ಯವಾದಗಳನ್ನು ಸಲ್ಲಿಸಿದರು.ಶಕ್ತಿ ಯೋಜನೆಯು ರಾಜ್ಯದ ಮಹಿಳೆಯರನ್ನು ಆರ್ಥಿಕ, ಸಾಮಾಜಿಕಹಾಗೂಔದ್ಯೋಗಿಕವಾಗಿಸಬಲರನ್ನಾಗಿಸಿದೆ.ಶಕ್ತಿಯೋಜನೆಯನ್ನು ದೇಶದವಿವಿಧರಾಜ್ಯಗಳಲ್ಲಿಅನುಷ್ಠಾನಗೊಳಿಸಿರುವುದುಶಕ್ತಿಯೋಜನೆಯ ಯಶಸ್ಸನ್ನು ಬಿಂಬಿಸಿದೆ. ಮಹಿಳಾಪ್ರಯಾಣಿಕರಿಗೂಅಭಿನಂದನೆಗಳನ್ನು ಅವರು ಸಲ್ಲಿಸಿದರು.

## ಮಚ್ಚಿನಿಂದ ಹೊಡೆದು ವ್ಯಕ್ತಿ ಕೊಲೆ

ಮಲ್ಲಮ್ಮ ನುಡಿ ವಾರ್ತೆ ಬೀದರ. ಅ. 02 : ಚಿಟಗುಪ್ಪ ತಾಲ್ಲೂಕಿನ ಮನ್ನಾಏಖ್ಖೆಳ್ಳಿಯಲ್ಲಿಗುರುವಾರವ್ಯಕ್ತಿಯೊಬ್ಬರನ್ನುಮಚ್ಚಿನಿಂದಹೊಡೆದು ಕೊಲೆಮಾಡಲಾಗಿದೆ. ಗಣಪತಿವೈಜನಾಥ್‌ವಗ್ಗರ್‌ಮೃತವ್ಯಕ್ತಿ. ಹಳ್ಳಿಖೇಡ್



ರಸ್ತೆಯ ಜೆಸ್ಕಾಂ ಕಚೇರಿ ಬಳಿ ಘಟನೆ ನಡೆದಿದೆ. ಮೃತರು ಹುಮನಾಬಾದ್ ತಾಲ್ಲೂಕುಪಂಚಾಯಿತಿಮಾಜಿಅಧ್ಯಕ್ಷ ಮುಹಮ್ಮದ್‌ಮಸ್ತಾನ್‌ನೂರೊದ್ದೀನ್ ಅವರಆಪ್ತರಾಗಿದ್ದರು.ಕೊಲೆಗೆಕಾರಣವೇನು ಎಂಬುದುಇನ್ನಷ್ಟೇಗೊತ್ತಾಗಬೇಕಿದೆ. ಮನ್ನಾಏಖ್ಖೆಳ್ಳಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.ಜಿಲ್ಲಾಪೊಲೀಸ್ ವರಿಷ್ಠಾಧಿಕಾರಿಪ್ರದೀಪ್‌ಗುಂಟಿಸ್ಥಳಕ್ಕೆ ಭೇಟಿಕೊಟ್ಟುಪರಿಶೀಲನೆನಡೆಸಿದ್ದಾರೆ.

## ರಾಯಚೂರಲಿ ದಸರಾ ಸಂಭ್ರಮ



ಮಲ್ಲಮ್ಮ ನುಡಿ ವಾರ್ತೆ ರಾಯಚೂರು ಅ 02 : ರಾಯಚೂರು ಮಹಾನಗರಪಾಲಿಕೆಯಿಂದನಾಡಹಬ್ಬದಸರಾಹಿನ್ನೆಲೆಯಲ್ಲಿನಾಡದೇವಿಯ ಮೆರವಣಿಗೆಯುನಗರದಲ್ಲಿವಿಶಿಷ್ಟವಾಗಿನಡೆಯಿತು.ಮಹಾನಗರಪಾಲಿಕೆಯ ಜೋನಲ್ ಕಚೇರಿ ಆವರಣದಲ್ಲಿ ಮೆರವಣಿಗೆಗೆ ಚಾಲನೆ ದೊರೆಯಿತು. ರಾಯಚೂರುನಗರಕ್ಷೇತ್ರದಶಾಸಕರಾದಡಾ.ಎಸ್‌ಶಿವರಾಜ್‌ಪಾಟೀಲ, ಮಹಾನಗರ ಪಾಲಿಕೆಯ ಅಧ್ಯಕ್ಷೆ ನರಸಮ್ಮ ನರಸಿಂಹಲು ಮಾಡಗಿರಿ, ಉಪಾಧ್ಯಕ್ಷರಾದ ಜೆ ಸಾಜಿದ್ ಸಮೀರ್ ಹಾಗೂ ಪಾಲಿಕೆಯ ಇನ್ನಿತರ ಸದಸ್ಯರು ಮತ್ತು ಪಾಲಿಕೆಯು ಆಯುಕ್ತರಾದ ಜುಬಿನ್ ಮೊಹಪಾತ್ರ ಹಾಗೂ ಇನ್ನಿತರ ಗಣ್ಯರು ತಲೆಗೆ ಪೇಟ ಸುತ್ತಿ ಭಾಗಿಯಾಗಿ ದಸರಾ ಮಹೋತ್ಸವದಸಂಭ್ರಮಕ್ಕೆಸಾಕ್ಷಿಯಾದರು.ಮಹಿಳೆಯರುಕುಂಭಹೊತ್ತು ಮೆರವಣಿಗೆಯಲ್ಲಿ ಸಾಗಿದರು. ಹಲಗೆ-ಡೊಳ್ಳಿನ ಮೇಳ, ಕೋಲಾಟ, ಹುಲಿಕುಣಿತವೇಷಧಾರಿಗಳುಸೇರಿದಂತೆನಾನಾಬಗೆಯಕಲಾತಂಡಗಳು ಮೆರವಣಿಗೆಯ ಕಳೆ ಹೆಚ್ಚಿಸಿದವು.ಮಹಾನಗರ ಪಾಲಿಕೆಯ ಜೋನಲ್ ಕಚೇರಿಯಿಂದ ಆರಂಭಗೊಂಡ ನಾಡದೇವಿಯ ಮೆರವಣಿಗೆಯು ಮಾಣಿಕಪ್ರಭು ಬನ್ನಿ ಮಂಟಪದವರೆಗೆ ಸಾಗಿತು.

## ಮುಂದಿನ ವರ್ಷವೂ ನನ್ನಿಂದಲೇ ಪುಷ್ಪಾರ್ಚನೆ

ಮಲ್ಲಮ್ಮ ನುಡಿವಾರ್ತೆಬೆಂಗಳೂರು:ಅ.2:ಕಳೆದವರ್ಷದದಸರಾವೇಳೆಮುಂದಿನ ದಸರಾದಲ್ಲಿನಾನುಪುಷ್ಪಾರ್ಚನೆಮಾಡುವುದಿಲ್ಲಎಂದುವಿಪಕ್ಷನಾಯಕರು ಹೇಳಿದ್ದರು. ವಿರೋಧಪಕ್ಷಗಳುಭವಿಷ್ಯಕಾರರಲ್ಲ. ವಸ್ತುಸ್ಥಿತಿಯಬಗ್ಗೆಅರಿವಿಲ್ಲದೇ ಮಾತನಾಡುವವಿಪಕ್ಷಗಳಭವಿಷ್ಯನಿಜವಾಗುವುದಿಲ್ಲಮುಂದಿನವರ್ಷಗಳಲ್ಲಿಯೂ ನಾನೇ ದಸರಾ ಉತ್ಸವದಲ್ಲಿ ಪುಷ್ಪಾರ್ಚನೆ ಮಾಡುತ್ತೇನೆಂಬಭರವಸೆ ಇದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದ್ದಾರೆ.ಮೈಸೂರು ವಿಮಾನನಿಲ್ದಾಣದಲ್ಲಿಸುದ್ದಿಗಾರರೊಂದಿಗೆಮಾತನಾಡಿದಅವರು, ದಸರಾ ಉದ್ಘಾಟಕರ ಬಗ್ಗೆ ಬಿಜೆಪಿಯವರು ವಿರೋಧದ ಧ್ವನಿಯೆತ್ತಿದ್ದರು.

## ಗಾಂಧೀಜಿ, ಶಾಸ್ತ್ರಿಯವರ ತ್ಯಾಗ-ಬಲಿದಾನ ಸದಾ ನಮಗೆ ಆದರ್ಶ: ಸಿದ್ದರಾಮಯ್ಯ



ಮಲ್ಲಮ್ಮ ನುಡಿವಾರ್ತೆಮೈಸೂರು:ಅ.2: ಅ.2 ರಂದು ದೇಶಾದ್ಯಂತ ಗಾಂಧಿ ಜಯಂತಿಯನ್ನು ಆಚರಿಸಲಾಗುತ್ತದೆ. ಅವರನೇತೃತ್ವದಲ್ಲಿನಡೆದಹೋರಾಟದ ಫಲದಿಂದನಾವಿಂದುಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದೇವೆ.ಅವರತ್ಯಾಗ,ಬಲಿದಾನ ಸದಾನಮಗೆಆದರ್ಶಪ್ರಾಯವಾಗಿರುತ್ತವೆ ಎಂದುಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಗಾಂಧಿಜಯಂತಿಪ್ರಯುಕ್ತಮೈಸೂರಿನ ಮಹಾತ್ಮ ಗಾಂಧಿ ವೃತ್ತದಲ್ಲಿ ಗಾಂಧಿ ಪ್ರತಿಮೆಗೆಮಾಲಾರ್ಪಣೆ,ಪುಷ್ಪಾರ್ಚನೆ ಮಾಡಿ ಬಳಿಕ ಮಾಧ್ಯಮದವರ ಜೊತೆ ಸಿಎಂ ಮಾತನಾಡಿದರು.ಅ.2 ರಂದು ಮಾಜಿ ಪ್ರಧಾನ ಮಂತ್ರಿ ಲಾಲ್ ಬಹಾದ್ದೂರ್ ಶಾಸ್ತ್ರಿ, ಅವರ ಜನ್ಮದಿನವೂ ಕೂಡಾ ಹೌದು. ದೇಶ ಕಂಡ ಅತ್ಯಂತ ಪ್ರಾಮಾಣಿಕ ಪ್ರಧಾನಿ ಅವರು ಎಂದು ಶಾಸ್ತ್ರಿ ಅವರನ್ನು ಸಿಎಂ ಸ್ಮರಿಸಿದರು.ಕಾಕತಾಳೀಯ ಎಂಬಂತೆ ಇಂದು ವಿಜಯದಶಮಿಯೂ ಬಂದಿದ್ದು, ನಾಡಿನ ಸಮಸ್ತ ಜನತೆಗೆ ವಿಜಯದಶಮಿ ಶುಭಾಶಯಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

## ರಾಜ್ಯದಲ್ಲಿ ಸಿಎಂ ಬದಲಾವಣೆಯಿಲ್ಲ, 5 ವರ್ಷವೂ ಸಿದ್ದರಾಮಯ್ಯ ಸಿಎಂ: ರಾಮಲಿಂಗಾರೆಡ್ಡಿ

ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು:ಅ.2: ರಾಜ್ಯದಲ್ಲಿ ಸಿಎಂ ಬದಲಾವಣೆ ಇಲ್ಲ. ಸಿದ್ದರಾಮಯ್ಯ ಅವರೇ 5 ವರ್ಷ ಸಿಎಂ ಆಗಿ ಮುಂದುವರೆಯಲಿದ್ದಾರೆ ಎಂದು ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.ನವೆಂಬರ್ ಕ್ರಾಂತಿ ಬಗ್ಗೆವಿಧಾನಸೌಧದಲ್ಲಿಪ್ರತಿಕ್ರಿಯೆನೀಡಿದಅವರು, ರಾಜ್ಯದಲ್ಲಿಸಿಎಂಬದಲಾವಣೆಇಲ್ಲ. ಸಿದ್ದರಾಮಯ್ಯ ಅವರೇ ಸಿಎಂ ಆಗಿ 5 ವರ್ಷ ಇರ್ತಾರೆ. ಡಿಕೆ ಅಂದುಕೊಂಡವರು. ಆದರೆ ಡಿಕೆ 5 ವರ್ಷ ಸಿಎಂ ಆಗಿರುತ್ತಾರೆ ಎಂದು ಮೇಲೆ ಸಿಎಂ ಬದಲಾವಣೆ ಅನ್ನೋ ನಾನೇಇರುತ್ತೇನೆಅಂತಹೇಳಿದ್ದಾರೆ. ಡಿಕೆ ಇರುತ್ತಾರೆಅಂತಹೇಳಿದ್ದಾರೆ. ಹೀಗಾಗಿ ಕೇಳೋ ಹಾಗೇ ಇಲ್ಲ. ನವೆಂಬರ್ ನವೆಂಬರ್‌ಗೆ ಸಚಿವ ಸಂಪುಟ ಪುನರ್ ಮತ್ತುಹೈಕಮಾಂಡ್‌ನಿರ್ಧಾರಮಾಡಿ



ಶಿವಕುಮಾರ್‌ಅವರುಸಿಎಂಆಗಬೇಕು ಶಿವಕುಮಾರ್‌ಅವರೇಸಿದ್ದರಾಮಯ್ಯ ಹೇಳಿದ್ದಾರೆ. ಡಿಕೆಶಿವಕುಮಾರ್‌ಹೇಳಿದ ವಿಷಯವೇಇಲ್ಲಎಂದರು. ಸಿಎಂಅವರು ಶಿವಕುಮಾರ್‌ಕೂಡಾಸಿದ್ದರಾಮಯ್ಯ ಸಿಎಂಬದಲಾವಣೆಅನ್ನೋಪ್ರಶ್ನೆಯೇ ಕ್ರಾಂತಿ ಇಲ್ಲ. ಬರೀ ಬ್ರಾಂತಿ ಅಷ್ಟೇ. ರಚನೆ ಆಗಬಹುದು. ಸಿಎಂ, ಡಿಸಿಎಂ ಯಾವಾಗಬೇಕಾದರೂಸಂಪುಟಪುನರ್ ರಚನೆ ಮಾಡಬಹುದು ಎಂದು ಹೇಳಿದರು.ಈಗ ಡಿಕೆ ಶಿವಕುಮಾರ್ ಬೆಂಗಳೂರು ಸಚಿವರು ಆಗಿದ್ದಾರೆ. ಈಗೇನು ಖಾಲಿ ಇಲ್ಲ. ಖಾಲಿ ಇದ್ದರೂ ಕೂಡ ನಾನೇನು ಕೇಳೋಕೆ ಹೋಗಲ್ಲ. ನಾನು ಯಾವತ್ತು ಮಂತ್ರಿ ಆಗಬೇಕು, ಇಂತಹ ಖಾತೆ ಬೇಕು, ಜಿಲ್ಲಾ ಉಸ್ತುವಾರಿ ಬೇಕು ಅಂತ ಕೇಳಿಲ್ಲ. ನನ್ನ ಸರ್ವೀಸ್‌ನಲ್ಲಿ ಕೇಳಿಲ್ಲ. ಈಗಲೂ ಕೇಳಿಲ್ಲ. ಮುಂದೆಯೂ ಕೇಳೊಲ್ಲ ಎಂದು ಸ್ಪಷ್ಟಪಡಿಸಿದರು.

## ಟಿಪ್ಪರ್ ಹಾಯ್ದು 130ಕ್ಕೂ ಅಧಿಕ ಕುರಿಗಳ ಸಾವು



ಮಲ್ಲಮ್ಮ ನುಡಿವಾರ್ತೆಕೊಪ್ಪಳ :ಅ.2:ತಾಲೂಕಿನಮುನಿರಾಬಾದ್ ಸಮೀಪದಎನ್.ಎಚ್63ಹೆದ್ದಾರಿಯ ಬೇವಿನಹಳ್ಳಿಕ್ರಾಸ್(ಕಿರ್ಲೋಸ್ಕರ್ ಫ್ಯಾಕ್ಟರಿ)ಬಳಿಮಂಗಳವಾರಸಂಜೆ 6:36ರ ಸಮಯಕ್ಕೆ ಹೊಸಪೇಟೆ ಮಾರ್ಗದಿಂದ ಎಂ ಎಸ್ ಪಿ ಎಲ್ ಕಂಪನಿಗೆಹೋಗುತ್ತಿರುವಟಾಟಾ ಟಿಪ್ಪರ್ ಹರಿದು ನೂರಾರು ಕುರಿ ಸಾವಾಗಿದೆ.ಬೇವಿನಹಳ್ಳಿಕ್ರಾಸ್‌ನ ಏನ್ ಎಚ 63 ಇಂದು ಸಂಜೆ ರಸ್ತೆ ಅಕ್ಷರ ಸಹ ರಕ್ತ-ಸಿಕ್ತಮಯವಾಗಿತ್ತು, ನೀರಿನ ಹೊಳೆ ಹರಿದಂತೆ ರಸ್ತೆ ತುಂಬೆಲ್ಲ ರಕ್ತದ ಮಡುಗು ,ಗ್ರಾಮದ ಚಿದಾನಂದಪ್ಪ ಮಡ್ಡಿ ಎಂಬುವವರ ಮಾಲೀಕರಿಗೆ ಸೇರಿದ್ದ ಕುರಿಗಳು ಸಂಜೆ ರಸ್ತೆ ದಾಟುತ್ತಿದ್ದ ಸಂದರ್ಭದಲ್ಲಿ ವೇಗವಾಗಿ ಬಂದ ಟಿಪ್ಪರ್ ಹೊಡೆದು 130 ಕೂ ಅಧಿಕ ಕುರಿಗಳ ಸಾವು ಸಂಭವಿಸಿದೆ. ಸ್ಥಳಕ್ಕೆ ದೌಡಾಯಿಸಿದ ಕೊಪ್ಪಳ ಜಿಲ್ಲಾಧಿಕಾರಿ ಸುರೇಶ್ ಇಟ್ನಾಳ್ ಸಂಬಂಧಪಟ್ಟ ಅಧಿಕಾರಿಗಳಿಗೆ ಪಂಚನಾಮಕ್ಕೆ ಸೂಚಿಸಿ ಪರಿಹಾರ ಒದಗಿಸುವುದಾಗಿ ಭರವಸೆ ನೀಡಿದರು.ಸುಮಾರು 3 ಗಂಟೆಗಳ ಕಾಲ ರಸ್ತೆ ತಡೆದು ಗ್ರಾಮಸ್ಥರು ಪ್ರತಿಭಟಿಸಿದರು. ಘಟನಾ ಸ್ಥಳಕ್ಕೆ ಆಗಮಿಸಿದ್ದ ಶಾಸಕ ರಾಘವೇಂದ್ರ ಹಿಟ್ನಾಳ್ 2 ಲಕ್ಷ ತಾತ್ಕಾಲಿಕ ಪರಿಹಾರ ನೀಡಿ, ಸರ್ಕಾರದಿಂದ ಬರುವ ಪರಿಹಾರಕ್ಕೆ ಆದೇಶಿಸಿದರು. ಸುಮಾರು ಮೂರು ಗಂಟೆಗಳ ಕಾಲ ಬಿಗುವಿನ ವಾತಾವರಣದಲ್ಲಿ ಕೊಪ್ಪಳದ ಸಿಪಿಐ ಮತ್ತು ಮುನಿರಾಬಾದ್ ಪಿ ಎಸ್ ಐ ಸುನಿಲ್ ಕುಮಾರ್ ತಂಡ ನೆರೆದಿದ್ದ ಗ್ರಾಮಸ್ಥರ ಆಕ್ರೋಶವನ್ನು ಹತೋಟಿಗೆ ತರಲು ಹರ ಸಾಹಸ ಪಟ್ಟರು.ತದನಂತರ ಪಂಚನಾಮಕ್ಕೇ ವೈದ್ಯರು ಸ್ಥಳಕ್ಕೆ ದೌಡಾಯಿಸಿ ಸತ್ತಿರುವ ಕುರಿಗಳ ಪಂಚನಾಮ ನಡೆಸಿದರು. ಕುರಿಗಾಯಿಗಳ ಮಾಲೀಕರ ಆಕ್ರಂದನ ಮುಗಿಲು ಮುಟ್ಟಿತು. ನಂತರ ಘಟನಾ ಸ್ಥಳಕ್ಕೆ ಸಂಸದರಾದ ರಾಜಶೇಖರ್ ಹಿಟ್ನಾಳ್ ಭೇಟಿ ನೀಡಿದರು. ಗ್ರಾಮಸ್ಥರ ಆಕ್ರೋಶ: ಇಂತಹ ಘಟನೆಗಳು ಈ ಹಿಂದೆ ನಡೆದಿವೆ ರೋಡ್ ಬ್ರೇಕ್ ಅಥವಾ ಅಂಡರ್ ಪಾಸ್ ಕಡ್ಡಾಯ ಬೇಕೆ ಬೇಕು. ಇಲ್ಲವಾದರೆ ರಸ್ತೆ ತಡೆದು ಪ್ರತಿಭಟಿಸುತ್ತೇವೆ ಎಂದು ಸ್ಥಳಕ್ಕೆ ಆಗಮಿಸಿದ್ದ ಡಿ ಸಿ-ಸುರೇಶ್ ಇಟ್ನಾಳ ಹಾಗು ಶಾಸಕ ರಾಘವೇಂದ್ರ ಹಿಟ್ನಾಳ್ ಅವರಿಗೆ ತಾಕೀತು ಮಾಡಿದರು.ಈ ಸಂಬಂಧ ಮುನಿರಾಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ದೈವಿ ಗುಣಗಳನ್ನು ಬಲಗೊಳಿಸುವುದೇ ವಿಜಯ ದಶಮಿಯ ಗುರಿ: ರಂಭಾಪುರಿ ಜಗದ್ಗುರುಗಳು

ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ:ಅ2:ಮನುಷ್ಯನಲ್ಲಿರುವ ಅಸುರಿ ಗುಣಗಳು ನಾಶವಾಗಿ ದೈವೀ ಗುಣಗಳನ್ನುಬಲಗೊಳಿಸುವುದೇ ದಸರಾ ಹಬ್ಬದ ಮೂಲ ಗುರಿಯಾಗಿದೆಯೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿಡಾವೀರಸೋಮೇಶ್ವರಜಗದ್ಗುರುಗಳುಅಭಿಪ್ರಾಯಪಟ್ಟರು. ಅವರುಗುರುವಾರವಿಜಯದಶಮಿಯಅಂಗವಾಗಿ ಶಮಿ ಸೀಮೊಲ್ಲಂಘನ ನೆರವೇರಿಸಿ ಮಾನದ ಧರ್ಮ ವೇದಿಕೆಯಲ್ಲಿ ಶಾಂತಿ ಸಂದೇಶ ನೀಡುತ್ತಿದ್ದರು. ಜೀವನದಲ್ಲಿಬದಲಾವಣೆಮತ್ತುಬೆಳವಣಿಗೆಎರಡೂಮುಖ್ಯ. ಮೌಲ್ಯಾಧಾರಿತಬದುಕಿಗೆಬೆಲೆಯಿದೆ. ಆತ್ಮವಿಶ್ವಾಸ ನಿಶ್ಚಿತ ಗುರಿ ಮತ್ತು ಸಂಯಮ ಯಶಸ್ವಿಗೆ ಭದ್ರ ಬುನಾದಿ. ಮಾನವೀಯ ಸಂಬಂಧಗಳನ್ನು ಗಟ್ಟಿಗೊಳಿಸಿ ಬದುಕಿನ ಹಿರಿಮೆಮತ್ತುರಹಸ್ಯ ಬೋಧಿಸುವುದೇನಿಜವಾದಧರ್ಮ. ಸತ್ಯವೇಒಂದುಧರ್ಮ. ಇದುಧರ್ಮವನ್ನುರಕ್ಷಿಸುವ ರಕ್ಷಾಕವಚ. ಧರ್ಮದರಕ್ಷಾಕವಚಕಳಚಿದರೆನಾಡಿನಲ್ಲಿಧರ್ಮಸಂಸ್ಕೃತಿಸಭ್ಯತೆಮತ್ತುಪರಂಪರೆಯಆದರ್ಶಗಳು ಉಳಿಯಲಾರವು. ಧರ್ಮದ ಉತ್ಕೃಷ್ಟ ಮೌಲ್ಯಗಳನ್ನು ಪ್ರತಿಪಾದಿಸಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಮತ್ತು ಬಸವಾದಿ ಶರಣರ ವಿಚಾರ ಧಾರೆಗಳ ಪರಿಪಾಲನೆಯಿಂದ ಜಗದಲ್ಲಿ ಶಾಂತಿ ಸಾಮರಸ್ಯ ಮೂಡಿ ಬರಲು ಸಾಧ್ಯವಾಗುತ್ತದೆ. ಬಸವಕಲ್ಯಾಣದಲ್ಲಿನಡೆದದಸರಾನಾಡಹಬ್ಬಅತ್ಯಂತಸಂಭ್ರಮಸಡಗರದಿಂದನಡೆದಿರುವುದು ತಮ್ಮಲ್ಲಿರುವಧರ್ಮಶ್ರದ್ಧೆಮತ್ತುಭಕ್ತಿಯಶಕ್ತಿಯೇಕಾರಣವಾಗಿದೆಎಂದುಹರುಷವ್ಯಕ್ತಪಡಿಸಿದಜಗದ್ಗುರುಗಳು ಸ್ವಧರ್ಮದಲ್ಲಿನಿಷ್ಠೆಮತ್ತುಪರಧರ್ಮದಲ್ಲಿಸಹಿಷ್ಣುತಾಮನೋಭಾವಹೊಂದಿಬಾಳಿದರೆಸಕಲರಿಗೂಸುಖಶಾಂತಿ ಪ್ರಾಪ್ತವಾಗುತ್ತದೆ ಎಂದರು. ಇಂದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಂಚೂಣಿಯಲ್ಲಿ ನಿಂತು ಶ್ರಮಿಸಿದ ಮಹಾತ್ಮ ಗಾಂಧೀಜಿ ಹಾಗೂ ಹಾಗೂ ದಕ್ಷ ಪ್ರಾಮಾಣಿಕ ಜನಪರ ಕಾಳಜಿ ಹೊಂದಿದ್ದ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜಯಂತಿ. ಅವರ ಸರಳತೆ ಸಾತ್ವಿಕ ಮನೋಭಾವ ಬೆಳೆಯುವ ಯುವ ಜನಾಂಗದಲ್ಲಿ ಮತ್ತು ರಾಜಕೀಯಧುರೀಣರಲ್ಲಿಬೆಳೆದುಬಂದರೆನಾಡುನುಡಿ ಶ್ರೀಮಂತಗೊಳ್ಳುವುದರಲ್ಲಿಯಾವುದೇಸಂದೇಹ ಇಲ್ಲಎಂದರು.ಸಮಾರಂಭಕ್ಕೂಮುನ್ನ ಶ್ರೀಬಸವೇಶ್ವರದೇವಸ್ಥಾನದಿಂದವೈಭವದಅಡ್ಡಪಲ್ಲಕ್ಕಿಪ್ರಾರಂಭಗೊಂಡು ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಸುಮಾರು 3 ಗಂಟೆಗಳ ಕಾಲ ಉತ್ಸವ ಜರುಗಿತು. ನಂತರ ತೇರು ಮೈದಾನದಲ್ಲಿ ನಿರ್ಮಿಸಿದ ಬನ್ನಿ ಮಂಟಪದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳುಶಮೀಪೂಜೆಸಲ್ಲಿಸಿದಿನ ನಿತ್ಯದಂತೆಅಕ್ಕಮಹಾದೇವಿಮಹಿಳಾ ವಿದ್ಯಾಲಯದಆವರಣದಲ್ಲಿರುವ ಮಾನವಧರ್ಮಮಂಟಪಕ್ಕೆಆಗಮಿಸಿ ಮಹಾತ್ಮ ಗಾಂಧೀಜಿ ಹಾಗೂ ಲಾಲಬಹದ್ದೂರಇವರಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.



**ಭಾರತ-ವೆಸ್ಟ್‌ಇಂಡಿಸ್ ಪ್ರಥಮ ಟೆಸ್ಟ್:ಭಾರತದ ಮಾರಕ ದಾಳಿಗೆ ತತ್ತರಿಸಿದ ವೆಸ್ಟ್ ಇಂಡಿಸ್ 162ಕ್ಕೆ ಆಲೌಟ್**

# ಸರ್ಕಾರದ ಯೋಜನೆ ಜಾರಿಗೆ ತರುವಲ್ಲಿ ಜನತೆಯ ಸಹಕಾರ ತುಂಬಾ ಮುಖ್ಯ : ಬಸವರಾಜ ರಾಯರೆಡ್ಡಿ



ಮಲ್ಲಮ್ಮ ನುಡಿವಾರ್ತೆ

ಕುಕನೂರ :ಅ.2: ತಾಲೂಕಿನ ಬಾನಾಪುರ ಗ್ರಾಮದ ಸಾಂಸ್ಕೃತಿಕ ಕಟ್ಟಡ ಹಾಗೂ ವಿದ್ಯುತ್ ದೀಪ ಅಳವಡಿಸುವಕಾಮಗಾರಿಶಂಕುಸ್ಥಾಪನೆ ಕಾರ್ಯಕ್ರಮ ಹಾಗೂ ತಳಕಲ್ ಗ್ರಾಮದ ಮಹದ್ವಾರ, ದ್ಯಾಮವ್ವನ ಕಟ್ಟಿ ಸಭಾಭವನ, ಹಾಗೂ ಇತರ ಅಭಿವೃದ್ಧಿ ಕೆಲಸಗಳ ಉದ್ಘಾಟನಾ ಕಾರ್ಯಕ್ರಮವನ್ನು ಮಂಗಳವಾರ ಸಂಜೆ ಹಮ್ಮಿಕೊಳ್ಳಲಾಯಿತು ಈ ವೇಳೆ ಸಂಸದ ರಾಜಶೇಖರ ಹಿಟ್ನಾಳ ಮಾತನಾಡುತ್ತ ಬಸವರಾಜ ರಾಯ–ರೆಡ್ಡಿ ಅವರ ಅಭಿವೃದ್ಧಿ ಪಥದ ದೃಷ್ಟಿಯಿಂದ ತಳಕಲ್ ಗ್ರಾಮಕ್ಕೆ ಹೊಸ ಅವತಾರವನ್ನೇ ಸೃಷ್ಟಿಸಿದ್ದು ಗ್ರಾಮದ ಮಹಾದ್ವಾರ, ಸಭಾಭವನ, ಆಂಜನೇಯ ದೇವಸ್ಥಾನದ ಅಭಿವೃದ್ಧಿ, ವಿಶೇಷ ಬೀದಿ ದೀಪ, ದೇವಸ್ಥಾನದ ಬಳಿ ಗಾರ್ಡನ್ ಸೇರಿದಂತೆ ಇತರೆ ಅಭಿವೃದ್ಧಿ ಕಾರ್ಯಗಳಿಂದ ಗ್ರಾಮಕ್ಕೆ ಹೊಸ ಲುಕ್ ನೀಡಿದ್ದು ಜೊತೆ–ಗೆ ತಳಕಲ್ ಗ್ರಾಮದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜನ್ನು ಯಾವ ಖಾಸಗಿ ಕಾಲೇಜು ಕಡಿಮೆ ಇಲ್ಲದಂತೆ ಅದ್ದೂರಿಯಾಗಿ ನಿರ್ಮಾಣಗೊಂಡಿರುವುದು ಅವರ ರಾಜಕೀಯ ಮುತ್ಸದ್ದಿತನಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಅವರೊಬ್ಬ ರಾಜ–ಕಾರಣದ ಗ್ರಂಥಾಲಯ ವಾಗಿದ್ದು ಯುವ ರಾಜಕಾರಣಿಗಳಿಗೆ ಇವರಿಂದ ತರಬೇತಿ ಸಿಕ್ಕಾಗ ದೇಶಕ್ಕೆ ಉತ್ತಮ ರಾಜಕಾರಣಿ ದೊರೆಯುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದರು.

ಆರ್ಥಿಕತೆ ಅಭಿವೃದ್ಧಿಯ ಚಿಂತನೆಯಲ್ಲಿ ರಾಜಕೀಯ ಅವರು ವಿಶೇಷ ಪರಿಣಿತಿಯನ್ನು ಹೊಂದಿದ್ದು ತಾವು ಪ್ರತಿನಿಧಿಸುತ್ತಿರುವ ಕ್ಷೇತ್ರದಲ್ಲಿ ಹೊಸ ಕೆರೆ ನಿರ್ಮಿಸುತ್ತ ಅಭಿವೃದ್ಧಿಯ ಹರಿಕಾರ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ ಎಂದು ಹೇಳಿದರು.

ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಮಾತನಾಡಿ ಯಾವುದೇ ಸಂಪನ್ಮೂಲಗಳಿಲ್ಲದ ಯಲಬುರ್ಗಾ ವಿಧಾನಸಭಾ ಕ್ಷೇತ್ರವನ್ನು ಮಾದರಿಯನ್ನಾಗಿಸುವ ಗುರಿಯನ್ನು ಹೊಂದಿದ್ದು ಈಗಾಗಲೇ ಕ್ಷೇತ್ರದ ಯಾವುದೇ ವಿದ್ಯಾರ್ಥಿಗಳಿಗೂ ಕೊರತೆ ಇಲ್ಲದಂತೆ ಶಿಕ್ಷಣದ ವ್ಯವಸ್ಥೆ ನೀಡಲಾಗಿದ್ದು ಇನ್ನು ಕ್ಷೇತ್ರದಲ್ಲಿ ಕೆರೆಗಳ ನಿರ್ಮಾಣ ಮಾಡಿ ಇಲ್ಲಿನ ರೈತರನ್ನು ಸಬಲರನ್ನಾಗಿ ಮಾಡುವ ಗುರಿ ಹೊಂದಿದ್ದೇವೆ, ಇದೆಲ್ಲದಕ್ಕೂ ಕ್ಷೇತ್ರದ ಪ್ರತಿಯೊಬ್ಬ ಪ್ರಜೆಯ ಸಹಕಾರ ಅವಶ್ಯಕತೆ ಇದ್ದು ಸರ್ಕಾರದ ಯೋಜನೆಗಳು ಜಾರಿಗೆ ತರುವಲ್ಲಿ ಜನತೆ ಸಹಕಾರ ಅವಶ್ಯಕತೆ ಇದೆ ಎಂದು ಹೇಳಿದರು.

ಈ ವೇಳೆಯಲ್ಲಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಬಸವರಾಜ ರಾಯರೆಡ್ಡಿ ಅವರ ಅದ್ದೂರಿ ಮೆರವಣಿಗೆಯನ್ನು ಗ್ರಾಮಸ್ಥರು ಆಯೋಜಿಸಿದ್ದರು.

ಪ್ರಮುಖರಾದ ಎಸ್ ಆರ್ ನವಲಿ ಹಿರೇಮಠ, ವೆಂಕಣ್ಣ ಯರಾಶಿ, ಹನುಮಂತ ಗೌಡ ಚಂಡೂರು, ಮಂಜುನಾಥ ಕಡೆಮನಿ, ಚಂದ್ರಶೇಖರಯ್ಯ ಹಿರೇಮಠ, ಸಂಗಮೇಶ ಗುತ್ತಿ, ಶರಣಪ್ಪ ಗಾಂಜಿ, ಹಂಪಯ್ಯಸ್ವಾಮಿ ಹಿರೇಮಠ, ತಿಮ್ಮಣ್ಣ ಚೌಡಿ, ಗ್ರಾಮ ಪಂಚಾಯತಿ ಅಧ್ಯಕ್ಷರು, ಸದಸ್ಯರು, ಅಭಿವೃದ್ಧಿ ಅಧಿಕಾರಿಗಳು, ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

# ದಸರಾ ಹಬ್ಬ ಪ್ರಯುಕ್ತ ಸೀಮೋಲ್ಲಂಘನ ಪೂಜೆ



ಮಲ್ಲಮ್ಮನುಡಿವಾರ್ತೆಕಮಲನಗರ:ಅ.2:ತಾಲೂಕಿನ ಡಿಗ್ಗಿ ಗ್ರಾಮದಲ್ಲಿ ದಸರಾ ಹಬ್ಬ ಪ್ರಯುಕ್ತ ಗುರುವಾರ ಗ್ರಾಮದ ಹೊರ ವಲಯದಲ್ಲಿ ಇರುವ ಬಾಬುರಾವ ಹರಪ್ಪಳೆ ಅವರ ಹೊಲದಲ್ಲಿ ಬನ್ನಿ ಗಿಡಕ್ಕೆ ಸೀಮೋಲ್ಲಂಘನ ಪೂಜೆ ಮಾಡಿ ದಸರಾ ಹಬ್ಬಕ್ಕೆ ಚಾಲನೆ ನೀಡಲಾಯಿತು. ಸೀಮೋಲ್ಲಂಘನ ಎನ್ನುವುದು ದಸರಾ ಹಬ್ಬದ ಅಂಗವಾಗಿ ನಡೆಸುವ ಪೂಜಾ ಕಾರ್ಯಕ್ರಮವಾಗಿದ್ದು, ಬನ್ನಿ ಮರಕ್ಕೆ ಪೂಜೆ ಸಲ್ಲಿಸಿ ಬಾಣ ಬಿಡುವ ಸಂಪ್ರದಾಯವಾಗಿದೆ. ಈ ಆಚರಣೆಯು ಮುಖ್ಯವಾಗಿ ಶಸ್ತ್ರಾಸ್ತ್ರಗಳ ಪೂಜೆ, ಶೌರ್ಯ ಪ್ರದರ್ಶನ ಮತ್ತು ಸೀಮಾ ಉಲ್ಲಂಘನೆಯ ಸಂಕೇತವಾಗಿದೆ. ಇದು ಹಿಂದೆ ರಾಜರು ಮತ್ತು ಸೈನಿಕರು ಯುದ್ಧ–ಕ್ಕೆ ಹೊರಡುವ ಮುನ್ನ, ಅಥವಾ ತಮ್ಮ ಗಡಿಗಳನ್ನು ವಿಸ್ತರಿಸುವ ಮೊದಲು ನಡೆಸುತ್ತಿದ್ದ ಒಂದು ಸಾಂಕೇತಿಕ ಆಚರಣೆಯಾಗಿದೆ. ಈ ಪರಂಪರೆಯನ್ನು

ಡಿಗ್ಗಿ ಗ್ರಾಮಸ್ಥರು ಪ್ರತಿ ವರ್ಷ ದಸರಾ ಹಬ್ಬದಿನ ಆಚರಣೆ ಮಾಡುವರು, ಸಂಜೆ ಹೊತ್ತಿಗೆ ಗ್ರಾಮದ ಹಿರಿಯರು ಯುವಕರು

ಭಾಜಾ ಬಂಜಂತ್ರಿ ಯೊಂದಿಗೆ ತೆರಳಿ, ಬನ್ನಿ ಮತ್ತು ಅಪ್ಪಟೆ ಗಿಡದ ಎಲೆಗಳನ್ನು ತೆಗೆದುಕೊಂಡು ಪರಸ್ಪರ ವಿನಿಮಯ ಮಾಡಿಕೊಂಡು ದಸರಾ ಹಬ್ಬದ ಶುಭಕೋರಿ ಸಂಭ್ರಮದಿಂದ ಆಚರಣೆ ಮಾಡಲಾಯಿತು.

## PROCLAMATION CUM DECLARATION

Herein I, SALEHA BEGUM D/o ISMAIL SAB R/o BASAVAKAYAN do hereby declare thata my husband by ABDUL KHADAR S/o ABDUL AZIZ R/o BASAVAKALYAN has given divorce to me through DIVORCE AGREEMENT DEED executed by him on dtd.30th day of JULY 2024. Thus now there is no relationship of husband and wife among him and me. Hence this declaration.

**DECLARANT**
**SALHEA BEGUM DO ISMAILSAB**
**R/o BASAVAKALYAN.**

# ಶಿವಯೋಗ ನಿಜವಾದ ಸಾಧನೆ ಪ್ರಕ್ರಿಯೆ




ಮಲ್ಲಮ್ಮ ನುಡಿ ವಾರ್ತೆ ಬೀದರ. ಅ. 02 : ಶಿವಯೋಗ ನಿಜವಾದ ಸಾಧನೆ ಪ್ರಕ್ರಿಯೆ ಆಗಿದೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪ ನಿರ್ದೇಶಕ ಮಂಜುನಾಥ ಸುಳೊಳ್ಳಿ ಹೇಳಿದರು.

ನಗರದ ಬಸವಗಿರಿಯಲ್ಲಿ ಮರಣವೇ ಮಹಾನವಮಿ ಹಾಗೂ ಕಲ್ಯಾಣ ಕ್ರಾಂತಿ ವಿಜಯೋತ್ಸವ ಅಂಗವಾಗಿ ನಡೆದ ಇಷ್ಟಲಿಂಗ ತಾಂತ್ರಿಕತೆ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಜ್ಞೆಸಹಿತವಾಗಿ ಬ್ರಹ್ಮಾಂಡದ ರಹಸ್ಯ ಅರಿಯಲು ಶರಣರ ಶಿವಯೋಗ ಮಾರ್ಗದಲ್ಲಿ ತೊಡಗಬೇಕು. ಆಕಳ ತುಪ್ಪದ ಕಾಡಿಗೆ, ಸಿಲಿಕಾನ್‌ಗಳಿಂದ ತಯಾರಾದ ಇಷ್ಟಲಿಂಗ ದೃಷ್ಟಿಯೋಗ–ಕ್ಕೆ ಪೂರಕವಾಗಿ ವಿಶ್ವ ಶಕ್ತಿಯನ್ನು ಹೀರಿಕೊಳ್ಳುವ ಸಾಮರ್ಥ್ಯ ಪಡೆದಿದೆ ಎಂದು ತಿಳಿಸಿದರು.

ಇಷ್ಟಲಿಂಗ ಯಂತ್ರ ಹಾಗೂ ತಂತ್ರ ಎರಡೂ ಹೌದು. ಇಷ್ಟಲಿಂಗವಿದ್ದರೆ ಬೇರೇನೂ ಚಿಂತಿಸಬೇಕಿಲ್ಲ. ಯುವ ಸಮುದಾಯಕ್ಕೆ ಶಿವಯೋಗದ ರುಚಿ ಹಚ್ಚಬೇಕಾಗಿದೆ ಎಂದು ಹೇಳಿದರು.

ಶಿವಯೋಗಮಾರ್ಗದಲ್ಲಿರುವವರು ತಪ್ಪು ದಾರಿಗೆ ಹೋಗಲಾರರು. ಅಸಂಖ್ಯಾತರಲ್ಲಿ ಶಿವಯೋಗ ಜಾಗೃತಿ ಮೂಡಿಸಿದ ಅಕ್ಕ ಅನ್ನಪೂರ್ಣತಾಯಿ ಅವರ ಕಾರ್ಯ ಪ್ರಶಂಸನೀಯ ಎಂದರು.

ಶಿವಯೋಗ ಸಾಧಕ ಮಲ್ಲಿಕಾರ್ಜುನ ರಟಕಲೆ ಮಾತನಾಡಿ, ಅಕ್ಕ ಅನ್ನಪೂರ್ಣತಾಯಿ ಅವರ ಮಾರ್ಗದರ್ಶನದಿಂದ ಹಲವು ಗಂಟೆಗಳ ಕಾಲ ಶಿವಯೋಗದಲ್ಲಿ ಮಗ್ನನಾಗುವ ಕಲೆ ನನಗೆ ಕರಗತವಾಗಿದೆ ಎಂದು ತಿಳಿಸಿದರು.

ಕಾಲವನರಿಯದೆ ಮತ್ತು ದೇಶವನರಿಯದೆ ಲಿಂಗಪೂಜೆಗೈಯ್ಯುವುದು ಮುಖ್ಯ. ಶಿವಯೋಗದಿಂದ ಶರೀರ ಹಗುರವಾಗಿ, ರೋಗ ಮುಕ್ತವಾಗುತ್ತದೆ ಎಂದು ಹೇಳಿದರು.

ಸಾನಿಧ್ಯ ವಹಿಸಿದ್ದ ಪರುಷ ಕಟ್ಟೆಯ ಚನ್ನಬಸವಣ್ಣ ಮಾತನಾಡಿ, ಸುತ್ತ ಮುತ್ತೆಲ್ಲ ಮುಕ್ತಿ ಚೆಲ್ಲಿದೆ. ಅದು ಗುರು ತೋರಿದರೆ ಮಾತ್ರ ಕಾಣುವುದು. ಮಾಯೆ, ಮೋಹದಲ್ಲಿರುವವರು ದೇವರನ್ನು ಕಾಣಲಾರರು. ಸತ್ಯದ ದಾರಿಯಲ್ಲಿರುವವರಿಗೆ ದೇವನೊಲುಮೆ ಸಾಧ್ಯ ಎಂದು ಹೇಳಿದರು.

ಬಸವಣ್ಣನವರು ಇಷ್ಟಲಿಂಗದ ಮೂಲಕ ಜಾತಿ ಅಳಿಸಲು ಹೋರಾಡಿದರೆ ಇಂದಿನ ಸರ್ಕಾರ ಜಾತಿ ಗಣತಿ ನಡೆಸಿ ಜಾತಿ ವ್ಯವಸ್ಥೆಯನ್ನು ಗಟ್ಟಿಗೊಳಿಸುತ್ತಿರುವುದು ದುರದೃಷ್ಟಕರ. ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕನೆಂದು ಒಪ್ಪಿಕೊಂಡ ಸರ್ಕಾರ ಜಾತಿ ಅಳಿಸಲು ಕ್ರಮ ಕೈಗೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಸಿದ್ಧೇಶ್ವರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷೆ ಶಾಂತಾ ಜೈರಾಜ ಖಂಡ್ರೆ ಮಾತನಾಡಿ, ಲಿಂಗಾಯತ ಧರ್ಮದ ಲಾಂಛನ ಇಷ್ಟಲಿಂಗ. ಅದು ಅರಿವಿನ ಕುರುಹು. ಏಕ ಪ್ರಕಾರವಾಗಿ ತೈಲ ಧಾರೆಯಂತೆ ಅನುಸಂಧಾನ ಮಾಡಿದರೆ ಅದರ ಲಾಭ ಸಿಗುತ್ತದೆ ಎಂದು ತಿಳಿಸಿದರು.

ನೀಲಮ್ಮನ ಬಳಗದ ಮಧುಲತಾ ಖಪಲೆ, ಶಿವಲೀಲಾ ಹೊಕ್ರಾಣೆ, ಶರಣಪ್ಪ ರಾಗಾ, ಸಾಹಿತಿ ರಮೇಶ ಮಠಪತಿ ಇದ್ದರು.

ನೀಲಮ್ಮನ ಬಳಗದ ಶ್ಯಾಮಲಾ ಎಲಿ ಹಾಗೂ ನೀಲಮ್ಮ ರೂಗನ್ ವಚನ ಗಾಯನ ಮಾಡಿದರು. ಬಸವ ಚಿಕಲಿಂಗೆ ನಿರೂಪಿಸಿದರು. ಶಿವಕುಮಾರ ಪಾಖಾಲ್ ಸ್ವಾಗತಿಸಿದರು. ರೇಣುಕಾ ಭಕ್ತರಾಜ ಖಂಡ್ರೆ ಭಕ್ತಿ ದಾಸೋಹಗೈದರು

# ಅದ್ದೂರಿಯಾಗಿ ಜರುಗಿದ ಚಿಲಕಮುಖಿ ಹುಲಿಗೇಮ್ಮ ದೇವಿ ರಥೋತ್ಸವ

ಮಲ್ಲಮ್ಮ ನುಡಿವಾರ್ತೆ

ಕೊಪ್ಪಳ :ಅ.2: ಜಿಲ್ಲೆಯ ಕೊಪ್ಪಳ ತಾಲ್ಲೂಕಿನ ಚಿಲಕಮುಖಿ ಗ್ರಾಮದಲ್ಲಿ ಮಹಾನವಮಿ ಹಬ್ಬದ ನಿಮಿತ್ತವಾಗಿ ಪ್ರತಿವರ್ಷದಂತೆ ಈ ವರ್ಷವೂ ಕೂಡ ದೇವಿ ಹುಲಿಗೆಮ್ಮ ದೇವಿಯ ಜಾತ್ರೆಯು ಅದ್ದೂರಿಯಾಗಿ ಜರುಗಿತು. ದಸರಾ ಹಬ್ಬದ 9 ದಿನಗಳ ಕಾಲ ದೇವಿಗೆ ವಿಶೇಷ ಅಲಂಕಾರ ಪೂಜಾ ವಿಧಿ ವಿಧಾನಗಳು ಜರುಗಿದವು, ನಿನ್ನೆ ಸಂಜೆ ವಿವಿಧ ಹೂವುಗಳಿಂದ ಅಲಂಕೃತವಾದ ರಥೋತ್ಸವದಲ್ಲಿ ಹುಲಿಗೇಮ್ಮ ದೇವಿಯ ಮೂರ್ತಿ ಪ್ರತಿಷ್ಠಾಪಿಸಿ ಭಕ್ತರು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಹೂವು, ಹಣ್ಣು, ಉತ್ತತ್ತಿಯನ್ನು ಭಕ್ತಿಯಿಂದ ಸಮರ್ಪಿಸಿ ಹರಕೆ ತೀರಿಸಿದರು. ರಥೋತ್ಸವ ಜರುಗಿದ ನಂತರ ಊರಿನ ಪ್ರತಿ ಬೀದಿಯಲ್ಲೂ ಪಲ್ಲಕ್ಕಿ ಉತ್ಸವದ ಮೆರವಣಿಗೆ ಸಾಗಿ ಭಕ್ತರಿಗೆ ಆಶಿರ್ವದಿಸಲಾಯಿತು. ಇದೇ ವೇಳೆ ಡೊಳ್ಳು ಮಜಲು, ಕಳಸ, ಮಂಗಳವಾದ್ಯ ಮೊಳಗಿದವು. ಕಾರ್ಯಕ್ರಮದಲ್ಲಿ ಊರಿನ ಹಿರಿಯರಾದ ಕನಕಪ್ಪ ಪೂಜಾರ್ , ಯಮನೂರಪ್ಪ, ಬಸವರಾಜ, ರಾಮಣ್ಣ, ಮಹೇಶ್ ಭೋವಿ, ಹನುಮೇಶ್, ಈಶಪ್ಪ ಪೂಜಾರ, ಮಂಜಪ್ಪ, ಪುತ್ರಪ್ಪ, ಬಸಣ್ಣ ಹಾಗೂ ಊರಿನ ಗಣ್ಯರು, ಯುವಕರು



ಸಂಘ ಸಂಸ್ಥೆಯ ಸೇವಾರ್ಥಿಗಳು ಉಪಸ್ಥಿತಿ ಇದ್ದರು.

# ನೈಟ್ ಟರ್ಫ್ ಕ್ರಿಕೆಟ್ ಟ್ರೋಫಿಗೆ ಡಾ. ಕೆ.ಎಂ.ಸೈಯದ್ ಚಾಲನೆ



ಮಲ್ಲಮ್ಮ ನುಡಿವಾರ್ತೆ

ಕೊಪ್ಪಳ :ಅ.2: ನಗರದ ಗದಗ ರಸ್ತೆಯ ಶಿಲ್ಪಾ ಗ್ರಾಂಡ್ ಹೋಟೆಲ್ ಪಕ್ಕದಲ್ಲಿ ನೈಟ್ ಟರ್ಫ್ ಕ್ರಿಕೆಟ್ ಟ್ರೋಫಿಗೆ ಕೆಪಿಸಿಸಿ ಸಂಯೋಜಕ ಹಾಗೂ ಸೈಯದ್ ಫೌಂಡೇಶನ್ ಅಧ್ಯಕ್ಷ ಡಾ.ಕೆ.ಎಂ. ಸೈಯದ್ ಚಾಲನೆ ನೀಡಿದರು.

ನಂತರ ಮಾತನಾಡಿ ಕ್ರಿಕೆಟ್ ಎಲ್ಲರ ಅಚ್ಚುಮೆಚ್ಚಿನ ಆಟವಾಗಿದ್ದು, ಕ್ರೀಡೆ ದೈಹಿಕ ಮಾನಸಿಕ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ, ಕ್ರೀಡೆಯಲ್ಲಿ ಸೋಲು ಗೆಲುವು ಮುಖ್ಯವಲ್ಲ ಪಾಲ್ಗೊಳ್ಳುವುದು ಮುಖ್ಯ ಎಂದರು.

ಪಲ್ಲೆದರ ಓಣಿಯ ಶಂಕರ ಪಾಟೀಲ್ ಮತ್ತು ಜಹೀರ್ ಹುಸೈನಿಯವರು ನೈಟ್ ಟರ್ಫ್ ಕ್ರಿಕೆಟ್ ಟ್ರೋಫಿಯ ಆಯೋಜಿಸಿದ್ದರು.

ಈ ಸಂದರ್ಭದಲ್ಲಿ ಮುಖಂಡರಾದ ಸೈಯದ್ ನಾಸೀರ್ ಹುಸೇನ್, ಯುವ ಮುಖಂಡ ರವಿಚಂದ್ರ ಮಾಲಿ ಪಾಟೀಲ್ ಓಜಿನಹಳ್ಳಿ, ಜಹೀರ್ ಹುಸೇನ್ , ಕ್ರೀಡಾ ಪ್ರೇಮಿಗಳು ಪಾಲ್ಗೊಂಡಿದ್ದರು.

# ಕೊಪ್ಪಳದಲ್ಲಿ ಕಾಂತಾರ ಚಿತ್ರ ವೀಕ್ಷಣೆಗೆ ನೂಕು ನುಗ್ಗಲು



ಮಲ್ಲಮ್ಮ ನುಡಿವಾರ್ತೆ

ಕೊಪ್ಪಳ :ಅ.2: ನಗರದ ಶ್ರೀ ಲಕ್ಷ್ಮಿ ಚಿತ್ರಮಂದಿರದಲ್ಲಿ ನಾಯಕ ನಟ ರುಷಭ ಶೆಟ್ಟಿ ಅಭಿನಯದ ಚಿತ್ರ ಕಾಂತಾರ ವೀಕ್ಷಣೆಗೆ ಹರಿದು ಬಂದ ಜನಸಾಗರ ನೂಕು ನುಗ್ಗಲು ಉಂಟಾಯಿತು.

ಇಂದು ಕಾಂತಾರ ಚಿತ್ರ ವಿಶ್ವದಾದ್ಯಂತ ಬಿಡುಗಡೆಗೊಂಡಿದ್ದು ಇದು ಕಾಂತಾರ ಚಾಪ್ಟರ್ ಫಸ್ಟ್ ಆಗಿದ್ದು ಈಗಾಗಲೇ ಮೊದಲು ಕಾಂತಾರ ಚಿತ್ರ ಪ್ರೇಕ್ಷಕರ ಮನಗೆದ್ದಿತ್ತು ಹೀಗಾಗಿ ಚಿತ್ರ ವೀಕ್ಷಣೆಗೆ ಬಹಳಷ್ಟು ಜನ ಅಭಿಮಾನಿಗಳು ಜಮಾಯಿಸಿದ್ದರು.

ಚಿತ್ರದ ಮೊದಲ ಪ್ರದರ್ಶನಕ್ಕೆ ಕೊಪ್ಪಳದ ಕರಾವಳಿ ಬಳಗ ಕರಾವಳಿಯ ಸಾಂಪ್ರದಾಯಿಕ ಉಡುಗೆ ತೊಟ್ಟು ಚಿತ್ರಮಂದಿರಕ್ಕೆ ಆಗಮಿಸಿ ಕರಾವಳಿಯ ಸಾಂಪ್ರದಾಯಿಕ ಪೂಜೆಯನ್ನು ನೆರವೇರಿಸಿದರು.

ನಂತರ ಕರಾವಳಿ ಬಳಗದ ಶಶಿಕರ್ ಶೆಟ್ಟಿ ಮಾತನಾಡಿ ಕಾಂತಾರ ಚಿತ್ರ ವಿಶ್ವದಾದ್ಯಂತ ಇಂದು ಬಿಡುಗಡೆಗೊಂಡಿದ್ದು ಚಿತ್ರ ಯಶಸ್ವಿಯಾಗಲಿ ಎಂದು ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಶ್ರೀ ಲಕ್ಷ್ಮಿ ಚಿತ್ರಮಂದಿರದ ಮಾಲೀಕರಾದ ವೀರೇಶ್ ಮಹಾಂತಯ್ಯನ ಮಠ, ವಿಶ್ವನಾಥ್ ಮಹಾಂತಯ್ಯನ ಮಠ, ವ್ಯವಸ್ಥಾಪಕ

'ಶಿವಾನಂದಯ್ಯ ಉತ್ತಂಗಿ ಮಠ, ಕರಾವಳಿ ಬಳಗದ ಪ್ರವೀಣ್ ಶೆಟ್ಟಿ, ಕರುಣಾಕರ ಶೆಟ್ಟಿ, ದಿನೇಶ್ ಶೆಟ್ಟಿ, ಬೋಜು ಪೂಜಾರಿ ಸೇರಿದಂತೆ ಸದಸ್ಯರು ಉಪಸ್ಥಿತರಿದ್ದರು.

# ಹಾದಿ ಬಸವೇಶ್ವರ ದೇವಸ್ಥಾನಕ್ಕೆ ಕ್ರೇನ್ ಡಿಕ್ಕಿ 1 ಕೋಟಿಗೂ ಅಧಿಕ ಹಾನಿ



ಮಲ್ಲಮ್ಮ ನುಡಿವಾರ್ತೆ

ಕೊಪ್ಪಳ:ಅ.2:ಜಿಲ್ಲೆಯ ಯಲಬುರ್ಗಾ ತಾಲೂಕಿನ ಮಂಡಲಮರಿ ಗ್ರಾಮ ಶ್ರೀ ಹಾದಿ ಬಸವೇಶ್ವರ ದೇವಸ್ಥಾನ ಕ್ಕೆ ವಿಂಡ ಕಂಪನಿಯ ದೋರಕೇಶ ಟ್ರಾನ್ಸಪೋರ್ಟ ಕಾರ್ಪೊರೇಷನ್ ಕಂಪನಿಯ ಕ್ರೇನ್ ಮದ್ಯ ರಾತ್ರಿ 1 ಘಂಟೆಗೆ ಢಿಕ್ಕಿ ಹೊಡೆದ ಹಿನ್ನಲೆಯಲ್ಲಿ ದೇವಸ್ಥಾನ ಕಂಬಗಳು ಮೆಲ್ಚಾವಣಿ ,ಹಾಗೂ ಲೋಕೋಪಯೋಗಿ ಇಲಾಖೆಯ ಬೋರ್ಡು, ಮೂರು ವಿದ್ಯುತ್ ಕಂಬಗಳು ಮುರಿದು ಬಿದು 1 ಕೋಟಿಗೂ ಅಧಿಕ ಹಾನಿ ಆಗಿದೆ ಆದರೆ ಯಾವುದೇ ಜೀವ ಹಾನಿಯಾಗಿಲ್ಲ ಮಂಡಲಮರಿ ಗ್ರಾಮವು ಕೊಪ್ಪಳ ಕುಷ್ಟಗಿ ಮುಖ್ಯ ರಸ್ತೆಯ ಕ್ರಾಸ್ನಲ್ಲಿ ಹಾದಿ ಬಸವೇಶ್ವರ ದೇವಸ್ಥಾನವನ್ನು ಗ್ರಾಮಸ್ಥರು ಬಹುದಿನಗಳಿಂದ ಹಣವನ್ನು ಸಂಗ್ರಹಿಸಿ ಹಲವಾರು ವರ್ಷಗಳ ಶ್ರಮವಹಿಸಿ ಸು 4–5 ವರ್ಷಗಳಿಂದ ದೇವಸ್ಥಾನ ವನ್ನು ಕಟ್ಟಲಾಗಿದೆ ಈ ದೇವಸ್ಥಾವನ್ನು ಮರು ನಿರ್ಮಾಣ ಮಾಡಲು ಸುಮಾರು 1 ರಿಂದ 1.50 ಕೋಟಿ ಕರ್ಚಾಗುತ್ತದೆ ಗುಜರಾತ ಮೂಲದ ವಿಂಡ ಕಂಪನಿಯ ದೊರಕೇಶ ಟ್ರಾನ್ಸಪೋರ್ಟ ಕಾರ್ಪೊರೇಷನ್ ಕಂಪನಿಯ ವಾಹನ ಡಿಕ್ಕಿ ಹೊಡೆದಾಗ ವಿದ್ಯುತ್ ಕಂಬ ಮುರಿದು ಬಿದ್ದಾಗ ವಿದ್ಯುತ್ ನಿಂದ ಡ್ರೈವರ ಅಪಾಯದಿಂದ ಪಾರಾಗಿದ್ದು ಗ್ರಾಮಸ್ಥರು ಸೇರಿ ದೇವಸ್ಥಾನ ಮರು ನಿರ್ಮಾಣ ಮಾಡಬೇಕಾದರೆ 1.50 ಕೊಟಿ ಕೊಡಬೇಕು ಎಂದು ಗ್ರಾಮಸ್ಥರು ಸೇರಿ ದೇವಸ್ಥಾನದ ಮುಂದೆ ಪ್ರತಿಭಟನೆ ಮಾಡಿದ್ದಾರೆ.

ಹಾದಿ ಬಸವೇಶ್ವರ ದೇವಸ್ಥಾನ ಬಹುದಿನಗಳಿಂದ ಕಷ್ಟಪಟ್ಟು ಸು 1 ಕೊಟಿ ರೂಪಾಯಿ ಕರ್ಚು ಮಾಡಿ ಬಿಜಾಪುರ ಕಡೆಯಿಂದ ಕಲ್ಲು ತಂದು ಕೆತ್ತನೆ ಮಾಡಿ ನಿರ್ಮಾಣ ಮಾಡಲಾಗಿತ್ತು ಈ ಕಂಪನಿಯವರು 1 .50 ಕೊಟಿ ಹಣ ಕೊಡಬೇಕು ಇಲ್ಲವೆ ದೇವಸ್ಥಾನ ಅವರೆ ಮುಂದೆ ನಿಂತ್ತು ಗೊಪುರವದರಗೆ ಕಟ್ಟಿಸಿಕೊಡಬೇಕು ಎಂದ

ಗ್ರಾಮಸ್ಥರಾದ

**ಶರಣಪ್ಪ ಮೆಣೆದಾಳ, ನಾಗಪ್ಪ ಕನಕಗಿರಿ, ಗಂಗಪ್ಪ ಜೂಲಕಟ್ಟಿ, ಯಮನಪ್ಪ ಕಾಗಿ , ಗುರುನಾಥ ಗಡ್ಡದ ವೀರನಗೌಡ ಪೋ ಪಾ ಇತರರು ಆಗ್ರಹವಾಗಿದೆ.**

# 20 ನೇ ವರ್ಷದ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಹಾಗೂ 39 ನೇ ಜನ್ಮದಿನೋತ್ಸವ



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ : ಅ 2: ಇಲ್ಲಿನ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಾಚಾರ್ಯ ಗವಿಮಠದಲ್ಲಿ ತಿಪುರಾಂತಿನ ಪೂಜ್ಯ ಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ 20ನೇ ವರ್ಷದ ಪಟ್ಟಾಧಿಕಾರ ವರ್ಧಂತಿ ಮಹೋತ್ಸವ ಹಾಗೂ 39ನೇ ಜನ್ಮದಿನೋತ್ಸವ ಗವಿಮಠದಲ್ಲಿ. ಸರಳವಾಗಿ ಆಚರಿಸಲಾಯಿತು. ಕಾರ್ಯಕ್ರಮವನ್ನು ಉದ್ಘಾಟನೆ ಆಶೀರ್ವಚನ ನೀಡಿ ಈ ಸಮಾಜದ ಭಕ್ತಾದಿಗಳೇ ನಮ್ಮ ನಿಜವಾದ ಆಸ್ತಿ ಎಂದು ಹೇಳಿ ತಾಯಿ ತಂದೆ ಹಾಗೂ ಗುರುಗಳ ಸೇವೆ ಮುಖಾಂತರ ಸಮಾಜದ ಸೇವೆ ಮಾಡುತ್ತಾ ತಮ್ಮ ಜೀವನವನ್ನು ಪವಿತ್ರ ಮಾಡಿಕೊಳ್ಳಬೇಕೆಂದು ಭಕ್ತರಿಗೆ ತಿಳಿಸಿದರು. ಅಧ್ಯಕ್ಷತೆ ಸಿದ್ದು ಉಳ್ಳೆ. ಮುಖ್ಯ ಅತಿಥಿಗಳಾಗಿ ಶಿವಲಿಂಗ್ ಸ್ವಾಮಿ.

ಅತಿಥಿಗಳಾಗಿ

ಲಕ್ಷ್ಮಿ ಪುತ್ರ ನಿಂಬಾಳಕರ್. ಈ ಸಂದರ್ಭದಲ್ಲಿ ಜಗದೀಶ್ ಪಾಟೀಲ್ ಹರ್ಸೂರ್, ಅನಿಲ್ ಪಾಟೀಲ್ ಚಿಕ್ಕನಗಾಂವ್, ಸಂದೀಪ್ ಪಾಟೀಲ್, ಸುನಿಲ್ ಚಪಾತಿ. ಎ ಜಿ ಪಾಟೀಲ್. ಚೆನ್ನಪ್ಪ ಹಳ್ಳಿಕಟ್ಟಿ. ಗುರುಲಿಂಗಯ್ಯ ಹಲ್ಕಾಂತಿಮಠ. ಶ್ರೀಕಾಂತ್ ಬಡದಾಳೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಬಸವಂತಲವಾರೆ ಸ್ವಾಗತಿಸಿದರು. ಮೇಘನ ಹಿರೇಮಠ ಪ್ರಾರ್ಥನೆ ಗೀತೆ. ಮಲ್ಲಿಕಾರ್ಜುನ ಅಲಗುಡಿ ನಿರೂಪಿಸಿದರು. ಅನೇಕ ಭಕ್ತರು ಭಾಗವಹಿಸಿ ದರ್ಶನ್ ಆಶೀರ್ವಾದ ಪಡೆದರು.

# ಬಾಪೂಜಿ ಪ್ರಬಂಧ ಸ್ಪರ್ಧೆ: ಒಂಭತ್ತು ಜನ ವಿದ್ಯಾರ್ಥಿಗಳಿಗೆ ನಗದು ಬಹುಮಾನ, ಪ್ರಮಾಣ ಪತ್ರ ವಿತರಣೆ

ಕಲಬುರಗಿ,ಅ.2– ಮಹಾತ್ಮ ಗಾಂಧೀಜಿ ಅವರ 156ನೇ ಜನ್ಮ ವರ್ಷಾಚರಣೆ ಅಂಗವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ವಿದ್ಯಾರ್ಥಿ, ಯುವಜನರಲ್ಲಿ ಮಹಾತ್ಮ ಗಾಂಧೀಜಿಯವರ ಬದುಕು, ಸ್ವಾತಂತ್ರ ಚಳುವಳಿ, ಸರಳತೆ, ಅಹಿಂಸಾ ಮಾರ್ಗ, ಸಹಬಾಳ್ವೆ, ಅಸ್ಪೃಶ್ಯತೆ ನಿವಾರಣೆಗೆ ನಡೆಸಿದ ಪ್ರಯೋಗಗಳು ಮೊದಲಾದ ವಿಷಯಗಳ ಕುರಿತು ಶಾಲಾ–ಕಾಲೇಜುಗಳ ಮಕ್ಕಳಿಗೆ ಆಯೋಜಿಸಿದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ 9 ಜನ ವಿದ್ಯಾರ್ಥಿಗಳಿಗೆ ಗುರುವಾರ ಕಲಬುರಗಿ ನಗರದ ಕನ್ನಡ ಭವನದಲ್ಲಿ ಜರುಗಿದ ಮಹಾತ್ಮ ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ಮತ್ತು ನಗದು ಬಹುಮಾನ ನೀಡಿ ಗವರವಿಸಲಾಯಿತು.

ಪ್ರೌಢ ಶಾಲೆ ವಿಭಾಗದಿಂದ ವಿಜೇತರಾದ ಚಿತ್ತಾಪುರ ತಾಲೂಕಿನ ರಾವೂರ ಅಲ್ಪಸಂಖ್ಯಾತರ ಮೋರಾರ್ಜಿ ದೇಸಾಯಿ ವಸತಿ ಶಾಲೆಯ 10ನೇ ತರಗತಿ ವಿದ್ಯಾರ್ಥಿ ಕು.ಪ್ರದೀಪ್ ಪಿ.ಕೆ. ಅವರಿಗೆ ಪ್ರಥಮ, ಕಲಬುರಗಿ ತಾಲೂಕಿನ ಫರತಾಬಾದ ಸರ್ಕಾರಿ ಪ್ರೌಢ ಶಾಲೆಯ 9ನೇ ತರಗತಿ ವಿದ್ಯಾರ್ಥಿನಿ ಕು.ಮಾಣಿಕಮ್ಮ ಎಸ್. ಅವರಿಗೆ ದ್ವಿತೀಯ ಹಾಗೂ ಚಿತ್ತಾಪುರ ತಾಲೂಕಿನ ಹೊನಗುಂಟಾ ಸರ್ಕಾರಿ ಪ್ರೌಢ ಶಾಲೆಯ 9ನೇ ತರಗತಿ ವಿದ್ಯಾರ್ಥಿನಿ ಕು.ವಿಜಯಲಕ್ಷ್ಮೀ ಎಚ್. ಅವರಿಗೆ ತೃತೀಯ ಬಹುಮಾನ ನೀಡಲಾಯಿತು.

ಪದವಿ ಪೂರ್ವ ವಿಭಾಗದಿಂದ ಕಲಬುರಗಿಯ ಸರ್ಕಾರಿ ಪದವಿ ಪೂರ್ವ ಕಾಲೇಜು (ಎಂ.ಪಿ.ಎಚ್.ಎಸ್.) ಕಲಾ ವಿಭಾಗದ ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿನಿ ಕು. ಭಾಗ್ಯಲಕ್ಷ್ಮೀ ತಂದೆ ಅಶೋಕ ಅವರಿಗೆ ಪ್ರಥಮ, ಕಲಬುರಗಿಯ ಬಾಲಕೀಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕಲಾ ವಿಭಾಗದ ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿನಿ ಕು. ಶಿವಾನಿ ತಂದೆ ಮಲ್ಲಿಕಾರ್ಜುನ

ಅವರಿಗೆ ದ್ವಿತೀಯ ಹಾಗೂ ಚಿತ್ತಾಪುರ ತಾಲೂಕಿನ ರಾವೂರ ಅಲ್ಪಸಂಖ್ಯಾತರ ಮೋರಾರ್ಜಿ ದೇಸಾಯಿ ವಸತಿ

ಕಾಲೇಜಿನ ವಿಜ್ಞಾನ ವಿಭಾಗದ ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿನಿ ಕು. ತೈರುಮ್‌ನಿಸಾ ತಂದೆ ಖಾಸಿಮ್‌ಸಾಬ್ ಅವರಿಗೆ ತೃತೀಯ ಸ್ಥಾನದ ಬಹುಮಾನ ನೀಡಿ ಸತ್ಕರಿಸಲಾಯಿತು.

## ಬೋಂತಿ ತಾಂಡಾದಲ್ಲಿ ಸಂಭ್ರಮದ ವಿಜಯದಶಮಿ
## ಬನ್ನಿ ಹಂಚಿ ಶುಭ ಕೋರಿದ ಶಾಸಕ ಪ್ರಭು ಚವ್ಹಾಣ



ಮಲ್ಲಮ್ಮ ನುಡಿವಾರ್ತೆ ಔರಾದ:ಅ.2:ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಸ್ವಗ್ರಾಮ ಬೋಂತಿ ತಾಂಡಾದಲ್ಲಿ ವಿಜಯದಶಮಿ ಹಬ್ಬವನ್ನು ಅ.2ರಂದು ಗ್ರಾಮಸ್ತರೊಂದಿಗೆ ಸಡಗರ,ಸಂಭ್ರಮದಿಂದ ಆಚರಿಸಿದರು.

ಬೆಳಗ್ಗೆ ಗ್ರಾಮದಲ್ಲಿರುವ ಇಚ್ಛಾಪೂರ್ತಿ ಮಾತಾ ಜಗದಂಬಾ ದೇವಸ್ಥಾನ, ಸಂತ ಸೇವಾಲಾಲ್ ಮಹಾರಾಜ್ ಹಾಗೂ ಪೂಜ್ಯ ರಾಮರಾವ್ ಮಹಾರಾಜರ ದೇವಸ್ಥಾನದಲ್ಲಿ ವಿಶೇಷ ಪೂಜೆ ನೆರವೇರಿಸಿದರು. ನಂತರ ಶಾಸಕರು ಮನೆ-ಮನೆಗೆ ತೆರಳಿ ಬನ್ನಿ ವಿತರಿಸಿ ವಿಜಯದಶಮಿಯ ಶುಭಾಶಯ ಕೋರಿದರು.

ಈ ವೇಳೆ ಮಾತನಾಡಿದ ಅವರು, ದಸರಾ ನಾಡಿನ ಬಹುದೊಡ್ಡ ಹಬ್ಬವಾಗಿದ್ದು, ವಿಜಯದಶಮಿ ದುಷ್ಟತನದ ವಿರುದ್ಧ ದೈವತ್ವದ ವಿಜಯವನ್ನು ಸಾರುತ್ತದೆ. ಭಾರತೀಯ ಪರಂಪರೆಯಲ್ಲಿ ಈ ಹಬ್ಬಕ್ಕೆ ವಿಶೇಷ ಮಹತ್ವವಿದೆ. ಬೋಂತಿ ತಾಂಡಾದಲ್ಲಿ ಹಬ್ಬವನ್ನು ಅತ್ಯಂತ ಸಂಭ್ರಮದಿಂದ ಆಚರಿಸಲಾಗುತ್ತದೆ. ನವರಾತ್ರಿ ದಿನಗಳಂದು ಒಂಬತ್ತು ದಿನ ಪ್ರತಿದಿನ ದೇವಿಯ ಪೂಜೆ, ಆರಾಧನೆ ನಡೆಯುತ್ತದೆ. ಉತ್ಸವದ ಕೊನೆಯ ದಿನವಾದ ವಿಜಯದಶಮಿಯಂದು ಪ್ರತಿ ಮನೆಗಳಲ್ಲಿಯೂ ಸಂಭ್ರಮವಿರುತ್ತದೆ ಎಂದು ಹೇಳಿದರು. ಒಳ್ಳೆಯತನದ ಸಂಕೇತವಾಗಿ ಆಚರಿಸಲಾಗುವ ವಿಜಯದಶಮಿ ಎಲ್ಲರಿಗೂ ಒಳಿತನ್ನು ತರಲಿ. ಈ ಬಾರಿ ಅತೀವೃಷ್ಠಿಯಿಂದ ಬೆಳೆನಷ್ಟವಾಗಿ ರೈತರು ಸಾಕಷ್ಟು ಸಂಕಷ್ಟದಲ್ಲಿದ್ದಾರೆ. ಇಚ್ಛಾಪೂರ್ತಿ ಮಾತಾ ಜಗದಂಬಾ ಕ್ಷೇತ್ರದ ಜನತೆಗೆ ಸುಖ, ಸಮೃದ್ಧಿ, ನೆಮ್ಮದಿ ನೀಡಲಿ, ರೈತರ ಜೀವನ ಸುಖಮಯವಾಗಿಸಲಿ, ಔರಾದ(ಬಿ) ಕ್ಷೇತ್ರವನ್ನು ಸಮೃದ್ಧಮಯವಾಗಿಸಲಿ ಎಂದು ಎಲ್ಲರಿಗೂ ವಿಜಯದಶಮಿಯ ಶುಭಾಶಯಗಳನ್ನು ಕೋರಿದರು.

*ಗಮನ ಸೆಳೆದ ಕಳಸ ಮೆರವಣಿಗೆ*: ವಿಜಯದಶಮಿಯ ನಿಮಿತ್ತ ಬೋಂತಿ ತಾಂಡಾದಲ್ಲಿ ಜರುಗಿದ ಕಳಸ ಮೆರವಣಿಗೆ ಎಲ್ಲರ ಗಮನ ಸೆಳೆಯಿತು. ಮಹಿಳೆಯರು ತಲೆಯ ಮೇಲೆ ಕಳಸ ಹೊತ್ತು ಮೆರವಣಿಗೆಯಲ್ಲಿ ಸಾಗಿದರು. ಮಕ್ಕಳು, ಯುವಕರು, ಹಿರಿಯರು ಬಣ್ಣಬಣ್ಣದ ಉಡುಗೆಗಳನ್ನು ಧರಿಸಿ ಹಬ್ಬದ ಸಂಭ್ರಮದಲ್ಲಿ ಭಾಗಿಯಾದರು.

# ಬಸವ ಸಂಸ್ಕೃತಿ ಅಭಿಯಾನ ಸಮಾರೋಪ
## ಬೀದರ್‌ನಿಂದ ಅತ್ಯಧಿಕ ಬಸವಾನುಯಾಯಿಗಳು ಭಾಗಿ

ಮಲ್ಲಮ್ಮ ನುಡಿವಾರ್ತೆ ಬೀದರ. ಅ. 02 : ಬೆಂಗಳೂರಿನಲ್ಲಿ ಅ. 5 ರಂದು ನಡೆಯಲಿರುವ ಬಸವ ಸಂಸ್ಕೃತಿ ಅಭಿಯಾನದ ಸಮಾರೋಪ ಸಮಾರಂಭದಲ್ಲಿ ಜಿಲ್ಲೆಯಿಂದ ಬಸವಾನುಯಾಯಿಗಳು ಅತ್ಯಧಿಕ ಸಂಖ್ಯೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಬೀದರ್ ಬಸವ ಸಂಸ್ಕೃತಿ ಅಭಿಯಾನದ ಅಧ್ಯಕ್ಷ ಬಸವರಾಜ ಧನ್ನೂರ ತಿಳಿಸಿದ್ದಾರೆ.

ವಿಶೇಷ ರೈಲು, ಬಸ್, ಖಾಸಗಿ ವಾಹನ ಹಾಗೂ ಸ್ವಂತ ವಾಹನಗಳಲ್ಲಿ ಬಸವಾನುಯಾಯಿಗಳು ರಾಜ್ಯದ ರಾಜಧಾನಿಗೆ ತೆರಳಲಿದ್ದಾರೆ ಎಂದು ಹೇಳಿದ್ದಾರೆ.

ವಿಶೇಷ ರೈಲು ಅ. 4 ರಂದು ಮಧ್ಯಾಹ್ನ 2.40ಕ್ಕೆ ಬೀದರನಿಂದ ಹೊರಟು ಅ. 5 ರಂದು ನಸುಕಿನ ಜಾವ 5ಕ್ಕೆ ಬೆಂಗಳೂರು ತಲುಪಲಿದೆ. ಅ. 5 ರಂದು ರಾತ್ರಿ 10.30ಕ್ಕೆ ಬೆಂಗಳೂರಿನಿಂದ ಹೊರಟು ಅ. 6 ರಂದು ಮಧ್ಯಾಹ್ನ 2.40ಕ್ಕೆ ಬೀದರಗೆ ಬರಲಿದೆ ಎಂದು ತಿಳಿಸಿದ್ದಾರೆ.

ಸಮಾರಂಭ ಜರುಗಲಿರುವ ಬೆಂಗಳೂರಿನ ಅರಮನೆ ಮೈದಾನದ ಗೇಟ್ ಸಂಖ್ಯೆ 4 ರಲ್ಲಿ ಇರುವ ಗಾಯತ್ರಿ ವಿಹಾರದಲ್ಲಿ ಈಗಾಗಲೇ ಸಮಾರಂಭಕ್ಕೆ ಸಕಲ ಸಿದ್ಧತೆಗಳು ಪೂರ್ಣಗೊಂಡಿವೆ. ಸಮಾರಂಭದಲ್ಲಿ ಪಾಲ್ಗೊಳ್ಳುವವರಿಗೆ ಉಪಾಹಾರ ಹಾಗೂ ಪ್ರಸಾದದ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದ್ದಾರೆ.

ಸಮಾರಂಭದಲ್ಲಿ ನಾಡಿನ ಮಠಾಧೀಶರು, ಜನಪ್ರತಿನಿಧಿಗಳು, ಗಣ್ಯರು, ಬಸವ ಪರ ಸಂಘಟನೆಗಳ ಪ್ರಮುಖರು ಭಾಗವಹಿಸಲಿದ್ದಾರೆ. ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕರನ್ನಾಗಿ ಘೋಷಿಸಿದ ಪ್ರಯುಕ್ತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಭಿನಂದಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಬಸವ ಸಂಸ್ಕೃತಿ ನಮ್ಮೆಲ್ಲರ ಅಸ್ಮಿತೆಯಾಗಿದೆ. ಅದನ್ನು ಉಳಿಸಿ, ಬೆಳೆಸುವುದು ಪ್ರತಿಯೊಬ್ಬ ಬಸವ ಭಕ್ತ ಹಾಗೂ ಲಿಂಗವಂತನ ಕರ್ತವ್ಯವಾಗಿದೆ. ರಾಜ್ಯದಾದ್ಯಂತ ಬಸವ ಸಂಸ್ಕೃತಿ ಅಭಿಯಾನ ಅತ್ಯಂತ ಯಶಸ್ವಿಯಾಗಿ ಜರುಗಿದೆ. ಬೆಂಗಳೂರಿನ ಸಮಾರೋಪದಲ್ಲಿ ಪ್ರತಿಯೊಬ್ಬ ಬಸವಾನುಯಾಯಿ



ಸ್ವಯಂಪ್ರೇರಣೆಯಿಂದ ಪಾಲ್ಗೊಂಡು, ಯಶಸ್ವಿಗೊಳಿಸಿ ರಾಷ್ಟ್ರಕ್ಕೆ ಒಳ್ಳೆಯ ಸಂದೇಶ ಕೊಡಬೇಕು ಎಂದು

## ಅ 3 ರಿಂದ ಮಾನಸಿಕ ಆರೋಗ್ಯ ಶಿಬಿರ

ಮಲ್ಲಮ್ಮ ನುಡಿವಾರ್ತೆ ಕಲಬುರಗಿ,ಅ.02-ಜಿಲ್ಲಾ ಮಾನಸಿಕ ಆರೋಗ್ಯ ಹಾಗೂ ಮನೋಚೈತನ್ಯ ಕಾರ್ಯಕ್ರಮದಡಿ ಕಲಬುರಗಿ ಜಿಲ್ಲೆಯ ಕೆಳಕಂಡ ಆಸ್ಪತ್ರೆಗಳಲ್ಲಿ ಇದೇ ಅಕ್ಟೋಬರ್ 3 ರಿಂದ 28 ರವರೆಗೆ ಮಾನಸಿಕ ಆರೋಗ್ಯ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕಲಬುರಗಿ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಅಧಿಕಾರಿಗಳು ತಿಳಿಸಿದ್ದಾರೆ. ತಪಾಸಣಾ ಶಿಬಿರದ ವಿವರ ಇಂತಿದೆ. ಅಕ್ಟೋಬರ್ 3 ರಂದು ಕಮಲಾಪುರ ಪ್ರಾಥಮಿಕ ಆರೋಗ್ಯ ಕೇಂದ್ರ, ಅಕ್ಟೋಬರ್ 4 ರಂದು ಕಲಬುರಗಿ ಕೇಂದ್ರ ಕಾರಾಗೃಹ, ಅಕ್ಟೋಬರ್ 6 ರಂದು ದೇವಲ ಗಾಣಗಾಪುರ ಸಂಗಮ್, ಅಕ್ಟೋಬರ್ 8 ರಂದು ಆಳಂದ ತಾಲೂಕು ಸಾರ್ವಜನಿಕ ಆಸ್ಪತ್ರೆ, ಅಕ್ಟೋಬರ್ 9 ರಂದು ಅಫಜಲಪುರ ತಾಲೂಕು ಸಾರ್ವಜನಿಕ ಆಸ್ಪತ್ರೆ, ಅಕ್ಟೋಬರ್ 14 ರಂದು ಚಿಂಚೋಳಿ ತಾಲೂಕು ಸಾರ್ವಜನಿಕ ಆಸ್ಪತ್ರೆ, ಅಕ್ಟೋಬರ್ 17 ರಂದು ಜೇವರ್ಗಿ ತಾಲೂಕು ಸಾರ್ವಜನಿಕ ಆಸ್ಪತ್ರೆ, ಅಕ್ಟೋಬರ್ 18 ರಂದು ಕಲಬುರಗಿ ಕೇಂದ್ರ ಕಾರಾಗೃಹ, ಅಕ್ಟೋಬರ್ 21 ರಂದು ಚಿತ್ತಾಪುರ ಸಾರ್ವಜನಿಕ ತಾಲೂಕು ಆಸ್ಪತ್ರೆ, ಅಕ್ಟೋಬರ್ 23 ರಂದು ಶಹಾಬಾದ ಸಮುದಾಯ ಆರೋಗ್ಯ ಕೇಂದ್ರ, ಅಕ್ಟೋಬರ್ 24 ರಂದು ಕಾಳಗಿ ಸಮುದಾಯ ಆರೋಗ್ಯ ಕೇಂದ್ರ ಹಾಗೂ ಅಕ್ಟೋಬರ್ 28 ರಂದು ಸೇಡಂ ತಲೂಕು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಮಾನಸಿಕ ಆರೋಗ್ಯ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

# ಪ್ರವಾಹ ಪೀಡಿತ ಪ್ರದೇಶಗಳಿಗೆ
# ಸಚಿವ ಖಂಡ್ರೆ ಭೇಟಿ



ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:.2:ಅತಿವೃಷ್ಠಿ ಮತ್ತು ಪ್ರವಾಹದಿಂದ ಬೆಳೆ ಹಾನಿಯಾಗಿ ಕಂಗಾಲಾಗಿರುವ ಅನ್ನದಾತರಿಗೆ ಶೀಘ್ರವೇ ಬೆಳೆ ಹಾನಿ ಪರಿಹಾರ ನೀಡಲಾಗುವುದು ಎಂದು ಅರಣ್ಯ,ಜೀವಿಶಾಸ್ತ್ರ,ಪರಿಸರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹೇಳಿದರು.

ತಾಲೂಕಿನ ಅತಿಹೆಚ್ಚು ಪ್ರವಾಹ ಪೀಡಿತ ಇಂಚೂರ,ಸಾಯಗಾಂವ,ಮೆಹಕರ,ಹಲಸಿತುಗಾಂವ,ಕೊಂಗಳಿ,ಲಖನಗಾಂವ,ವಾಂಜರಖೇಡ ಗ್ರಾಮದ ಹೊಲಗಳಿಗೆ ಅಧಿಕಾರಿಗಳ ತಂಡದೊಂದಿಗೆ ಭೇಟಿ ನೀಡಿ ಬೆಳೆ ಹಾನಿ ವೀಕ್ಷಿಸಿ,ಸುದ್ದಿಗಾರರೊಂದಿಗೆ ಮಾತನಾಡಿದರು.

ಭಾಲ್ಕಿ ತಾಲೂಕಿನಲ್ಲಿ 32650 ಹೆಕ್ಟೇರ್ ಪ್ರದೇಶದಲ್ಲಿನ ಅಂ-ದಾಜು 55 ಕೋ.ರೂ.ಬೆಳೆ ಹಾನಿ ಸಂಭವಿಸಿದೆ.ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವೈಮಾನಿಕ ಸಮೀಕ್ಷೆ ನಡೆಸಿ ಎನ್‌ಡಿಆರ್‌ಎಫ್ ಪರಿಹಾರ ಹೊರತು ಪಡಿಸಿ ರಾಜ್ಯ ಸರ್ಕಾರದಿಂದ ಹೆಚ್ಚುವರಿಯಾಗಿ ಹೆಕ್ಟೇರಿಗೆ ರೂ.8500,ಮಳೆ ಆಶ್ರಿತ ಬೆಳೆಗಳಿಗೆ ರೂ.17000,ಬಹುವಾರ್ಷಿಕ ಬೆಳೆಗಳಿಗೆ 22500 ರೂ.ಘೋಷಣೆ ಮಾಡಿದ್ದಾರೆ.ಆನಿಮಿತ್ಯ ಮುಖ್ಯಮಂತ್ರಿಗಳಿಗೆ ಕೃತಜ್ಞತೆ ಸಲ್ಲಿಸಲಾಗುತ್ತದೆ.ಸಮೀಕ್ಷೆ ವರದಿ ಆಧರಿಸಿ ತಕ್ಷಣ ಪರಿಹಾರ ನೀಡಲಾಗುವುದು.

ಕೆಲವು ಗ್ರಾಮದ ರೈತರು,ಕಟಾವಿಗೆ ಬಂದ ಬೆಳೆ ಸಂಪೂರ್ಣ ನಾಶವಾಗಿದೆ. ಮಹಾರಾಷ್ಟ್ರದ ಜಲಾಷಯದಿಂದ ಬಿಡುವ ರಭಸದ ನೀರಿನಿಂದ ಫಲವತ್ತಾದ ಮಣ್ಣು ಕೊಚ್ಚಿ-ಕೊಂಡು ಹೋಗಿದೆ.ನದಿ ಪಾತ್ರದ ರೈತರ ಪರಿಸ್ಥಿತಿ ಹೇಳತೀರದಾಗಿದೆ. ಎಲ್ಲ ಅಲ್ಲೋಲ-ಕಲ್ಲೋಲವಾಗಿದೆ ಎಂದು ಸಚಿವರ ಮುಂದೆ ಅಳಲು ತೋಡಿಕೊಂಡರು.

ಸಚಿವರೊಂದಿಗೆ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಹಣಮಂತರಾವ ಚವ್ಹಾಣ,ಮಾಜಿ ಜಿಪಂ ಸದಸ್ಯ ಸುಧೀರಕುಮಾರ ಕಡಾದಿ,ಮಾರುತಿರಾವ ಮಗರ,ಕರಾಳೆ,ಬಳವಂತರಾವ ಹೀರಾನಾಯಕ, ಜಿಪಂ ಸಿಇಓ ಡಾ,ಗಿರೀಶ ಬದೋಲೆ,ಎಸಿ ಮುಕುಂದ ಜೈನ,ತಹಸೀಲ್ದಾರ ಮಲ್ಲಿಕಾರ್ಜುನ ವಡ್ಡನಕೇರಿ,ಜಿಪಂ ಯೋಜನಾಧಿಕಾರಿ ಸೂರ್ಯಕಾಂತ ಬಿರಾದಾರ,ತಾಪಂ ಇಒ ಸೂರ್ಯಕಾಂತ ಬಿರಾದಾರ,ಎಇಇ ಅಲ್ತಾಫ್,ಕೃಷಿ ಸ.ನಿ. ಮಲ್ಲಿಕಾರ್ಜುನ,ಬಿಇಓ ಸಿಜಿ ಹಳ್ಳದ ,ಎಇಇಗಳಾದ ಗಣಪತಿ,ಶಿವರಾಜ,ಮಾಣಿಕರಾವ ಕೆರೂರೆ,ರಾಮಲಿಂಗ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

'ನಿರಂತರ ಮಳೆ ಸುರಿಯುತ್ತಿರುವುದರಿಂದ ಬೆಳೆ ಹಾನಿ ಸಮೀಕ್ಷೆಗೆ ಅಡಚಣೆಯಾಗಿದೆ.ಜನ,ಜಾನುವಾರು,ಬೆಳೆ ಹಾನಿ,ಮಣ್ಣಿನ ಸವೆತ ಮತ್ತು ಎಲ್ಲ ವಾಣಿಜ್ಯ,ವಾಣಿಜ್ಯೇತರ ಬೆಳೆಗಳ ಸಮೀಕ್ಷೆ ವರದಿ ತುರ್ತಾಗಿ ನೀಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದ್ದೇನೆ.ದೀಪಾವಳಿ ಹಬ್ಬದ ಮುಂಚೆ ಬೆಳೆ ಹಾನಿ ಪರಿಹಾರ ಒದಗಿಸಲಾಗುವುದು.ರೈತರು ಆತಂಕ ಪಡುವ ಅಗತ್ಯವಿಲ್ಲ '

-ಈಶ್ವರ ಖಂಡ್ರೆ ಜಿಲ್ಲಾ ಉಸ್ತುವಾರಿ ಸಚಿವ ಬೀದರ.

' ದಸರಾ ಹಬ್ಬದ ಆಯೂಧ ಪೂಜೆ ದಿನದಂದು ಸಹ ಸಚಿವ ಈಶ್ವರ ಖಂಡ್ರೆ ಅವರು ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ರೈತರಲ್ಲಿ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡುತ್ತಿದ್ದಾರೆ.ಅವರ ರೈತ ಪರ ಕಾಳಜಿ ಎಲ್ಲರೂ ಮೆಚ್ಚುವಂತಹದ್ದು.ಆದಷ್ಟು ಬೇಗ ರೈತರಿಗೆ ಪರಿಹಾರ ಒದಗಿಸಿದರೆ ಉತ್ತಮ.

'-ಸತೀಶ ನಿಂಬಾಳಕರ್ ಕೆಡಿಪಿ ಸದಸ್ಯ ಸಾಯಗಾಂವ.

# ಸದ್ವರ್ತನೆ ಸೌಹಾರ್ದತೆ ಶಾಂತಿ ಸಮೃದ್ಧಿಗಳ
# ಸಫಲತೆಗೆ ಸೋಪಾನ:ರಂಭಾಪುರಿ ಜಗದ್ಗುರುಗಳು



ಮಲ್ಲಮ್ಮ ನುಡಿವಾರ್ತೆ ಬಸವಕಲ್ಯಾಣ-ಅ.2:

ಮಾನವನಿಗೆ ಸಂಸ್ಕಾರ ದೊ-ರೆತರೆ ಬೆಲೆಯುಳ್ಳ ಬದುಕು ಸಾರ್ಥಕಗೊಳ್ಳುತ್ತದೆ. ಜನರು ಯತಾರ್ಥ ಅರಿತು ಸಾತ್ವಿಕ ಸಮೃದ್ಧ ನಾಡನ್ನು ಕಟ್ಟಲು ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿದೆ. ಸದ್ವರ್ತನೆ ಸೌಹಾರ್ದತೆಯಿಂದ ಜಗದಲ್ಲಿ ಶಾಂತಿ ಸಮೃದ್ಧಿ ನೆಲೆಗೊಳ್ಳಲು ಸಾಧ್ಯವಾಗುವುದೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಮಂಗಳವಾರ ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನದ ಸಮಾರೋಪ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಸಮಾಜದಲ್ಲಿ ಸಂಘಟನೆಗಳು ನಡೆಯಬೇಕಲ್ಲದೇ ಸಂಘರ್ಷಗಳು ನಡೆಯಬಾರದು.ಪ್ರಕೃತಿ ಮಾನವನನ್ನು ಸೃಷ್ಠಿಸಿದರೆ ಸಂಸ್ಕಾರ ದೇವ ಮಾನವರನ್ನು ಸೃಷ್ಟಿಸುತ್ತದೆ. ಸಾಮಾಜಿಕ ಸಂಪ್ರದಾಯಗಳು ಬದಲಾಗಬಹುದು. ಆದರೆ ನೈತಿಕ ನಿಯಮಗಳು ಯಾವಾಗಲೂ ಶಾಶ್ವತವಾಗಿರುತ್ತವೆ.ನದಿಯ ನೀರನ್ನು ಎಷ್ಟು ತುಂಬಿದರೂ ಅದು ಹೇಗೆ ಖಾಲಿಯಾಗುವುದಿಲ್ಲವೋ ಹಾಗೆಯೇ ಧರ್ಮದ ಅರಿವನ್ನು ಎಷ್ಟು ಅರಿತರೂ ಅದು ಖಾಲಿಯಾಗುವುದಿಲ್ಲ. ಅತಿ ಶತ್ರುಗಳನ್ನು ನಿಯಂತ್ರಿಸಬಹುದು. ಆದರೆ ಮತಿ ಶತ್ರುಗಳನ್ನು ನಿಯಂತ್ರಿಸುವುದು ತುಂಬಾ ಕಷ್ಟ. ಸಜ್ಜನರಿಗೆ ಬರುವ ಆಪತ್ತು ದುರ್ಜನರಿಗೆ ಬರುವ ಸಂಪತ್ತು ಬಹಳ ಕಾಲ ಉಳಿಯುವುದಿಲ್ಲ. ಸಜ್ಜನರಿಗೆ ಆಪತ್ತು ಬರುವುದು ಕೀರ್ತಿಗಾಗಿ. ದುರ್ಜನರಿಗೆ ಸಂಪತ್ತು ಬರುವುದು ವಿನಾಶಕ್ಕಾಗಿ ಎಂಬುದನ್ನು ಮರೆಯಲಾಗದು. ಬೆಳಕಿನಲ್ಲಿ ಬೆಳಕಿಗೆ ಬೆಲೆ ಇಲ್ಲದೇ ಇರಬಹುದು. ಆದರೆ ಕತ್ತಲೆಯಲ್ಲಿ ಕಿರು ದೀಪಕ್ಕೂ ಬೆಲೆ ಇದೆ ಎಂಬ ಶ್ರೀ ಜಗದ್ಗುರು ರೇಣುಕಾಚಾರ್ಯರ ವಿಚಾರ ಧಾರೆ ಸತ್ಯವಾದುದು. ಮನುಷ್ಯ ಜೀವನದಲ್ಲಿ ಮನುಷ್ಯ ಸಮಯ ಪಾಲನೆ, ನಿಯಮ ಪಾಲನೆ ಮತ್ತು ಸಂಯಮ ಪಾಲನೆ ಬೆಳೆಸಿಕೊಂಡು ಬಂದರೆ ಎಲ್ಲೆಡೆ ಸಮೃದ್ಧಿ ಮತ್ತು ಶಾಂತಿ ನೆಲೆಗೊಳ್ಳುತ್ತದೆ ಎಂದರು.

ಪ್ರಾಸ್ತಾವಿಕ ಮಾತನಾಡಿದ ಸಿದ್ಧರಬೆಟ್ಟ ಕ್ಷೇತ್ರದ ವೀರಭದ್ರ ಶಿವಾಚಾರ್ಯ ಸ್ವಾಮಿಗಳು ಭೌತಿಕ ಜೀವನ ಸಮೃದ್ಧಗೊಂಡಂತೆ ಆಂತರಿಕ ಜೀವನ ಪರಿಶುದ್ಧಗೊಳ್ಳಬೇಕು. ಹಣ ಮತ್ತು ಅಧಿಕಾರದ ಬಗ್ಗೆ ಸದಾ ಚಿಂತಿಸುವ ಮನುಷ್ಯ ತನ್ನ ದೇಶ ಸಂಸ್ಕೃತಿ ಮತ್ತು ಧರ್ಮದ ಬಗ್ಗೆ ಒಂದಿಷ್ಟಾದರೂ ಚಿಂತಿಸಿದರೆ ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಪೌರಾಡಳಿತ ಮತ್ತು ಹಜ್ ಖಾತೆ ಸಚಿವ ರಹಿಮ್ ಖಾನ ಮಾತನಾಡಿ ಖಾದಿ ಖಾಕಿ ಕಾವಿ ಜನಾಂಗವು ನಿರ್ಮಲ ಮನಸ್ಸಿನಿಂದ ಕಾಯಕ ಮಾಡಿದರೆ ಜನಕಲ್ಯಾಣದ ಜೊತೆಗೆ ಲೋಕ ಕಲ್ಯಾಣವಾಗುವುದು. ಸೌಹಾರ್ದಯುತ ಸಹಬಾಳ್ವೆ ಜೀವನದ ತತ್ವವಾಗಬೇಕು. ಕಲಿತ ಪಾಠಗಳನ್ನು ಮರೆಯಲು ಸಾಧ್ಯವಾಗದು. ಸಮಾಜದಲ್ಲಿರುವ ಎಲ್ಲರೂ ಸಹೋದರ ಭಾವದಿಂದ ಒಗ್ಗಟಾಗಿ ಬಾಳಬೇಕು.ಶ್ರೀ ರಂಭಾಪುರಿ ಜಗದ್ಗುರುಗಳ ದಸರಾ ಧರ್ಮ ಸಮ್ಮೇಳನ ಸರ್ವ ಜನಾಂಗದ ಶ್ರೇಯಸ್ಸಿಗೆ ಮತ್ತು ಸಾಮರಸ್ಯ ಬದುಕಿಗೆ ಸಾಕ್ಷಿಯಾಗಿದೆ ಎಂದು ಹರುಷ ವ್ಯಕ್ತಪಡಿಸಿದರು.

ಮಳಖೇಡದ ಹಜರತ್ ಸೈಯದ ಶಹಾ ಮುಸ್ತಫಾ ಖಾದರಿ ಇವರು ಧರ್ಮ ಧರ್ಮಗಳಲ್ಲಿ ಸಾಮರಸ್ಯ ಸೌಹಾರ್ದತೆ ವಿಷಯವಾಗಿ ಮಾತನಾಡಿ ಹಿರಿಯರ ಮೌಲ್ಯಾಧಾರಿತ ಚಿಂತನಗಳು ಬಾಳಿನ ಆಶಾಕಿರಣವಾಗಿವೆ. ಎಲ್ಲ ಧರ್ಮಗಳು ಪರಮಾತ್ಮನಿಂದಲೇ ಬಂದಿವೆ. ಆದರೆ ಮನುಷ್ಯನ ಬುದ್ಧಿ ಶಕ್ತಿ ಅರಿಯುವುದರಲ್ಲಿ ಏರುಪೇರಾಗಿದೆ. ಎಲ್ಲ ಧರ್ಮಗಳು ಶಾಂತಿ ಸಂಯಮ ಸಹಬಾಳ್ವೆ ಬೋಧಿಸುತ್ತವೆ ಹೊರತು ವಿಘಟನೆ ಮಾಡಲು ಅಲ್ಲ. ಸ್ವಧರ್ಮದಲ್ಲಿ ನಿಷ್ಠೆ ಮತ್ತು ಪರಧರ್ಮದಲ್ಲಿ ಸಹಿಷ್ಣುತಾ ಮನೋಭಾವ ಬೆಳೆಸಿಕೊಂಡು ಬರಬೇಕಾಗುತ್ತದೆ. ಧರ್ಮ ಧರ್ಮಗಳಲ್ಲಿ ಮತ್ತು ವ್ಯಕ್ತಿ ವ್ಯಕ್ತಿಗಳಲ್ಲಿ ಸುಮಧುರ ಭಾವನೆಗಳನು ಬೆಳೆದಾಗ ಭಾವೈಕ್ಯತೆಗೆ ಮತ್ತು ಸಾಮರಸ್ಯದ ಬದುಕಿಗೆ ಶಕ್ತಿ ನೀಡುತ್ತದೆ. ಶ್ರೀ ರಂಭಾಪುರಿ ಜಗದ್ಗುರುಗಳವರ ವಿಶ್ವಬಂಧುತ್ವದ ಚಿಂತನ ಜೀವಜಗದ ಶ್ರೇಯಸ್ಸಿಗೆ ಮೂಲವಾಗಿದೆಯೆಂದರು. ರಾಜೇಶ್ವರದ ಘನಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ನೇತೃತ್ವ ವಹಿಸಿದ್ದರು. ಹಾರಕೂಡ ಡಾ. ಚನ್ನವೀರ ಶಿವಾಚಾರ್ಯರು, ತ್ರಿಪುರಾಂತಕ ಗವಿಮಠದ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಮೆಹಕರ್ ತಡೋಳಾ-ರಾಜೇಶ್ವರ ಶಿವಾಚಾರ್ಯರು ವೇದಿಕೆಯ ಮೇಲೆ ಇದ್ದರು.

ಮುಖ್ಯ ಅತಿಥಿಗಳಾಗಿ ಶಾಸಕ ಶರಣು ಸಲಗರ, ಉಮರ್ಗಾ ಶಾಸಕ ಪ್ರವೀಣಸ್ವಾಮಿ, ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, ಆಡಳಿತ ಮತ್ತು ಆರ್ಥಿಕ ಸಲಹೆಗಾರ ಸೋಮನಾಥ ಪಟ್ನೆ ಭಾಗವಹಿಸಿ ಮಾತನಾಡಿದರು. ಡಾ. ಸಂಗಮೇಶ ಸವದತ್ತಿಮಠ, ವೀರೇಶ ಕೂಗು ಉಪಸ್ಥಿತರಿದ್ದರು. ಜಮಖಂಡಿ ಶಾಸಕ ಜಗದೀಶ ಗುಡಗುಂಟಿ ಮಾತನಾಡಿ 2026ರ ದಸರಾ ಧರ್ಮ ಸಮ್ಮೇಳನವನ್ನು ಜಮಖಂಡಿ ನಗರದಲ್ಲಿ ನಡೆಸಲು ಶ್ರೀ ಜಗದ್ಗುರುಗಳ ಅಪ್ಪಣೆ ಬೇಡಿದರು.

**ಜಮಖಂಡಿಯಲ್ಲಿ 2026ರ ದಸರಾ ಧರ್ಮ ಸಮ್ಮೇಳನ**

ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠದ 2026ನೇ ಸಾಲಿನ ದಸರಾ ಧರ್ಮ ಸಮ್ಮೇಳನವನ್ನು ಬಾಗಲಕೋಟೆ ಜಿಲ್ಲೆ ಜಮಖಂಡಿ ನಗರದಲ್ಲಿ ಶಾಸಕ ಜಗದೀಶ ಗುಡಗುಂಟಿಯವರ ನೇತೃತ್ವದಲ್ಲಿ ನಡೆಸಿಕೊಡುವುದಾಗಿ

ಶ್ರೀ ರಂಭಾಪುರಿ ಜಗದ್ಗುರುಗಳು ಪ್ರಕಟಪಡಿಸಿದರು.

**ಗೌರವ ಗುರುರಕ್ಷೆ :**

ಡಾ॥ನಾಗಭೂಷಣ ಶಿವಾಚಾರ್ಯರು ಮಳಲಿ ಸಂಸ್ಥಾನಮಠ,ಗುರುಶಾಂತೇಶ್ವರ ಶಿವಾಚಾರ್ಯರು ಹಿರೇಮಠ ನೆಗಳೂರು, ವಿಜಯಮಹಾಂತ ಶಿವಾಚಾರ್ಯರು ಹಿರೇಮಠ ಚಿಮ್ಮಾಇದಲಾಯಿ,ರೇವಣಸಿದ್ಧ ಶಿವಾಚಾರ್ಯರು ನಡುವಿನಮಠ ರಟಕಲ್, ಚನ್ನರುದ್ರಮುನಿ ಶಿವಾಚಾರ್ಯರು ಹಿರೇಮಠ ಸೂಗುರು (ಕೆ), ಇವರಿಗೆ ಗೌರವ ಗುರುರಕ್ಷೆ ನೀಡಿ ಶ್ರೀ ರಂಭಾಪುರಿ ಜಗದ್ಗುರುಗಳು ಆಶೀರ್ವದಿಸಿದರು.

ಶಶಾಂಕ ಪಾಟೀಲ ನೇಳಕೂಡ ಇವರಿಂದ ಯೋಗ ಪ್ರದರ್ಶನ ಜರುಗಿತು. ಶರಣು ಪವಾಡಶೆಟ್ಟಿ ಸ್ವಾಗತಿಸಿದರು. ಗುರುಲಿಂಗಯ್ಯಾ ಹಿತ್ತಲಶಿರೂರ ಮತ್ತು ರಾಜಶ್ರೀ ಇವರಿಂದ ಸಂಗೀತ ಜರುಗಿತು. ಶಿವಮೊಗ್ಗದ ಶಾಂತಾ ಆನಂದ ಹಾಗೂ ರಮೇಶ ರಾಜೋಳೆ ಶಿವಪೂರ ಇವರು ನಿರೂಪಿಸಿದರು. ಶ್ರೀ ದಿಗಂಬರ ಕರಿಬಸವೇಶ್ವರ ಹಿರೇಮಠ ಸಂಸ್ಥಾನ ಹುಡಗಿ ಹುಮನಾಬಾದ ಇವರಿಂದ ಅನ್ನ ದಾಸೋಹ ಜರುಗಿತು.

ನಜರ ಸಮರ್ಪಣೆ:ಸಮಾರಂಭದ ಕೊನೆಗೆ ನಾಡಿನ ಶಿವಾಚಾರ್ಯರು, ಶ್ರೀಪೀಠದ ಸಿಬ್ಬಂದಿ ವರ್ಗ, ಧರ್ಮಾಭಿಮಾನಿಗಳು ಹಾಗೂ ಆನೆ ನಜರ(ಗೌರವ)ಸಮರ್ಪಿಸಿದ ನಂತರ ಮೇಘರಾಜ ಚಕ್ರಸಾಲಿ ಸಲ್ಲಿಸಿದ ಹಗಲು ದೀವಟಿಗೆಯ ನಜರ್‌ನೊಂದಿಗೆ ಮುಕ್ತಾಯಗೊಂಡಿತು. ಮಳಲಿ ಡಾ.ನಾಗಭೂಷಣ ಶಿವಾಚಾರ್ಯರು ನಿರೂಪಿಸಿದರು.

ಆಯುಧ ಪೂಜೆ: ಆಯುಧ ಪೂಜೆಯ ಅಂಗವಾಗಿ ಶ್ರೀ ರಂಭಾಪುರಿ ಜಗದ್ಗುರುಗಳು ಶ್ರೀ ಪೀಠದ ಎಲ್ಲ ಆಯುಧಗಳಿಗೆ ಪೂಜೆ ಸಲ್ಲಿಸಿದರು. ವಿವಿಧ ಮಠಗಳ ಶಿವಾಚಾರ್ಯರು ಉಪಸ್ಥಿತರಿದ್ದರು.

## ರಾಜಭವನದಲ್ಲಿ ರಾಜ್ಯಪಾಲರಿಂದ ವಿಶೇಷ ಪೂಜೆ

ಮಲ್ಲಮ್ಮನುಡಿವಾರ್ತೆ ಬೆಂಗಳೂರು, ಅ 02:ಆಯುಧ ಪೂಜೆ ಮತ್ತು ವಿಜಯದಶಮಿ ಹಬ್ಬದ ಪ್ರಯುಕ್ತ ಗೌರವಾನ್ವಿತ ರಾಜ್ಯಪಾಲರಾದ ಥಾವರ್ ಚಂದ್ ಗೆಲ್ಹೋಟ್ ಅವರು ರಾಜಭವನದಲ್ಲಿ ಶಸ್ತ್ರಾಸ್ತ್ರಗಳಿಗೆ ವಿಶೇಷ ಪೂಜೆ ಸಲ್ಲಿಸಿದರು. ಆಯುಧ ಪೂಜೆ ಅಂಗವಾಗಿ ರಾಜಭವನದ ವಾಹನಗಳಿಗೆ ಪೂಜೆ ಸಲ್ಲಿಸಿ,ಆವರಣದಲ್ಲಿ ರಾಜಭವನದ ಪೊಲೀಸ್ ಗಾರ್ಡ್ ಭದ್ರತಾ ಸಿಬ್ಬಂದಿಯ ಶಸ್ತ್ರಾಸ್ತ್ರಗಳನ್ನು ಇರಿಸಿ ಪೂಜೆ ನೆರವೇರಿಸಿದರು. ನಂತರ ಎಲ್ಲರಿಗೂ ಶುಭ ಕೋರಿದರು.

ಈ ಸಂದರ್ಭದಲ್ಲಿ ಅಧಿಕಾರಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಅಪಾರ ಭಕ್ತ ಸಮೂಹ ನಡುವೆ ಸಂಪನ್ನಗೊಂಡ
# ಮಹಾಮಾಯ ಮಹಾ ರಥೋತ್ಸವ

ಮಲ್ಲಮ್ಮ ನುಡಿವಾರ್ತೆ ಕುಕನೂರ :ಅ.2: ಪಟ್ಟಣದ ಐತಿಹಾಸಿಕ ಸುಪ್ರಸಿದ್ದ ದೇವಸ್ಥಾನದ ಶ್ರೀ ಮಹಾಮಾಯ (ಕುಕನೂರು ದ್ಯಾಮವ್ವ) ದೇವಿಯ ರಥೋತ್ಸವದ ಬುಧವಾರ ಸಾಯಂಕಾಲ ಸಹಸ್ರಾರು ಭಕ್ತ ವೃಂದದ ನಡುವೆ ಸಂಪನ್ನಗೊಂಡಿತು. ಮಹಾ ರಥೋತ್ಸವಕ್ಕೆ ಆಗಮಿಸಿದ ಭಕ್ತರು ರಥೋತ್ಸವಕ್ಕೆ ಉತ್ತತ್ತಿ, ಬಾಳೆಹಣ್ಣು ಸಮರ್ಪಿಸಿ ಭಕ್ತಿ ಮೆರೆದರು. ಪ್ರತಿ ವರ್ಷ ನವರಾತ್ರಿ ಸಂದರ್ಭದಲ್ಲಿ ಜರುಗುವ ಜಾತ್ರಾ ಮಹೋತ್ಸವವು 09 ದಿನಗಳ ವಿವಿಧ ಧಾರ್ಮಿಕ ಕಾರ್ಯಗಳೊಂದಿಗೆ ಸಂಭ್ರಮ ಸಡಗರದಿಂದ ಜರುಗಿದವು. ಬುಧವಾರ ಬೆಳಗಿನ ಜಾವ ಶ್ರೀ ಮಹಾಮಾಯ ದೇವಸ್ಥಾನದಲ್ಲಿ ದೇವಿಗೆ ವಿಶೇಷ ಅಭಿಷೇಕ, ಕುಂಕುಮಾರ್ಚನೆ ಸೇರಿದಂತೆ ವಿವಿಧ ಧಾರ್ಮಿಕ ಪೂಜಾ ಕಾರ್ಯ ನೆರವೇರಿಸಲಾಯಿತು. ವಿಜಯ ದಶಮಿ ದಿನ ಸಾಯಂಕಾಲ ಶ್ರೀ ಲಕ್ಷ್ಮಿ ವೆಂಕಟೇಶ್ವರ ಮಹಾ ರಥೋತ್ಸವ ಹಾಗೂ ಶ್ರೀ ಮಹಾಮಾಯ ದೇವಿ ಸಿಮೋಲ್ಲಂಘನೆ, ಬನ್ನಿ ಮುಡಿಯುವ ಕಾರ್ಯ ಸೇರಿ ದಂತೆ ವಿವಿಧ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಲಾಗುವುದು ಎಂದು ದೇವಸ್ಥಾನ ಆಡಳಿತ




ಮಂಡಳಿಯವರು ತಿಳಿಸಿದರು. ಬೆಳ್ಳಿ ಪಲ್ಲಕ್ಕಿಯಲ್ಲಿ ಶ್ರೀ ಮಹಾಮಾಯ ದೇವಿಯ ಉತ್ಸವ ಮೂರ್ತಿಯ ಮೆರವಣಿಗೆ ಆಯೋಜಿಸಲಾಯಿತು.

ಮಹಾರಥೋತ್ಸವದಲ್ಲಿ ಕುಕನೂರು ಪಟ್ಟಣ ಸುತ್ತಮುತ್ತಲಿನ ಗ್ರಾಮದ ಗ್ರಾಮಸ್ಥರು ಸೇರಿದಂತೆ ವಿವಿಧ ಜಿಲ್ಲೆಗಳು ಹಾಗೂ ಹೊರರಾಜ್ಯಗಳಿಂದ ಭಕ್ತರು ಆಗಮಿಸಿ ತಮ್ಮ ಹರಕೆ ಹಾಗೂ ಇಷ್ಟಾರ್ಥಗಳನ್ನು ನೆರವೇರಿಸಿ ಮಹಾಮಾಯ ದೇವಿಯ ಕೃಪೆಗೆ ಪಾತ್ರರಾದರು.

## ಕಾಂಗ್ರೆಸ್ ಎಸ್.ಸಿ. ವಿಭಾಗಕ್ಕೆ ಚಂದ್ರಕಾಂತ ವಜುರೆ ನೇಮಕ

ಮಲ್ಲಮ್ಮನುಡಿವಾರ್ತೆ ಬೀದರ. ಅ. 02 : ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ನಗರದ ನಾವದಗೇರಿಯ ಚಂದ್ರಕಾಂತ ಪಾಂಡುರಂಗ ವಜುರೆ ಅವರನ್ನು ನೇಮಕ ಮಾಡಲಾಗಿದೆ.

ಪೌರಾಡಳಿತ ಹಾಗೂ ಹಜ್ ಸಚಿವ ರಹೀಂಖಾನ್ ಮತ್ತು ವಿಭಾಗದ ರಾಜ್ಯ ಅಧ್ಯಕ್ಷ ಆರ್. ಧರ್ಮಸೇನಾ ಅವರ ನಿರ್ದೇಶನದ ಮೇರೆಗೆ ಈ ನೇಮಕ ಮಾಡಲಾಗಿದೆ ಎಂದು ಕಾಂಗ್ರೆಸ್ ಪರಿಶಿಷ್ಟ ಜಾತಿ



ವಿಭಾಗದ ಜಿಲ್ಲಾ ಘಟಕದ ಅಧ್ಯಕ್ಷ ಸಂಜುಕುಮಾರ ಡಿ. ಕುರನಳ್ಳಿಕರ್ ತಿಳಿಸಿದ್ದಾರೆ. ನೇಮಕಾತಿ ಪತ್ರ ವಿತರಣೆ: ನಗರದಲ್ಲಿ ಸಚಿವ ರಹೀಂಖಾನ್ ಅವರು ಚಂದ್ರಕಾಂತ ವಜುರೆ ಅವರಿಗೆ ನೇಮಕಾತಿ ಪತ್ರ ವಿತರಿಸಿದರು.

ಬೀದರ್ ಮಹಾನಗರ ಪಾಲಿಕೆ ಅಧ್ಯಕ್ಷ ಮುಹಮ್ಮದ್ ಗೌಸ್,ಅಖಿಲ ಭಾರತ ಕಾಂಗ್ರೆಸ್ ಕಿಸಾನ್ ವಿಭಾಗದ ರಾಷ್ಟ್ರೀಯ ಜಂಟಿ ಸಂಯೋಜಕ ಜಾನಸನ್ ಘೋಡೆ ಇದ್ದರು.

# ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿ ತಯಾರು: ನೋಂದಾಯಿಸಿಕೊಳ್ಳಲು ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಅ.02:ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಯನ್ನು ಹೊಸದಾಗಿ ಸಿದ್ಧಪಡಿಸಬೇಕಾಗಿರುವುದರಿಂದ ಅರ್ಹರಿಂದ ನೋಂದಾಯಿಸಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ ಎಂದು ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಸಹಾಯಕ ಮತದಾರರ ನೋಂದಣಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಹತಾ ದಿನಾಂಕ 01.11.2025ಕ್ಕೆ ಅನ್ವಯಿಸುವಂತೆ ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಯು ನೂತನವಾಗಿ ಸಿದ್ಧಪಡಿಸುವ ಕಾರ್ಯವು ಈಗಾಗಲೇ ಪ್ರಾರಂಭವಾಗಿದೆ. ಈ ಹಿಂದಿನ ಮತದಾರರ ಪಟ್ಟಿಯಲ್ಲಿ ಹೆಸರು ಇರುವ ಮತದಾರರು ಸಹ ನಮೂನೆ 19 ರಲ್ಲಿ ಹೊಸದಾಗಿ ಅರ್ಜಿ ಸಲ್ಲಿಸಬೇಕು ಎಂದು ತಿಳಿಸಿದ್ದಾರೆ.

ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿ ಸಿದ್ಧಪಡಿಸುವಿಕೆಗೆ ವೇಳಾಪಟ್ಟಿ:

06.11.2025 (ಗುರುವಾರ) ರಂದು ಅರ್ಜಿ ನಮೂನೆ 19 ರಲ್ಲಿ ಅರ್ಜಿಯನ್ನು ಸ್ವೀಕರಿಸುವ ಕೊನೆಯ ದಿನ.

25.11.2025 (ಮಂಗಳವಾರ) ರಂದು ಕರಡು ಮತದಾರರ ಪಟ್ಟಿ ಪ್ರಕಟಿಸುವ ದಿನ.

25.11.2025 (ಮಂಗಳವಾರ) ರಿಂದ 10.12.2025 (ಬುಧವಾರ) ರ ವರೆಗೆ ಹಕ್ಕು ಮತ್ತು ಆಕ್ಷೇಪಣೆಗಳಿಗಾಗಿ ನಿಗಧಿಪಡಿಸಿದ ಅವಧಿ.

30.12.2025 (ಮಂಗಳವಾರ) ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಿಸುವ ದಿನ.

ಭಾರತ ಚುನಾವಣಾ ಆಯೋಗವು ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರನ್ನು ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರರ ನೋಂದಣಾಧಿಕಾರಿಯನ್ನಾಗಿ ನೇಮಿಸಿದೆ. ಈ ಚುನಾವಣಾ ಕ್ಷೇತ್ರ ವ್ಯಾಪ್ತಿಗೊಳಪಡುವ ವಿಭಾಗದ ಎಲ್ಲಾ ಜಿಲ್ಲಾಧಿಕಾರಿಗಳನ್ನು, ಆಯುಕ್ತರು ಮಹಾನಗರ ಪಾಲಿಕೆ ಕಲಬುರಗಿ ಹಾಗೂ ಬಳ್ಳಾರಿ, ಕಲಬುರಗಿ ವಿಭಾಗದ ಆಯಾ ಉಪ ವಿಭಾಗಕ್ಕೆ ಸಂಬಂಧಪಟ್ಟ ಎಲ್ಲಾ ಸಹಾಯಕ ಆಯುಕ್ತರು, ವಿಭಾಗದ ಎಲ್ಲಾ ಸಂಬಂಧಪಟ್ಟ ತಾಲೂಕಿನ ತಹಶೀಲ್ದಾರರನ್ನು ಸಹಾಯಕ ಮತದಾರರ ನೋಂದಣಾಧಿಕಾರಿಯನ್ನಾಗಿ ನೇಮಿಸಿದೆ.

*ಹೆಸರು ನೋಂದಾಯಿಸಲು ಮಾರ್ಗಸೂಚಿ:*

ಭಾರತದ ಪ್ರಜೆಯಾಗಿರುವ, ಆಯಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸಾಮಾನ್ಯ ನಿವಾಸಿಯಾಗಿರುವ ಹಾಗೂ 1ನೇ ನವೆಂಬರ್ 2025 ಕ್ಕೆ ಮೊದಲ 6 ವರ್ಷಗಳ ಅವಧಿಯಲ್ಲಿ ಸೆಕೆಂಡರಿ ದರ್ಜೆಯಲ್ಲಿ ಪ್ರೌಢಶಾಲೆಗಿಂತ ಕಡಿಮೆ ಇಲ್ಲದ ನಿರ್ದಿಷ್ಟಪಡಿಸಿದಂತಹ ರಾಜ್ಯದೊಳಗಿನ ಯಾವುದೇ ಸರ್ಕಾರದಿಂದ ಮಾನ್ಯತೆ ಪಡೆದ ಶೈಕ್ಷಣಿಕ ಸಂಸ್ಥೆಗಳಲ್ಲಿ ಒಟ್ಟು ಕನಿಷ್ಠ 3 ವರ್ಷ ಬೋಧನಾ ವೃತಿಯಲ್ಲಿ ನಿರತವಾಗಿರುವ ಪ್ರತಿಯೊಬ್ಬ ವ್ಯಕ್ತಿಯು ಮತದಾರರ ಪಟ್ಟಿಯಲ್ಲಿ ತನ್ನ ಹೆಸರನ್ನು ಸೇರಿಸಲು ಅರ್ಹನಾಗಿರುತ್ತಾನೆ. ನಿರ್ದಿಷ್ಟಪಡಿಸಿದ ಶೈಕ್ಷಣಿಕ ಸಂಸ್ಥೆಗಳ ಪಟ್ಟಿಯು ಮೊದಲನೇ ಅನುಸೂಚಿಯಲ್ಲಿ ತಿಳಿಸಲಾದ ಅಧಿಕಾರಿಗಳ ಬಳಿ ಇರುತ್ತದೆ. ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಿದ ಅರ್ಜಿಗಳನ್ನು ಮತದಾರರ ನೋಂದಣಾಧಿಕಾರಿಯು ಮತದಾರರ ಪಟ್ಟಿಯಲ್ಲಿ ಸೇರ್ಪಡೆಗಾಗಿ ಪರಿಗಣಿಸತಕ್ಕದ್ದಲ್ಲ. ಸಂಸ್ಥೆಯ ಮುಖ್ಯಸ್ಥರು ಅವರ ಸಿಬ್ಬಂದಿಯವರ ಎಲ್ಲಾ ಅರ್ಜಿಗಳನ್ನು ಒಟ್ಟಾಗಿ



ಮತದಾರರ ನೋಂದಣಾಧಿಕಾರಿಗಳಿಗೆ ಕಳುಹಿಸಬಹುದು. ಒಂದೇ ಕುಟುಂಬದ ಎಲ್ಲಾ ಸದಸ್ಯರು ನಮೂನೆ 19 ರಲ್ಲಿ ಅರ್ಜಿಗಳನ್ನು ಕುಟುಂಬ ಯಾವುದಾದರೂ ಸದಸ್ಯರು ಸಲ್ಲಿಸಬಹುದು ಹಾಗೂ ಪ್ರತಿ ಸದಸ್ಯನಿಗೆ ಸಂಬಂಧಿಸಿದಂತೆ ಮೂಲ ಪ್ರಮಾಣ ಪತ್ರಗಳನ್ನು ಒದಗಿಸಿ, ಪ್ರಮಾಣ ಪತ್ರವನ್ನು ಪರಿಶೀಲಿಸಿಕೊಳ್ಳಬಹುದು.

ಅರ್ಜಿಯಲ್ಲಿನ ತಪ್ಪು ಅಥವಾ ತಪ್ಪೆಂದು ಅವನು ತಿಳಿದಿರುವ ಅಥವಾ ನಂಬುವಂತಹ ಅಥವಾ ಸತ್ಯವೆಂದು ನಂಬಲಾಗದಿರುವಂತಹ ಹೇಳಿಕೆಗಳನ್ನು ಅಥವಾ ಘೋಷಣೆಗಳನ್ನು ಮಾಡುವ ಯಾವುದೇ ವ್ಯಕ್ತಿಯನ್ನು ಪ್ರಜಾಪ್ರಾತಿನಿಧ್ಯ ಅಧಿನಿಯಮ 1950 ರ 31 ನೇ ಪ್ರಕರಣದ ಮೇರೆಗೆ ಶಿಕ್ಷೆಗೆ ಗುರಿಪಡಿಸಲಾಗುವುದು.

ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಯಾಗ ಬಯಸುವ ಪ್ರತಿಯೊಬ್ಬರು ಅರ್ಜಿ ನಮೂನೆ 19 ನ್ನು ಭರ್ತಿಮಾಡಿ ಅದರೊಂದಿಗೆ ಶೈಕ್ಷಣಿಕ ಸಂಸ್ಥೆಗಳಲ್ಲಿ 1 ನೇ ನವೆಂಬರ್ 2025 ಕ್ಕೆ ಮೊದಲು 6 ವರ್ಷಗಳ ಅವಧಿಯಲ್ಲಿ ಒಟ್ಟು ಕನಿಷ್ಠ 3 ವರ್ಷ ಬೋಧನಾ ವೃತಿಯಲ್ಲಿ ನಿರತವಾಗಿರುವ ಬಗ್ಗೆ ಶೈಕ್ಷಣಿಕ ಸಂಸ್ಥೆಗಳಿಂದ ಅನುಬಂಧ – 2 ರಲ್ಲಿ ಪ್ರಮಾಣ ಪತ್ರ ಸಲ್ಲಿಸಬೇಕು.

ಯಾವುದೇ ವ್ಯಕ್ತಿ ಅಂಚೆ ಮೂಲಕ ಮತದಾರರ ನೋಂದಣಾಧಿಕಾರಿಗಳು, ಸಹಾಯಕ ಮತದಾರರ ನೋಂದಣಾಧಿಕಾರಿಗಳು, ಗೊತ್ತುಪಡಿಸಿದ ಅಧಿಕಾರಿಗೆ ಸಲ್ಲಿಸಿದಲ್ಲಿ ಅಂತಹ ಅರ್ಜಿದಾರರಿಗೆ ಗೊತ್ತು ಪಡಿಸಿದ ಅಧಿಕಾರಿಯು ವಿಚಾರಣೆಗೆ ಹಾಜರಾಗಲು ನೋಟಿಸ್ ನೀಡುತ್ತಾರೆ. ವಿಚಾರಣೆಗೆ ಹಾಜರಾಗದೇ ಅಥವಾ ದಾಖಲೆಗಳನ್ನು ಹಾಜರುಪಡಿಸದಿದ್ದಲ್ಲಿ ಅರ್ಜಿಗಳು ತಿರಸ್ಕೃತಗೊಳ್ಳುತ್ತವೆ.

ಬಲ್ಕ (ಗುಚ್ಛಗಳಲ್ಲಿ) ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. ಆಯೋಗವು ಮುಂಬರುವ ದಿನಗಳಲ್ಲಿ ನಮೂನೆ 19 ರ ಅರ್ಜಿಗಳನ್ನು ಇಆರ್‌ಎಂಎಸ್ (ಇಖಒಖ) ನಲ್ಲಿ ಅಳವಡಿಸಲು ಉದ್ದೇಶಿಸಿರುತ್ತಾರೆ.

ಕರ್ನಾಟಕ ಈಶಾನ್ಯ ಶಿಕ್ಷಕರ ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳು ಇದ್ದಲ್ಲಿ ಮತದಾರರ ನೋಂದಣಾಧಿಕಾರಿಗಳು ಹಾಗೂ ಸಹಾಯಕ ಮತದಾರರ ನೋಂದಣಾಧಿಕಾರಿಗಳ ಕಚೇರಿಯಲ್ಲಿ ಮತ್ತು ಸಂಬಂಧಪಟ್ಟ ವಿಧಾನಸಭಾ ಮತಕ್ಷೇತ್ರದ ಸಹಾಯಕ ಮತದಾರರ ನೋಂದಣಾಧಿಕಾರಿಗಳ ಕಾರ್ಯಾಲಯದಲ್ಲಿ (ಮಹಾನಗರ ಪಾಲಿಕೆ ಹಾಗೂ ತಹಸೀಲ್ ಕಾರ್ಯಾಲಯದಲ್ಲಿ) ನಿಗದಿಪಡಿಸಿದ ಕಾಲಮಿತಿಯೊಳಗೆ ಸಲ್ಲಿಸಬಹುದಾಗಿದೆ.

ಅರ್ಹ ಶಿಕ್ಷಕರು ಹೆಚ್ಚಿನ ಆಸಕ್ತಿ ವಹಿಸಿ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಸುಭದ್ರ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸುವಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳಬೇಕು ಎಂದು ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಸಹಾಯಕ ಮತದಾರರ ನೋಂದಣಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಿಜೆಪಿಯಿಂದ ಗಾಂಧೀಜಿ, ಶಾಸ್ತ್ರೀ ಜಯಂತಿ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಅ.2–ದೇಶದ ಸ್ವಾತಂತ್ರ್ಯ ಹೋರಾಟದ ರೂವಾರಿ ಮಹಾತ್ಮಾ ಗಾಂಧಿಜಿಯವರು ಸ್ವಚ್ಛತೆ ಹಾಗೂ ಅಹಿಂಸಾ ಮಹತ್ವ ಸಾರಿದರೆ, ಲಾಲ್‌ಬಹದ್ದೂರ ಶಾಸ್ತ್ರೀಜಿಯವರು ಪ್ರಾಮಾಣಿಕತೆಯ ತತ್ವ ಸಾರಿದರು ಎಂದು ಮಾಜಿ ಶಾಸಕ ವೀರಣ್ಣ ಚರಂತಿಮಠ ಹೇಳಿದರು.



ನಗರದ ಶಿವಾನಂದ ಜೀನಲ್ಲಿರುವ ಬಿಜೆಪಿ ಕಾರ್ಯಾಲಯದಲ್ಲಿ ಭಾರತೀಯ ಜನತಾ ಪಕ್ಷದ ಬಾಗಲಕೋಟೆ ಮತಕ್ಷೇತ್ರದಿಂದ ಹಮ್ಮಿಕೊಂಡ ಮಹಾತ್ಮಾ ಗಾಂಧಿ ಜಯಂತಿ ಹಾಗೂ ಲಾಲ್ ಬಹದ್ದೂರ ಶಾಸ್ತ್ರಿ ಜಯಂತಿ ನಿಮಿತ್ಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚಣೆ ಮಾಡಿ ಗೌರವ ನಮನ ಸಲ್ಲಿಸಿ ಮಾತನಾಡಿದರು.

ದಂಡಿ ಸತ್ಯಾಗ್ರಹ, ಕ್ವಿಟ್ ಇಂಡಿಂ–ಯಾ, ಸ್ವದೇಶಿ ಚಳುವಳಿಯಂತಹ ಅನೇಕ ಹೋರಾಟಗಳ ರೂವಾರಿ, ಜೀವನದಲ್ಲಿ ಸತ್ಯ, ಅಹಿಂಸೆ, ಸ್ವಚ್ಛತೆಯ ಮಹತ್ವವನ್ನು ರಾಷ್ಟ್ರಪಿತ ಮಹಾತ್ಮ ಗಾಂಧಿಹಿಯವರು ಸಾರಿದರು, ದೇಶಕ್ಕೆ ಜೈ ಜವಾನ ಜೈ ಕಿಸಾನ್ ಎಂಬ ಸಂದೇಶ ಸಾರಿದ ಲಾಲ್ ಬಹುದ್ದೂರ ಶಾಸ್ತ್ರಿಜಿಯವರ ಪ್ರಾಮಾಣಿಕತೆಯ ಆಡಳಿತ ಎಲ್ಲರಿಗೂ ಆದರ್ಶ ಎಂದರು. ಕಾರ್ಯಕ್ರಮದಲ್ಲಿ ಡಾ.ಎಂ.ಎಸ್. ದಡ್ಡೆನ್ನವರ, ಗುಂಡುರಾವ ಶಿಂಧೆ. ಬಸವರಾಜ ಯಂಕಂಚಿ, ಶಿವಾನಂದ ಟವಳಿ, ಸತ್ಯನಾರಾಯಣ ಹೇಮಾದ್ರಿ, ಬಸವರಾಜ ಹುನಗುಂದ, ಶ್ರಿಧರ ನಾಗರಬೆಟ್ಟ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಸ್ವಸ್ಥ ಬದುಕಿಗೆ ಗಾಂಧೀಜಿ, ಶಾಸ್ತ್ರೀಜಿ ತತ್ವಗಳು ದಾರಿದೀಪ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಅ.2–ಯುವ ಸಮೂಹ ಆದರ್ಶ ಬದುಕಿಗೆ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹುದ್ದೂರ್ ಶಾಸ್ತ್ರಿಯವರ ಜೀವನದ ತತ್ವಗಳನ್ನು ಅಳವಡಿಸಿಕೊಳ್ಳಬೇಕು. ಸ್ವಸ್ಥ ಬದು–ಕಿಗೆ ಗಾಂಧೀಜಿ, ಶಾಸ್ತ್ರೀಜಿಯವರ ತತ್ವಗಳು ದಾರಿದೀಪವಾಗಿವೆ ಎಂದು ಪ್ರಾಚಾರ್ಯ ಅರುಣಕುಮಾರ ಗಾಳಿ ಹೇಳಿದರು. ಬಾಗಲಕೋಟೆ ನವನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಗುರುವಾರ ನಡೆದ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹುದ್ದೂರ್ ಶಾಸ್ತ್ರೀಜಿಯವರ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಪಣೆ ಮಾಡಿ ಅವರು ಮಾತನಾಡಿದರು. ಮಹಾತ್ಮ ಗಾಂಧೀಜಿಯವರು ದೇಶದ ಬಡತನ ನಿವಾರಣೆಗಾಗಿ, ಅಸ್ಪೃಶ್ಯತೆಯನ್ನು ಕೊನೆಗೊಳಿಸುವುದಕ್ಕಾಗಿ, ಮಹಿಳಾ ಹಕ್ಕುಗಳನ್ನು ಜಾರಿಗೊಳಿಸಲು ಮತ್ತು ಧಾರ್ಮಿಕ ಹಾಗೂ ಜನಾಂಗೀಯ ಸೌಹಾರ್ದತೆಯನ್ನು ತರಲು ಪರಿಶ್ರಮ ಪಟ್ಟಿದ್ದಾರೆ. ಅವರು ಸ್ವಾವಲಂಬಿ ವಸತಿ ಸಮುದಾಯದಲ್ಲಿ ವಾಸಿಸುವ ಸರಳತೆ ಮೂಲಕ ಸಾಮಾಜಿಕ ಸಮಾನತೆಗೆ ಬನಾದಿ ಹಾಕಿದ್ದಾರೆ. ಗಾಂಧೀಜಿಯವರ ಸಾಮಾಜಿಕ ಸೇವಾ ಮನೋಭಾವನೆಯನ್ನು ನಾವು ಬೆಳೆಸಿಕೊಳ್ಳಬೇಕು ಎಂದರು.



ದೇಶದ ಎರಡನೆಯ ಪ್ರಧಾನಮಂತ್ರಿ ಲಾಲ್ ಬಹೂದ್ದೂರ್ ಶಾಸ್ತ್ರೀ ಅವರ ನೀಡಿರುವ ಜೈ ಜವಾನ್, ಜೈ ಕಿಸಾನ್ ಎಂಬ ಸಂದೇಶದ ಮೂಲಕ ದೇಶದ ಅಭಿವೃದ್ಧಿಗೆ ಹೊಸ ಹೊಳಪು ನೀಡಿದ್ದಾರೆ. ವಿಶ್ವಸಂಸ್ಥೆಯಲ್ಲಿ ಕಾಶ್ಮೀರವು ಭಾರತದ ಅವಿಭಾಜ್ಯ ಅಂಗವೆಂದು ಗಟ್ಟಿಯಾದ ಧ್ವನಿಯಲ್ಲಿ ಹೇಳಿದ ದೇಶದ ಧೀಮಂತ ನಾಯಕರಾಗಿದ್ದಾರೆ. ಅವರ ಸರಳ ಜೀವನದ ಆದರ್ಶವಾದ ಮೌಲ್ಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಸಮಾಜದಲ್ಲಿ ಉತ್ತಮವಾದ ಬದುಕು ಕಟ್ಟಿಕೊಳ್ಳಲು ಸಾಧ್ಯವಿದೆ ಎಂದರು.

# ಡಾ.ಅಂಬೇಡ್ಕರ ವಿಚಾರಗಳ ಬಗ್ಗೆ ಅರಿವು ಮೂಡಿಸಿ:ನೀಲನಾಯಕ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಅ.2–ಸಮಸಮಾಜ ನಿರ್ಮಾಣವಾಗಲು ಅಂಬೇಡ್ಕರ್ ಆಶಯದಂತೆ ಎಲ್ಲಾ ಶೋಷಿತರಿಗೂ ಶಿಕ್ಷಣ ದೊರಕಬೇಕು. ದೀಕ್ಷಾಭೂಮಿ ಯಾತ್ರಿಕರು ಪ್ರವಾಸಕ್ಕೆ ಸೀಮಿತವಾಗದೆ ಅಂಬೇಡ್ಕರ್ ವಿಚಾರಧಾರೆಗಳನ್ನು ಅಳವಡಿಸಿಕೊಂಡು ಇತರರಿಗೂ ಆ ಬಗ್ಗೆ ಅರಿವು ಮೂಡಿಸಬೇಕು ಎಂದು ದಲಿತ ಸಂಘರ್ಷ ಸಮಿತಿ (ಭೀಮವಾದ) ರಾಜ್ಯ ಸಂಘಟನಾ ಸಂಚಾಲಕ ಪರಸುರಾಮ ನೀಲನಾಯಕ ಹೇಳಿದರು.



ದೀಕ್ಷಾಭೂಮಿ ಯಾತ್ರೆ ತೆರಳಿರುವ ಬಾಗಲಕೋಟ ಜಿಲ್ಲೆಯ 350 ಅಂಬೇಡ್ಕರ್ ಅನುಯಾಯಿಗಳನ್ನು ಉದ್ದೇಶಿಸಿ ನಾಗಪುರದಲ್ಲಿ ಅವರು ಮಾತನಾಡಿ, ವಿಶ್ವಮೆಚ್ಚುವ ಸಂವಿಧಾನ ರಚಿಸಿರುವ ಅಂಬೇಡ್ಕರ್ ಅವರ ಪಂಚಧಾಮಗಳಲ್ಲಿ ಒಂದಾಗಿರುವ ನಾಗಪುರ ದೀಕ್ಷಾಭೂಮಿಯಲ್ಲಿರುವ ಅವರ ವಿಚಾರಧಾರೆಗಳನ್ನು ಯಾತ್ರಿಕರು ಅರಿತುಕೊಳ್ಳಬೇಕು. ವಾಪಸ್ ಹೋದ ಬಳಿಕ ಕನಿಷ್ಠ ತಲಾ 10 ಜನರಿಗೆ ತಲುಪಿಸಬೇಕು ಎಂದು ಹೇಳಿದರು.

ಸಾಕ್ಷರತೆಯಲ್ಲಿ ಕೇರಳ ರಾಜ್ಯ ಮೊದಲ ಸ್ಥಾನದಲ್ಲಿದ್ದು, ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಶಿಕ್ಷಣ–ಕ್ಕೆ ಹೆಚ್ಚು ಆದ್ಯತೆ ನೀಡಬೇಕೆಂಬ ಅಂಬೇಡ್ಕರ್ ವಿಚಾರಗಳನ್ನು ಮನೆ–ಮನೆಗೆ ಮುಟ್ಟಿಸುವ ಕೆಲಸವನ್ನು ದೀಕ್ಷಾಭೂಮಿ ಯಾತ್ರಾರ್ಥಿಗಳು ಮಾಡಬೇಕು ಎಂದು ಅವರು ತಿಳಿಸಿದರು.

ಡಾ.ರವಿ ಪದಗುಣಕಿ ವಿಜಯಪುರ ಜಿಲ್ಲೆಯ ನಿಯೋಗದ ನೇತೃತ್ವ ವಹಿಸಿದ್ದರು. ಬಾಗಲಕೋಟೆಯ ಶನಸು ಬಂಡಿ ಮೊದಲಾದವರು ಈ ಸಂದರ್ಬದಲ್ಲಿ ಉಪಸ್ಥಿತರಿದ್ದರು.

# ನೀಲಾನಗರದಲ್ಲಿ ಸಂಭ್ರಮದ ದುರ್ಗಾದೇವಿ ಜಾತ್ರೆ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಅ.2–ತಾಲೂಕಿನ ನೀಲಾನಗರದಲಿ ಎರಡು ದಿನಗಳ ಕಾಲ ಶಕ್ತಿ ದೇವತೆ ದುರ್ಗಾದೇವಿ ಜಾತ್ರೆ ಸಂಭ್ರಮ, ಸಡಗರದಿಂದ ಜರುಗಿತು.



ಬುಧವಾರ ಬೆಳಿಗ್ಗೆ ದುರ್ಗಾದೇವಿ ಶಕ್ತಿಪೀಠದ ಕುಮಾರ ಮಹಾರಾಜರ ನೇತೃತ್ವದಲ್ಲಿ ದೇವಿ ಮೂರ್ತಿಗೆ ವಿಶೇಷ ಪೂಜೆ, ಮಹಾಮಂಗಳಾರತಿ ಜರುಗಿತು. ನಂತರ ಲಿಂ.ನೀಲಾಸಾಧ ಹಾಗೂ ಲಿಂ.ಪೋಮಾಸಾಧ ಮಹಾರಾಜರ ಮೂರ್ತಿಯುಳ್ಳ ಪಲ್ಲಕ್ಕಿ ಉತ್ಸವ ಗ್ರಾಮದ ವಿವಿಧ ಓಣಿಗಳಲ್ಲಿ ಲಂಬಾಣಿ ಭಜನೆ ಹಾಗೂ ವಿವಿಧ ವಾದ್ಯ ವೈಭವಗಳೊಂದಿಗೆ ನಡೆಯಿತು.

ಮಧ್ಯಾಹ್ನ ನೀಲಾನಗರ ಸೇರಿ ರಾಜ್ಯ ಹಾಗೂ ವಿವಿಧ ರಾಜ್ಯಗಳಿಂದ ಆಗಮಿಸಿದ್ದ ಭಕ್ತರು ದೇವಿಗೆ ಹರಕೆ ತೀರಿಸಿದರು. ಸಂಜೆಯಿಂದ ರಾತ್ರಿಯಿಡಿ ವಿವಿಧ ಗ್ರಾಮಗಳ ಬಂಜಾರಾ ಭಜನಾ ತಂಡಗಳಿಂದ ಭಜನೆ ಜರುಗಿತು. ಜಾತ್ರೆಯ ನಿಮಿತ್ತ ನಾಟಕ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಗುರುವಾರ ಕುಸ್ತಿ ಹಾಗೂ ಕ್ರಿಕೆಟ್ ಪಂದ್ಯಾವಳಿ ಸೇರಿದಂತೆ ವಿವಿಧ ಕ್ರೀಡಾ ಸ್ಪರ್ಧೆಗಳು ಜರುಗಿದವು. ಗೋವಾ, ಮಹಾರಾಷ್ಟ್ರದಿಂದ ಭಕ್ತರು ಆಗಮಿಸಿದ್ದು, ರಾಯಚೂರು, ವಿಜಯಪುರ, ಕಲಬುರ್ಗಿ ಜಿಲ್ಲೆಯ ಭಕ್ತರೂ ಜಾತ್ರೆಯಲ್ಲಿ ಪಾಲ್ಗೊಂಡಿದ್ದರು. ಬಾಗಲಕೋಟೆಯ ಗ್ರಾಮೀಣ ಪೋಲಿಸ್ ಠಾಣೆಯ ಪಿಎ ಗಿರೀಶ ನೇತೃತ್ವದಲ್ಲಿ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಜಾತ್ರೆಗೆ ಬಂದ ಭಕ್ತರಿಗೆ ಆರೋಗ್ಯ ಇಲಾಖೆ ಚಿಕಿತ್ಸಾ ವ್ಯವಸ್ಥೆ ಮಾಡಿತ್ತು.

ಜಾತ್ರಾ ಮಹೋತ್ಸವ ಕಾರ್ಯಕ್ರಮದಲ್ಲಿ ಗ್ರಾಮದ ಹಿರಿಯರಾದ ನಾಗೇಶ ಪೂಜಾರಿ, ಈರಪ್ಪ ಪೂಜಾರಿ, ಜಿಪಂ ಮಾಜಿ ಸದಸ್ಯ ರಂಗನಗೌಡ ಗೌಡರ, ಕಲಬುರ್ಗಿ ವಿವಿಯ ವಿಶ್ರಾಂತ ಕುಲಪತಿ ಪಿ.ಕೆ.ಖಂಡೋಬಾ, ಕೆ.ಡಿ.ಗೌಡರ, ರಮೇಶ ಕಟ್ಟಿಮನಿ, ಶಂಕರ ದೊಡಮನಿ, ಗೋಕುಲ ದೊಡಮನಿ, ಮೇಘಪ್ಪಪಮ್ಮಾರ, ವಿಷ್ಣು ಪೂಜಾರಿ, ಗೋಪಾಲ ಗಚ್ಚಿನಮನಿ,

## ಸಾಧಕರಿಗೆ ಪ್ರಶಸ್ತಿ ಪ್ರದಾನ

ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ: ವಿವಿಧಕ್ಷೇತ್ರಗಳಲ್ಲಿ ತೆರೆಮೆರೆಯ ಎಲೆಯಕಾಯಿಗಳಂತೆ ಸೇವೆ ಸಲ್ಲಿಸಿರುವ ಸಾಧಕರನ್ನು ಗುರುತಿಸಿ ಅವರಿಗೆ ಪ್ರಶಸ್ತಿ ನೀಡಿ ಗೌರವಿಸುತ್ತಿರುವ ಬೀದಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಜಗನ್ನಾಥ ಸೂರ್ಯವಂಶಿ ಅವರ ಸೇವೆ ಶ್ಲಾಘನೀಯ ವಾಗಿದೆ ಎಂದು ಕಾಂಗ್ರೆಸ್ ಪಕ್ಷದ ಹಿತಿಯ ಮುಖಂಡರಾದ ನೀಲಕಂಠರಾವ ಮೂಲಗೆ ಅವರು ಹೇಳಿದರು.

# ಬಾಗಲಕೋಟೆಯಲ್ಲಿ ಗಾಂಧಿ, ಶಾಸ್ತ್ರೀ ಜಯಂತಿ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಅ.2–ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಶ್ರಯದಲ್ಲಿ ಗಾಂಧಿ ಜಯಂತಿ ಹಾಗೂ ಲಾಲಬಹದ್ದೂರ ಶಾಸ್ತ್ರೀಯವರ ಜನ್ಮದಿನಾಚರಣೆಯನ್ನು ಜಿಲ್ಲಾಡಳಿತದ ಮುಖ್ಯದ್ವಾರದಲ್ಲಿ ಗುರುವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು.



ಶಾಸಕ ಹಾಗೂ ಬಿಟಿಡಿಎ ಅಧ್ಯಕ್ಷ ಎಚ್.ವಾಯ್.ಮೇಟಿ, ವಿಧಾನಪರಿಷತ್ ಶಾಸಕ ಪಿ.ಎಚ್.ಪೂಜಾರ, ನಗರಸಭೆ ಅಧ್ಯಕ್ಷೆ ಸವಿತಾ ಲೆಂಕೆಣ್ಣವರ, ಮಾಜಿ ಶಾಸಕ ಎಸ್.ಜಿ.ನಂಜಯ್ಯನಮಠ, ಜಿಲ್ಲಾಧಿಕಾರಿ ಸಂಗಪ್ಪ, ಜಿ.ಪಂ ಸಿಇಓ ಶಶಿಧರ ಕುರೇರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಸೇರಿದಂತೆ ಇತರರು ಗಾಂಧಿ ಹಾಗೂ ಶಾಸ್ತ್ರೀಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆಗೈದು ನಮನ ಸಲ್ಲಿಸಿದರು.

ವಿವಿಧ ಧರ್ಮಗಳ ಗುರುಗಳಾದ ಸಂಸ್ಕೃತಪಂಡಿತಬಿಂಧುಮಾಧವಾಚಾರ್ಯ ನಾಗಸಂಪಗಿ ಭಗವದ್ಗೀತೆ, ಆಸೀಫ್ ಎಲ್. ಮುದಗಲ್ಲ ಕುರಾನ ಹಾಗೂ ಫ್ರೆಡ್ಡಿರಾಜ ಬೈಬಲ್ ಪಠಣ ಮಾಡಿದರು. ಬಸವೇಶ್ವರ ಕಲಾ ಮಹಾವಿದ್ಯಾಲಯದ ಪ್ರೊ.ಆರ್.ಎಂ.ಬೆಣ್ಣೂರ ಮತ್ತು ಸಂಗೀತ ವಿಭಾಗದ ವಿದ್ಯಾರ್ಥಿಗಳು ಸರ್ವಧರ್ಮ ಪ್ರಾರ್ಥನೆ ಮತ್ತು ವೈಷ್ಣವ ಜನತೋತನೆ, ರಘುಪತಿ ರಾಘವ ರಾಜಾರಾಮ ಗೀತೆ ಹಾಡಿದರು.

ಕಾರ್ಯಕ್ರಮದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎ.ಸಿ.ಮನ್ನಿಕೇರಿ, ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪನಿರ್ದೇಶಕಿ ಫೀರಜಾದೆ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಪಂಕಜ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಪುಂಡಲೀಕ ಕಾಂಬಳೆ, ಜಿಲ್ಲಾ ವಾರ್ತಾಧಿಕಾರಿ ಕಸ್ತೂರಿ ಪಾಟೀಲ, ಕ್ಷೇತ್ರ ಶಿಕ್ಷಣಾಧಿಕಾರಿ ಜಾಸ್ಮೀನ್ ಕಿಲ್ಲೇದಾರ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಮಹಾತ್ಮಾಗಾಂಧೀಯವರ 156ನೇ ಜಯಂತಿ ಅಂಗವಾಗಿ ಹಮ್ಮಿಕೊಂಡ ಜಿಲ್ಲಾ ಮಟ್ಟದ ಬಾಪೂಜಿ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಶಸ್ತಿ ಪತ್ರ ಹಾಗೂ ನಗದು ಬಹುಮಾನವನ್ನು ವಿತರಿಸಲಾಯಿತು.

ಪ್ರೌಢಶಾಲಾ ವಿಭಾಗದಲ್ಲಿ ವೈಷ್ಣವಿ ಕರಲಟ್ಟಿ (ಪ್ರಥಮ), ನವ್ಯಶ್ರೀ ಹುಡೇದ (ದ್ವಿತೀಯ), ಸೌಮ್ಯ ಸಂತಪ್ಪನವರ (ತೃತೀಯ), ಕಾಲೇಜು ವಿಭಾಗದಲ್ಲಿ ಸಂಗೀತಾ ಬಾಗೋಡಿ (ಪ್ರಥಮ), ಕಾವೇರಿ ವಿಭೂತಿ (ದ್ವಿತೀಯ), ಪೂಜಾ ಅಗಸದವರ (ತೃತೀಯ), ಪದವಿ, ಸ್ನಾತಕೋತ್ತರ ವಿಭಾಗದಲ್ಲಿ ಶ್ರೀದೇವಿ ಕೋನಪ್ಪನವರ (ಪ್ರಥಮ), ಸ್ವಾತಿ ರಾಠೋಡ (ದ್ವಿತೀಯ), ಜ್ಯೋತಿ ಸಿದ್ದಾಪೂರ (ತೃತೀಯ) ಸ್ಥಾನ ಪಡೆದುಕೊಂಡರು.

## ದಸರಾ ಸ್ನೇಹಮಿಲನ ಅಕ್ಟೋಬರ್ 5ರಂದು


ಬೀದರ. ಅ. 02 : ರಾಜಪೂತ ಕ್ಷತ್ರಿಯ ಸಮಾಜದ ವತಿಯಿಂದ ದಸರಾ ಸ್ನೇಹಮಿಲನವನ್ನು ಅಕ್ಟೋಬರ್ 5 ರಂದು, ಭಾನುವಾರ ಬೆಳಿಗ್ಗೆ 11 ಗಂಟೆಗೆ ನಗರದಲ್ಲಿನ ಶಿವನಗರದ ಹೋಟೆಲ್ ಲಕ್ಷ್ಮಿ ಇಂಟರ್‌ನ್ಯಾಶನಲ್‌ನಲ್ಲಿ ಏರ್ಪಡಿಸಲಾಗಿದೆ.

ಈ ಕಾರ್ಯಕ್ರಮಕ್ಕೆ ಸಮಾಜದ ಅಧ್ಯಕ್ಷರಾದ ಶ್ರೀ ಪ್ರಫುಲ್ ಕುಮಾರ್ ಪಾಂಡೆ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

# ಸಮಾನತೆಗಾಗಿ ಕಲ್ಯಾಣ ಕ್ರಾಂತಿ

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಅ.2:12ನೇ ಶತಮಾನದಲ್ಲಿ ಬಸವಾದಿ ಶರಣರು ತತ್ವಸಿದ್ಧಾಂತ, ಸಮಾನತೆಗಾಗಿ ಕಲ್ಯಾಣ ಕ್ರಾಂತಿ ನಡೆಸಿದ್ದರು ಎಂದು ಸಂಸದ ಸಾಗರ ಖಂಡ್ರೆ ಹೇಳಿದರು. ಪಟ್ಟಣದ ಹಿರೇಮಠ ಸಂಸ್ಥಾನದಲ್ಲಿ ವಿಜಯದಶಮಿ ನಿಮಿತ್ತ ಗುರುವಾರ ಆಯೋಜಿಸಿದ್ದ ಮರಣವೇ ಮಹಾನವಮಿ ಮತ್ತು ಕಲ್ಯಾಣ ವಿಜಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು ಸಾರ್ಥಕ ಬದುಕಿಗೆ ವಚನ ಸಾಹಿತ್ಯ ದಾರಿದೀಪವಾಗಿದೆ. ಎಲ್ಲರೂ ಬಸವಾದಿ ಶರಣರ ವಚನಗಳನ್ನು ಅರ್ಥೈಸಿಕೊಂಡು ಉತ್ತಮ ಜೀವನ ರೂಪಿಸಿ ಕೊಳ್ಳಬೇಕು ಎಂದು ತಿಳಿಸಿದರು. ಮಾಜಿ ಶಾಸಕ ಪ್ರಕಾಶ ಖಂಡ್ರೆ ಮಾತನಾಡಿ, ಬಸವಾದಿ



ಶರಣರು ಸಮಸಮಾಜದ ನಿರ್ಮಾಣಕ್ಕಾಗಿ ರಕ್ತವನ್ನು ಹರಿಸಿದ್ದರು. ಅಂತಹ ಶರಣರ ಆದರ್ಶಗಳನ್ನು ಎಲ್ಲರೂ ಅನುಸರಿಸಬೇಕು ಎಂದು ತಿಳಿಸಿದರು. ಸಾನ್ನಿಧ್ಯ ವಹಿಸಿದ್ದ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಮಾತನಾಡಿ, ಅಸಮಾನತೆ ನಿವಾರಣೆಗಾಗಿ ಬಸವಾದಿ ಶರಣರು ಮಹಾನವಮಿ ದಿನದಂದು ಏಳುಹೋಟಿ ಶಿಕ್ಷೆ ಅನುಭವಿಸಿದ್ದರು. ಆದರೆ ತಮ್ಮ ತತ್ವಸಿದ್ದಾಂತ ಬಿಟ್ಟು ಕೊಡಲಿಲ್ಲ. ಆ ಕಾರಣಕ್ಕಾಗಿಯೇ ವಿಜಯದಶಮಿ ಮಹಾನವಮಿ ದಿನದಂದು ಮರಣವೇ ಮಹಾಮವಮಿ, ಕಲ್ಯಾಣ ಕ್ರಾಂತಿ ವಿಜಯೋತ್ಸವ ಆಚರಿಸಲಾಗುತ್ತದೆ ಎಂದು ತಿಳಿಸಿದರು. ಬಸವಲಿಂಗ ಸ್ವಾಮೀಜಿ, ಬಸವಲಿಂಗ ಸ್ವಾಮೀಜಿ, ಶಿವಬಸವ ಸ್ವಾಮೀಜಿ ಸಮ್ಮುಖ ವಹಿಸಿದ್ದರು. ರಾಜು ಜುಬರೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ಪುರಸಭೆ ಮಾಜಿ ಅಧ್ಯಕ್ಷ ಚಂದ್ರಕಾಂತ ಪಾಟೀಲ್, ಯುವ ಮುಖಂಡ ಶಿವು ಲೋಖಂಡೆ, ಕಿರಣ ಖಂಡ್ರೆ, ಸಂಗಮೇಶ ಹುಣಜೆ ಮದಕಟ್ಟಿ, ಸಂತೋಷ ಬಿಜಿ ಪಾಟೀಲ್, ಚನ್ನಬಸವ ವಂಕೆ, ಸಿದ್ದು ವಾಲೆ ಸೇರಿದಂತೆ ಹಲವರು ಇದ್ದರು. ಸವಿತಾ ಭೂರೆ ಸ್ವಾಗತಿಸಿದರು. ದೀಪಕ ಠಮಕೆ ನಿರೂಪಿಸಿದರು.

# ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆ : ಸಹಾಯಕ ಮತದಾರರ ನೊಂದಣಾಧಿಕಾರಿಗಳ ನೇಮಕ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ ಅಕ್ಟೋಬರ್ ;2– ಭಾರತ ಚುನಾವಣಾ ಆಯೋಗವು ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರನ್ನು,ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರರ ನೋಂದಣಾಧಿಕಾರಿಯನ್ನಾಗಿ ಹಾಗೂ ಈ ಚುನಾವಣಾ ಕ್ಷೇತ್ರ ವ್ಯಾಪ್ತಿಗೊಳಪಡುವ ವಿಭಾಗದ ಎಲ್ಲಾ ಜಿಲ್ಲಾಧಿಕಾರಿಗಳನ್ನು, ಮಹಾನಗರ ಪಾಲಿಕೆ ಆಯುಕ್ತರು,ಹಾಗೂ ಬಳ್ಳಾರಿ, ಕಲಬುರಗಿ ವಿಭಾಗದ ಆಯಾ ಉಪ ವಿಭಾಗಕ್ಕೆ ಸಂಬಂಧಪಟ್ಟ ಎಲ್ಲಾ ಸಹಾಯಕ ಆಯುಕ್ತರು, ವಿಭಾಗದ ಎಲ್ಲಾ ಸಂಬಂಧಪಟ್ಟ ತಾಲೂಕಿನ ತಹಸೀಲ್ದಾರರನ್ನು ಸಹಾಯಕ ಮತದಾರರನೊಂದಣಾಧಿಕಾರಿಯನ್ನಾಗಿ ನೇಮಿಸಲಾಗಿದ್ದು,ಅರ್ಹತಾ ದಿನಾಂಕ 01.11.2025 ಕ್ಕೆ ಅನ್ವಯಿಸುವಂತೆ ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಯು ನೂತನವಾಗಿ ಸಿದ್ಧಪಡಿಸುವ ಕಾರ್ಯವು ಈಗಾಗಲೇ ಪ್ರಾರಂಭವಾಗಿದೆ ಎಂದು ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಸಹಾಯಕ ಮತದಾರರನೋಂದಣಾಧಿಕಾರಿಗಳಾದ ಹರ್ಷಲ್ ಭೋಯರ್ ಅವರು ತಿಳಿಸಿದ್ದಾರೆ.

ಭಾರತ ಚುನಾವಣಾ ಆಯೋಗವು ದಿನಾಂಕ12.09.2025ರ ಪತ್ರದನ್ವಯ ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಯು ಹೊಸದಾಗಿ ಸಿದ್ಧಪಡಿಸಲಾಗುತ್ತಿರುವುದರಿಂದ ಈ ಹಿಂದಿನ ಮತದಾರರ ಪಟ್ಟಿಯಲ್ಲಿ ಹೆಸರು ಇರುವ ಮತದಾರರು ಸಹ ನಮೂನೆ 19ರಲ್ಲಿ ಹೊಸದಾಗಿ ಅರ್ಜಿ ಸಲ್ಲಿಸಬೇಕಾಗಿರುತ್ತದೆಂದು ನಿರ್ದೇಶನ ನೀಡಿರುತ್ತಾರೆ.

ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳಲು ಅರ್ಜಿ ನಮೂನೆ 19 ರಲ್ಲಿ ಅರ್ಜಿಯನ್ನು 2025ರ ನವಂಬರ್ 06 (ಗುರುವಾರ) ರಂದು ಸ್ವೀಕರಿಸುವ ಕೊನೆಚು ದಿನವಾಗಿದೆ.

ಕರಡು ಮತದಾರರ ಪಟ್ಟಿಯನ್ನು 2025ರ ನವಂಬರ್ 25 (ಮಂಗಳವಾರ)ದಂದು ಪ್ರಕಟಣೆ ಮಾಡಲಾಗುವ್ವದು. ಹಕ್ಕು ಮತ್ತು ಆಕ್ಷೇಪಣೆಗಳನ್ನು 2025ರ ನವಂಬರ್ 25 (ಮಂಗಳವಾರ)ದಿಂದ ಡಿಸೆಂಬರ್ 10ರವರೆಗೆ ಅವಧಿ ನೀಡಲಾಗಿದೆ. ಅಂತಿಮ ಮತದಾರರ ಪಟ್ಟಿಯನ್ನು ಡಿಸೆಂಬರ್ 30ರಂದು ಪ್ರಕಟಣೆ ಮಾಡಲಾಗುತ್ತದೆ.

ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರು ನೊಂದಾಯಿಸಲು ಭಾರತದ ಪ್ರಜೇಯಾಗಿರುವ, ಆಯಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸಾಮಾನ್ಯ ನಿವಾಸಿಯಾಗಿರುವ ಹಾಗೂ 1ನೇ ನವೆಂಬರ್ 2025 ಕ್ಕೆ ಮೊದಲ 6 ವಷಗಳ ಅವಧಿಯಲ್ಲಿ ಸೆಕೆಂಡರಿ ದರ್ಜೆಯಲ್ಲಿ ಪ್ರೌಢ ಶಾಲೆಗಿಂತ ಕಡಿಮೆ ಇಲ್ಲದ ನಿರ್ಧಿಷ್ಟಪಡಿಸಿದಂತಹ ರಾಜ್ಯದೊಳಗಿನ ಯಾವುದೇ ಸರ್ಕಾರದಿಂದ ಮಾನ್ಯತೆ ಪಡೆದ ಶೈಕ್ಷಣಿಕ ಸಂಸ್ಥೆಗಳಲ್ಲಿ ಒಟ್ಟು ಕನಿಷ್ಠ 3 ವರ್ಷ ಬೋಧನಾ ವೃತ್ತಿಯಲ್ಲಿ ನಿರತವಾಗಿರುವ ಪ್ರತಿಯೊಬ್ಬ ವ್ಯಕ್ತಿಯು ಮತದಾರರ ಪಟ್ಟಿಯಲ್ಲಿ ತನ್ನ ಹೆಸರನ್ನು ಸೇರಿಸಲು ಅರ್ಹನಾಗಿರುತ್ತಾನೆ. ಹಾಗೆ ನಿರ್ಧಷ್ಟಪಡಿಸಿದ ಶೈಕ್ಷಣಿಕ ಸಂಸ್ಥೆಗಳ ಪಟ್ಟಿಯು ಮೊದಲನೇ ಅನುಸೂಚಿಯಲ್ಲಿ ತಿಳಿಸಲಾದ ಅಧಿಕಾರಿಗಳ ಬಳಿ ಇರುತ್ತದೆ.

ಖುದ್ದಾಗಿ ಅಥವಾ ಅಂಚೆ ಮುಖಾಂತರ ಒಟ್ಟಾರೆಯಾಗಿ ಸಲ್ಲಿಸಿದ ಅರ್ಜಿಗಳನ್ನು ಮತದಾರರ ನೋಂದಣಾಧಿಕಾರಿಯು ಮತದಾರರ ಪಟ್ಟಿಯಲ್ಲಿ ಸೇರ್ಪಡೆಗಾಗಿ ಪರಿಗಣಿಸತಕ್ಕದ್ದಲ್ಲ. ಆದರೆ ಸಂಸ್ಥೆಯ ಮುಖ್ಯಸ್ಥರು ಅವರ ಸಿಬ್ಬಂದಿಯವರ ಎಲ್ಲಾ ಅರ್ಜಿಗಳನ್ನು ಒಟ್ಟಾಗಿ ಮತದಾರರ ನೋಂದಣಾಧಿಕಾರಿಗಳಿಗೆ ಕಳುಹಿಸಬಹುದು. ಒಂದೇ ಕುಟಂಬದ ಎಲ್ಲಾ ಸದಸ್ಯರು ನಮೂನೆ 19 ರಲ್ಲಿ ಅರ್ಜಿಗಳನ್ನು ಕುಟುಂಬ ಯಾವುದಾದರೂ ಸದಸ್ಯರು ಸಲ್ಲಿಸಬಹುದು ಹಾಗೂ ಪ್ರತಿ ಸದಸ್ಯನಿಗೆ ಸಂಬಂಧಿಸದಂತೆ ಮೂಲ ಪ್ರಮಾಣ ಪತ್ರಗಳನ್ನು ಒದಗಿಸಿ, ಪ್ರಮಾಣ ಪತ್ರವನ್ನು ಪರಿಶೀಲಿಸಿಕೊಳ್ಳಬೇಕು.

ಅರ್ಜಿಯಲ್ಲಿನ ತಪ್ಪು ಅಥವಾ ತಪ್ಪೆಂದು ಅವನು ತಿಳಿದಿರುವ ಅಥವಾ ನಂಬುವಂತಹ ಅಥವಾ ಸತ್ಯವೆಂದು ನಂಬಲಾಗದಿರುವಂತಹ ಹೇಳಿಕೆಗಳನ್ನು ಅಥವಾ ಘೋಷಣೆಗಳನ್ನು ಮಾಡುವ ಯಾವುದೇ ವ್ಯಕ್ತಿಯನ್ನು ಪ್ರಜಾಪ್ರಾತಿನಿಧ್ಯ ಅಧಿನಿಯಮ 1950ರ 31ನೇ ಪ್ರಕರಣದ ಮೇರೆಗೆ ಶಿಕ್ಷೆಗೆ ಗುರಿಪಡಿಸಲಾಗುವುದೆಂಬುದನ್ನು ಗಮನಿಸತಕ್ಕದ್ದು.

ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಬಯಸುವ ಪ್ರತಿಯೊಬ್ಬರು ಅರ್ಜಿ ನಮೂನೆ 19ನ್ನು ಭರ್ತಿಮಾಡಿ ಅದರೊಂದಿಗೆ ಶೈಕ್ಷಣಿಕ ಸಂಸ್ಥೆಗಳಲ್ಲಿ 1ನೇ ನವೋಂಬರ್ 2025ಕ್ಕೆ ಮೊದಲು 6 ವರ್ಷಗಳ ಅವಧಿಯಲ್ಲಿ ಒಟ್ಟು ಕನಿಷ್ಟ 3 ವರ್ಷ ಭೋದನಾ ವೃತಿಯಲ್ಲಿ ನಿತವಾಗಿರುವ ಬಗ್ಗೆ ಶೈಕ್ಷಣಿಕ ಸಂಸ್ಥೆಗಳಿಂದ ಅನುಬಂಧ –2ರಲ್ಲಿ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.

ಯಾವುದೇ ವ್ಯಕ್ತಿ ಅಂಚೆ ಮೂಲಕ ಮತದಾರರ ನೋಂದಣಾಧಿಕಾರಿಗಳು, ಸಹಾಯಕ ಮತದಾರರ ನೋಂದಣಾಧಿಕಾರಿಗಳು,ಗೊತ್ತುಪಡಿಸಿದ ಅಧಿಕಾರಿಗೆ ಸಲ್ಲಿಸಿದಲ್ಲಿ ಅಂತಹ ಅರ್ಜಿದಾರರಿಗೆ ಗೊತ್ತು ಪಡಿಸಿದ ಅಧಿಕಾರಿಯು ವಿಚಾರಣೆಗೆ ಹಾಜರಾಗಲು ನೋಟಿಸ್ ನೀಡುತ್ತಾರೆ. ವಿಚಾರಣೆಗೆ ಹಾಜರಾಗದೇ ಅಥವಾ ದಾಖಲೆಗಳನ್ನು ಹಾಜರುಪಡಿಸದಿದ್ದಲ್ಲಿ ಅರ್ಜಿಗಳು ತಿರಸ್ಕೃತಗೊಳ್ಳುತ್ತವೆ. ಬಲ್ಕ (ಗುಚ್ಚಗಳಲ್ಲಿ) ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. ಆಯೋಗವು ಮುಂಬರುವ ದಿನಗಳಲ್ಲಿ ಸದರಿ ನಮೂನೆ 19 ರ ಅರ್ಜಿಗಳನ್ನು ERMR ನಲ್ಲಿ ಅಳವಡಿಸಲು ಉದ್ದೇಶಿಸಲಾಗಿದೆ.

ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತದ ಮತದಾರರ ಪಟ್ಟಿ ಸಿದ್ದಪಡಿಸಿಕೊಳ್ಳುವ ಕುರಿತು ಹಾಗೂ ಚುನಾವಣಾ ಪೂರ್ವ ತಯಾರಿ ಮಾಡಿಕೊಳ್ಳುವಂತೆ ವಿಭಾಗದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮತ್ತು ಸಂಬಂಧಪಟ್ಟವರಿಗೆ ಈ ಕಾರ್ಯಾಲಯದಿಂದ ನಿರ್ದೇಶನ ನೀಡಲಾಗಿದೆ.

ಕರ್ನಾಟಕ ಈಶಾನ್ಯ ಶಿಕ್ಷಕರ ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳು ಇದ್ದಲ್ಲಿ ಮತದಾರರ ನೊಂದಣಾಧಿಕಾರಿಗಳು ಹಾಗೂ ಸಹಾಯಕ ಮತದಾರರ ನೊಂದಣಾಧಿಕಾರಿಗಳ ಕಚೇರಿಯಲ್ಲಿ ಮತ್ತು ಸಂಬಂಧಪಟ್ಟ ವಿಧಾನಸಭಾ ಮತಕ್ಷೇತ್ರದ ಸಹಾಯಕ ಮತದಾರರ ನೊಂದಣಾಧಿಕಾರಿಗಳ ಕಾರ್ಯಾಲಯದಲ್ಲಿ (ಮಹಾನಗರ ಪಾಲಿಕೆ ಹಾಗೂ ತಹಸೀಲ ಕಾರ್ಯಾಲಯದಲ್ಲಿ) ನಿಗದಿಪಡಿಸಿದ ಕಾಲಮಿತಿಯೊಳಗೆ ಸಲ್ಲಿಸತಕ್ಕದ್ದು.

ಅರ್ಹ ಶಿಕ್ಷಕರು ಹೆಚ್ಚಿನ ಆಸಕ್ತಿ ವಹಿಸಿ ಈ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನೊಂದಾಯಿಸಿಕೊಂಡು, ಸುಭದ್ರ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸುವಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳಬೇಕೆಂದು ಈ ಮೂಲಕ ಎಲ್ಲಾ ಅರ್ಹ ಮತದಾರರಲ್ಲಿ ವಿನಂತಿಸಲಾಗಿದೆ ಎಂದು ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಸಹಾಯಕ ಮತದಾರರನೋಂದಣಾಧಿಕಾರಿಗಳಾದ ಹರ್ಷಲ್ ಭೋಯರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹೆಸರು ಕಾಳು, ಉದ್ದು ಹಾಗೂ ಸೂರ್ಯಕಾಂತಿ ಉತ್ಪನ್ನವನ್ನು ಖರೀದಿ ಕೇಂದ್ರ ಸ್ಥಾಪನೆ: ಜಿಲ್ಲಾಧಿಕಾರಿಗಳಾದ ಡಾ.ಹರ್ಷಲ್ ಭೋಯರ್

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ ಅಕ್ಟೋಬರ್ 2–ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ 2025–26ನೇ ಸಾಲಿನಲ್ಲಿ ಎಫ್.ಎ.ಕ್ಯೂ. ಗುಣಮಟ್ಟದ ಮುಂಗಾರು ಹಂಗಾಮಿನ ಹೆಸರು ಕಾಳು, ಉದ್ದು ಹಾಗೂ ಸೂರ್ಯಕಾಂತಿ ಉತ್ಪನ್ನವನ್ನು ಖರೀದಿಸಲು ಜಿಲ್ಲೆಯಲ್ಲಿ ಖರೀದಿ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಸರ್ಕಾರದ ಈ ಯೋಜನೆಯ ಸದುಪಯೋಗಪಡಿಸಿಕೊಳ್ಳುವಂತೆ ಜಿಲ್ಲಾಧಿಕಾರಿಗಳಾದ ಡಾ.ಹರ್ಷಲ್ ಭೋಯರ್ ಅವರು ತಿಳಿಸಿದ್ದಾರೆ.

ಸರ್ಕಾರದ ಆದೇಶದಂತೆ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ 2025–26ನೇ ಸಾಲಿಗೆ ರೈತರಿಂದ ಮುಂಗಾರು ಹಂಗಾಮಿನ ಎಫ್.ಎ.ಕ್ಯೂ ಗುಣಮಟ್ಟದ ಹೆಸರು ಕಾಳು ಪ್ರತಿ ಕ್ವಿಂಟಾಲಗೆ 8,768 ರೂ.ಗಳಂತೆ ಪ್ರತಿ ಎಕರೆಗೆ 03 ಕ್ವಿಂಟಲ್ ಗರಿಷ್ಠ ಪ್ರಮಾಣ ಹಾಗೂ ಪ್ರತಿ ರೈತರಿಂದ ಗರಿಷ್ಠ 15 ಕ್ವಿಂಟಲ್, ಉದ್ದಿನ ಕಾಳು ಪ್ರತಿ ಕ್ವಿಂಟಾಲ್‌ಗೆ 7,800/– ರಂತೆ ಪ್ರತಿ ಎಕರೆಗೆ 05 ಕ್ವಿಂಟಾಲ್ ಗರಿಷ್ಠ ಪ್ರಮಾಣ ಹಾಗೂ ಪ್ರತಿ ರೈತ–ರಿಂದ ಗರಿಷ್ಠ 30 ಕ್ವಿಂಟಾಲ್ ಮತ್ತು ಸೂರ್ಯಕಾಂತಿ ಪ್ರತಿ ಕ್ವಿಂಟಾಲ್‌ಗೆ 7.721/– ರಂತೆ ಪ್ರತಿ ಎಕರೆಗೆ 04 ಕ್ವಿಂಟಾಲ್ ಗರಿಷ್ಠ ಪ್ರಮಾಣ ಹಾಗೂ ಪ್ರತಿ ರೈತರಿಂದ ಗರಿಷ್ಠ 20 ಕ್ವಿಂಟಾಲ್ ಖರೀದಿಸಲಾಗುವುದು.

ರೈತರನೊಂದಣಿ ಕಾಲಾವಧಿಯನ್ನು 80 ದಿನಗಳ ವರೆಗೆ ಹಾಗೂ ಖರೀದಿ ಅವಧಿಯನ್ನು 90 ದಿನಗಳ ವರೆಗೆ ನಿಗಧಿಪಡಿಸಿದ್ದು,ರೈತರು ಯಾದಗಿರಿ ತಾಲೂಕಿನ ಹೆಸರು ಹಾಗೂ ಉದ್ದು ಖರೀದಿ ಕೇಂದ್ರಗಳಾದ ಹತ್ತಿಕುಣಿ ಟಿಎಸಿಎಸ್ ಮೊಬೈಲ್ ಸಂಖ್ಯೆ: 7892741116, ಯಾದಗಿರಿ ಟಿಎಪಿಎಮ್‌ಎಸ್ ಮೊಬೈಲ್ ಸಂ–ಖ್ಯೆ:7019524908 ಸೂರ್ಯಕಾಂತಿ ಖರೀದಿ ಕೇಂದ್ರಗಳಾದ ಹತ್ತಿಕುಣಿ ಒಜಿಸಿಎಸ್ ಮೊಬೈಲ್ ಸಂಖ್ಯೆ: 7892278578, ಹೊನಗೇರಾ ಒಜಿಸಿಎಸ್ ಮೊಬೈಲ್ ಸಂಖ್ಯೆ:9945405710ಗೆ ಸಂಪರ್ಕ ಮಾಡಬಹುದಾಗಿದೆ.

ಗುರುಮಿಠಕಲ್ ತಾಲೂಕಿನಲ್ಲಿ ಹೆಸರು ಹಾಗೂ ಉದ್ದು ಖರೀದಿ ಕೇಂದ್ರಗಳಾದ ಗುರುಮಿಠಕಲ್ ಎಫ್‌ಪಿಓ ಮೊಬೈಲ್ ಸಂ–ಖ್ಯೆ: 7259543708, ಚಪೇಟ್ಲಾ ಪಿಎಸಿಎಸ್ ಮೊಬೈಲ್ ಸಂಖ್ಯೆ: 7259543708, ರಾಮಸಮುದ್ರ ಪಿಎಸಿಎಸ್ ಮೊಬೈಲ್ ಸಂಖ್ಯೆ: 9945405710, ಸೈದಾಪೂರ ಎಫ್‌ಪಿಓ ಮೊಬೈಲ್ ಸಂಖ್ಯೆ: 7022192270 ಹಾಗೂ ಸೂರ್ಯಕಾಂತಿ ಖರೀದಿ ಕೇಂದ್ರಗಳಾದ ಬಾಲ್ಛೇಡ ಒಜಿಸಿಎಸ್ ಮೊಬೈಲ್ ಸಂಖ್ಯೆ: 6361192156, ಬಳಿಚಕ್ರ ಒಜಿಸಿಎಸ್ ಮೊಬೈಲ್ ಸಂಖ್ಯೆ: 9535803605ಗೆ ಸಂಪರ್ಕ ಮಾಡಬಹುದಾಗಿದೆ.

ವಡಗೇರಾ ತಾಲೂಕಿನಲ್ಲಿ ಹೆಸರು ಹಾಗೂ ಉದ್ದು ಖರೀದಿ ಕೇಂದ್ರಗಳಾದ ಬೆಂಡೆಬೆಂಬಳಿ ಪಿಎಸಿಎಸ್ ಮೊಬೈಲ್ ಸಂಖ್ಯೆ: 9902813005, ನಾಯ್ಕಲ್ ಪಿಎಸಿಎಸ್ ಮೊಬೈಲ್ ಸಂಖ್ಯೆ: 974161655 ಹಾಗೂ ಸೂರ್ಯಕಾಂತಿ ಖರೀದಿ ಕೇಂದ್ರಗಳಾದ ತಡಬಿಡಿ ಒಜಿಸಿಎಸ್ ಮೊಬೈಲ್ ಸಂಖ್ಯೆ: 9686406629ಗೆ ಸಂಪರ್ಕ ಮಾಡಬಹುದಾಗಿದೆ.

ಶಹಾಪುರ ತಾಲೂಕಿನಲ್ಲಿ ಹೆಸರು ಹಾಗೂ ಉದ್ದು ಖರೀದಿ ಕೇಂದ್ರಗಳಾದ ಟಿಎಪಿಎಮ್‌ಎಸ್ ಮೊಬೈಲ್ ಸಂ–ಖ್ಯೆ: 9448577858, ಗಂಗನಾಳ ಮೊಬೈಲ್ ಸಂಖ್ಯೆ: 9902623346 ಹಾಗೂ ಸೂರ್ಯಕಾಂತಿ ಖರೀದಿ ಕೇಂದ್ರಗಳಾದ ದೋರನಹಳ್ಳಿ ಒಜಿಸಿಎಸ್ ಮೊಬೈಲ್ ಸಂಖ್ಯೆ: 7019038199, ಗೋಗಿ ಒಜಿಸಿಎಸ್ ಮೊಬೈಲ್ ಸಂಖ್ಯೆ: 8147777312ಗೆ ಸಂಪರ್ಕ ಮಾಡಬಹುದಾಗಿದೆ.

ಸುರಪುರ ತಾಲೂಕಿನಲ್ಲಿ ಹೆಸರು ಹಾಗೂ ಉದ್ದು ಖರೀದಿ ಕೇಂದ್ರಗಳಾದ ಸುರಪುರ ಟಿಎಪಿಎಮ್‌ಎಸ್ ಮೊಬೈಲ್ ಸಂಖ್ಯೆ: 7259688231, ಕೆಂಭಾವಿ–1 ಪಿಎಸಿಎಸ್ ಮೊಬೈಲ್ ಸಂಖ್ಯೆ:8970100234, ನಗನೂರು ಪಿಎಸಿಎಸ್ ಮೊಬೈಲ್ ಸಂ–ಖ್ಯೆ: 9880456797 ಹಾಗೂ ಸೂರ್ಯಕಾಂತಿ ಖರೀದಿ ಕೇಂದ್ರಗಳಾದ ಹೆಬ್ಬಾಳ ಒಜಿಸಿಎಸ್ ಮೊಬೈಲ್ ಸಂಖ್ಯೆ:9902284647, ಬೋನಾಳ ಒಜಿಸಿಎಸ್ ಮೊಬೈಲ್ ಸಂಖ್ಯೆ: 9611918302ಗೆ ಸಂಪರ್ಕ ಮಾಡಬಹುದಾಗಿದೆ.

ಹುಣಸಿಗಿ ತಾಲೂಕಿನಲ್ಲಿ ಹೆಸರು ಹಾಗೂ ಉದ್ದು ಖರೀದಿ ಕೇಂದ್ರಗಳಾದ ಹುಣಸಿಗಿ ಟಿಎಪಿಎಮ್‌ಎಸ್ ಮೊಬೈಲ್ ಸಂಖ್ಯೆ:9535220369, ಪಿಎಸಿಎಸ್ ಮೊಬೈಲ್ ಸಂಖ್ಯೆ:7349666155 ಹಾಗೂ ಸೂರ್ಯಕಾಂತಿ ಖರೀದಿ ಕೇಂದ್ರಗಳಾದ ಕಕ್ಕೇರಾ ಒಜಿಸಿಎಸ್ ಮೊಬೈಲ್ ಸಂಖ್ಯೆ: 9945404105, ನಾರಾಯಣಪುರ ಒಜಿಸಿಎಸ್ ಮೊಬೈಲ್ ಸಂಖ್ಯೆ: 9880242913ಗೆ ಸಂಪರ್ಕ ಮಾಡಬಹುದಾಗಿದೆ.

ರೈತರ ನೊಂದಣಿ ಹಾಗೂ ಖರೀದಿ ಪ್ರಕ್ರಿಯೆಯಲ್ಲಿ ಯುಐ–ಡಿಎಐ ಬಯೋಮೆಟ್ರಿಕ್ ಮೂಲಕ ಸಂಬಂಧಿಸಿದ ಖರೀದಿ ಕೇಂದ್ರಗಳಲ್ಲಿ ನೋಂದಾಯಿಸುವುದು ಕಡ್ಡಾಯವಾಗಿರುತ್ತದೆ ಹುಟ್ಟುವಳಿ ಮಾರಾಟ ಮಾಡಿದ ರೈತರಿಗೆ ಡಿಬಿಟಿ ಮೂಲಕ ಹಣ ಪಾವತಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ಕೇಂದ್ರಗಳಿಗೆ ಸಂಪರ್ಕಿಸಿ ಈ ಯೋಜನೆಯ ಲಾಭ ಪಡೆಯುವಂತೆ ಜಿಲ್ಲಾಧಿಕಾರಿಗಳಾದ ಡಾ.ಹರ್ಷಲ್ ಭೋಯರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬೇವಿನಹಳ್ಳಿ ಕ್ರಾಸ್, ರಾಷ್ಟ್ರೀಯ ಹೆದ್ದಾರಿ 63ರಲ್ಲಿ ಟಿಪ್ಪರ್ ಹರಿದು 130 ಕೂ ಅಧಿಕ ಕುರಿಗಳ ಧಾರುಣ ಸಾವು,ರಸ್ತೆ ತಡೆದು ಪರಿಹಾರಕ್ಕೆ ಆಗ್ರಹ..!



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ:ತಾಲೂಕಿನ ಮುನಿರಾಬಾದ್ ಸಮೀಪದ ಎನ್.ಎಚ್ 63 ಹೆದ್ದಾರಿಯ ಬೇವಿನಹಳ್ಳಿ ಕ್ರಾಸ್ (ಕಿರ್ಲೋಸ್ಕರ್ ಫ್ಯಾಕ್ಟರಿ )ಬಳಿ ಮಂಗಳವಾರ ಸಂಜೆ 6:36ರ ಸಮಯಕ್ಕೆ ಹೊಸಪೇಟೆ ಮಾರ್ಗದಿಂದ ಎಂ ಎಸ್ ಪಿ ಎಲ್ ಕಂಪನಿಗೆ ಹೋಗುತ್ತಿರುವ ಟಾಟಾ ಟಿಪ್ಪರ್ ಹರಿದು ನೂರಾರು ಕುರಿ ಸಾವಾಗಿದೆ.

ಬೇವಿನಹಳ್ಳಿ ಕ್ರಾಸ್ ನ ಎನ್ ಎಚ 63 ಇಂದು ಸಂಜೆ ರಸ್ತೆ ಅಕ್ಷರ ಸಹ ರಕ್ತ–ಸಿಕ್ತಮಯವಾಗಿತ್ತು, ನೀರಿನ ಹೊಳೆ ಹರಿದಂತೆ ರಸ್ತೆ ತುಂಬೆಲ್ಲ ರಕ್ತದ ಮಡುಗು ,ಗ್ರಾಮದ ಚಿದಾನಂದಪ್ಪ ಮಡ್ಡಿ ಎಂಬುವವರ ಮಾಲೀಕರಿಗೆ ಸೇರಿದ್ದ ಕುರಿಗಳು ಸಂಜೆ ರಸ್ತೆ ದಾಟುತ್ತಿದ್ದ ಸಂದರ್ಭದಲ್ಲಿ ವೇಗವಾಗಿ ಬಂದ ಟಿಪ್ಪರ್ ಹೊಡೆದು 130 ಕೂ ಅಧಿಕ ಕುರಿಗಳ ಸಾವು ಸಂಭವಿಸಿದೆ. ಸ್ಥಳಕ್ಕೆ ದೌಡಾಯಿಸಿದ ಕೊಪ್ಪಳ ಜಿಲ್ಲಾಧಿಕಾರಿ ಸುರೇಶ್ ಇಟ್ನಾಳ್ ಸಂಬಂಧಪಟ್ಟ ಅಧಿಕಾರಿಗಳಿಗೆ ಪಂಚನಾಮಕ್ಕೆ ಸೂಚಿಸಿ ಪರಿಹಾರ ಒದಗಿಸುವುದಾಗಿ ಭರವಸೆ ನೀಡಿದರು.ಸುಮಾರು 3 ಗಂಟೆಗಳ ಕಾಲ ರಸ್ತೆ ತಡೆದು ಗ್ರಾಮಸ್ಥರು ಪ್ರತಿಭಟಿಸಿದರು. ಘಟನಾ ಸ್ಥಳಕ್ಕೆ ಆಗಮಿಸಿದ್ದ ಶಾಸಕ ರಾಘವೇಂದ್ರ ಹಿಟ್ನಾಳ್ 2 ಲಕ್ಷ ತಾತ್ಕಾಲಿಕ ಪರಿಹಾರ ನೀಡಿ, ಸರ್ಕಾರದಿಂದ ಬರುವ ಪರಿಹಾರಕ್ಕೆ ಆದೇಶಿಸಿದರು. ಸುಮಾರು ಮೂರು ಗಂಟೆಗಳ ಕಾಲ ಬಿಗುವಿನ ವಾತಾವರಣದಲ್ಲಿ ಕೊಪ್ಪಳದ ಸಿಪಿಐ ಮತ್ತು ಮುನಿರಾಬಾದ್ ಪಿ ಎಸ್ ಐ ಸುನಿಲ್ ಕುಮಾರ್ ತಂಡ ನೆರೆದಿದ್ದ ಗ್ರಾಮಸ್ಥರ ಆಕ್ರೋಶವನ್ನು ಹತೋಟಿಗೆ ತರಲು ಹರ ಸಾಹಸ ಪಟ್ಟರು.ತದನಂತರ ಪಂಚನಾಮಕ್ಕೇ ವೈದ್ಯರು ಸ್ಥಳಕ್ಕೆ ದೌಡಾಯಿಸಿ ಸತ್ತಿರುವ ಕುರಿಗಳ ಪಂಚನಾಮ ನಡೆಸಿದರು. ಕುರಿಗಾಯಿಗಳ ಮಾಲೀಕರ ಆಕ್ರಂದನ ಮುಗಿಲು ಮುಟ್ಟಿತು. ನಂತರ ಘಟನಾ ಸ್ಥಳಕ್ಕೆ ಸಂಸದರಾದ ರಾಜಶೇಖರ್ ಹಿಟ್ನಾಳ್ ಭೇಟಿ ನೀಡಿದರು.

ಗ್ರಾಮಸ್ಥರ ಆಕ್ರೋಶ:– ಇಂತಹ ಘಟನೆಗಳು ಈ ಹಿಂದೆ ನಡೆದಿವೆ ರೋಡ್ ಬ್ರೇಕ್ ಅಥವಾ ಅಂಡರ್ ಪಾಸ್ ಕಡ್ಡಾಯ ಬೇಕೆ ಬೇಕು. ಇಲ್ಲವಾದರೆ ರಸ್ತೆ ತಡೆದು ಪ್ರತಿಭಟಿಸುತ್ತೇವೆ ಎಂದು ಸ್ಥಳಕ್ಕೆ ಆಗಮಿಸಿದ್ದ ಡಿ ಸಿ–ಸುರೇಶ್ ಇಟ್ನಾಳ ಹಾಗು ಶಾಸಕ ರಾಘವೇಂದ್ರ ಹಿಟ್ನಾಳ್ ಅವರಿಗೆ ತಾಕೀತು ಮಾಡಿದರು.ಈ ಸಂಬಂಧ ಮುನಿರಾಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದ ಸಚಿವ ರಹೀಂ ಖಾನ್

ಮಲ್ಲಮ್ಮ ನುಡಿ ವಾರ್ತೆ

ಬೀದರ,ಅಕ್ಟೋಬರ್.02–ವಿವಿಧ ಪ್ರವಾಹ ಪೀಡಿತ ಪ್ರದೇಶಗಳಿಗೆ ಪೌರಾಡಳಿತ ಮತ್ತು ಹಜ್ ಸಚಿವ ರಹೀಂ ಖಾನ್ ಅವರು ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಅವರು ಇಂದು ಬೀದರ ತಾಲ್ಲೂಕಿನ ಜಾಂಪಾಡ, ಚಿಲ್ಲರಗಿ, ಇಸ್ಲಾಂಪುರ, ಯರನಳ್ಳಿ ಸೇರಿದಂತೆ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಪರಿಸ್ಥಿತಿಯನ್ನು ಪರಿಶೀಲಿಸಿದರು. ನಂತರ ಮಾತನಾಡಿದ ಇವರು, ಭಾರೀ ಮಳೆಯಿಂದಾಗಿ ರೈತರ ಹೊಲಗಳಲ್ಲಿ ಬೆಳಯಲಾದ ಬೆಳೆಗಳು ಸಂಪೂರ್ಣವಾಗಿ ನಾಶವಾಗಿವೆ ಮತ್ತು ವಿವಿಧ ಸ್ಥಳಗಳಲ್ಲಿ ಮನೆಗಳು, ರಸ್ತೆ, ಸೇತುವೆ ಕುಸಿದಿವೆ ಹಾಗೂ ರಸ್ತೆ ಸಂಪರ್ಕ ಕಡಿತಗೊಂಡಿವೆ. ಹಿಗಾಗಿ ಪರ್ಯಾಯ ರಸ್ತೆ ವ್ಯವಸ್ಥೆ ಮಾಡಲಾಗಿದೆ ಎಂದರು. ಅಧಿಕಾರಿಗಳಿಗೆ ತುರ್ತು ಸಮೀಕ್ಷೆ ನಡೆಸಿ ವರದಿ ಸಲ್ಲಿಸುವಂತೆ ಸೂಚನೆ ನೀಡಲಾಗಿದ್ದು, ಸಂಕಷ್ಟದಲ್ಲಿರುವ ರೈತರಿಗೆ ಸರ್ಕಾರದಿಂದ ಹೆಚ್ಚುವರಿ ರೂ. 8,500 ಪ್ರತಿ ಹೆಕ್ಟೇರ್ ಗೆ ಪರಿಹಾರ ಸೇರಿದಂತೆ ಒಟ್ಟು ರೂ.17,000 ಖುಷ್ಕಿ ಜಮೀನಿಗೆ, ರೂ. 25,000 ನೀರಾವರಿ ಜಮೀನಿಗೆ ಹಾಗೂ ರೂ. 31,000 ಬಹುವಾರ್ಷಿಕ ಬೆಳೆಗಳಿಗೆ ಪರಿಹಾರ ಒದಗಿಸಲಾಗುವುದು ಎಂದು ಮುಖ್ಯಮಂತ್ರಿಗಳು ಭರವಸೆ ನೀಡಿದ್ದಾರೆ ಎಂದರು.

ಸಾರ್ವಜನಿಕರು ನದಿ, ಕೆರೆಗಳಿಂದ ದೂರ ಇರಬೇಕು ಮತ್ತು ಯಾವುದೇ ಅಪಾಯವಾಗದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ಸಚಿವರು ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷ ಮಹಮ್ಮದ್ ಗೌಸ್, ಬೀದರ ಸಹಾಯಕ ಆಯುಕ್ತ ಮೊಹಮದ್ ಶಕೀಲ್, ಬೀದರ, ಕೃಷಿ ಇಲಾಖೆ ಜಂಟಿ ನಿರ್ದೇಶಕಿ ದೇವಿಕಾ, ತಾಲೂಕು ಪಂಚಾಯತ್ ಇಓ ಮಾಣಿಕರಾವ ಪಾಟೀಲ ಸೇರಿದಂತೆ ತೋಟಗಾರಿ–ಕೆ, ಕಂದಾಯ ಇಲಾಖೆ ಮತ್ತು ಇತರೆ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಭಾಲ್ಕಿ: ಪ್ರವಾಹ ಪೀಡಿತ ಗ್ರಾಮಗಳಿಗೆ ಭೇಟಿ ನೀಡಿದ ಸಚಿವ ಈಶ್ವರ ಖಂಡ್ರೆ

ಮಲ್ಲಮ್ಮ ನುಡಿ ವಾರ್ತೆ

ಬೀದರ, ಅಕ್ಟೋಬರ್.02– ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆ ಅವರಿಂದು ಅತಿವೃಷ್ಟಿಯಿಂದಾಗಿ ಭಾಲ್ಕಿ ತಾಲೂಕಿನ ಮಹಾರಾಷ್ಟ್ರ ಗಡಿಭಾಗದ ಮಾಂಜ್ರಾ ನದಿ ತೀರದ ಸಾಯಿಗಾವ್, ಮೇಹಕರ, ಹಲ್ಸಿ ತೂಗಾವ್, ವಾಂಜೆರ್ಖೇಡ್, ಕೊಂಗಳಿ ಸೇರಿದಂತೆ ಪ್ರವಾಹ ಪೀಡಿತ ಗ್ರಾಮಗಳಿಗೆ ಭೇಟಿ ನೀಡಿ ಪರಿಸ್ಥಿತಿಯನ್ನು ಅವಲೋಕಿಸಿದರು. ಅಧಿಕಾರಿ ಡಾ.ಗಿರೀಶ ಬದೋಲೆ, ಗ್ರಾಮದ ಮುಖಂಡರು ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಸ್ವಯಂ ದೃಢೀಕರಣ ಮೂಲಕವೂ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಗೆ ಮಾಹಿತಿ

# ಒದಗಿಸಲು ಅವಕಾಶ: ಪಾಲಿಕೆಯ ಆಯುಕ್ತ ಜುಬಿನ್ ಮೊಹಪಾತ್ರ ಸಲಹೆ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಅಕ್ಟೋಬರ್ 02 ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯು ಈಗಾಗಲೇ ಆರಂಭವಾಗಿದ್ದು,ಪ್ರತಿಯೊಬ್ಬ ನಾಗರಿಕರು ತಮ್ಮ ಕುಟುಂಬದ ಸಾಮಾಜಿಕ ಹಾಗೂ ಶೈಕ್ಷಣಿಕ ಮಾಹಿತಿಯನ್ನು ಸ್ವಯಂ ಘೋಷಣೆ ಮೂಲಕವೂ ನೀಡಬಹುದಾಗಿದೆ. ಸರ್ಕಾರ ನೀಡಿದ ಸ್ವಯಂ ಘೋಷಣೆ (ಸೆಲ್ಪ ಡಿಕ್ಲರೇಷನ್) ಅರ್ಜಿ ನಮೂನೆಯಲ್ಲಿ ಸ್ವಯಂ ಬಳಕೆದಾರರ ಕೈಪಿಡಿಯಲ್ಲಿ ತಿಳಿಸಿದಂತೆ ಜಾಗರೂಕತೆಯಿಂದ ಮಾಹಿತಿ ಭರ್ತಿ ಮಾಡಬೇಕು ಎಂದು ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬೀನ್ ಮೊಹಪಾತ್ರ ಅವರು ತಿಳಿಸಿದ್ದಾರೆ.

ವೆಬ್‌ಸೈಟ್ ಲಿಂಕ್ URL:https://kscbcselfdeclaration.karnataka.gov.in ಮೂಲಕ ಸ್ವಯಂ ಘೋಷಣೆ ಬಳಕೆದಾರರ ಕೈಪಿಡಿ ನೋಡಬಹುದಾಗಿದೆ. ಬಳಕೆದಾರರು ಸ್ವಯಂ ಘೋಷಣೆಯೊಂದಿಗೆ ಮುಂದುವರಿಯಲು ನಾಗರಿಕ ಆಯ್ಕೆಯ ಮೇಲೆ ಕ್ಲಿಕ್ ಮಾಡಬೇಕು. ಬಳಕೆದಾರರು ಮೊಬೈಲ್ ಸಂಖ್ಯೆಯನ್ನು ನಮೂದಿಸಿ ಒಟಿಪಿ ಪಡೆಯಬೇಕು. ಬಳಕೆದಾರರು ಲಾಗಿನ್ ಆಗಲು ಒಟಿಪಿ ನಮೂದಿಸಬೇಕು. ಹೊಸ ಸಮೀಕ್ಷೆಯನ್ನು ಪ್ರಾರಂಭಿಸಿ ಎಂಬುದರ ಮೇಲೆ ಕ್ಲಿಕ್ ಮಾಡಬೇಕು. ಬಳಕೆದಾರರು ತಮ್ಮ ಯುಹೆಚ್‌ಐಡಿ ಅನ್ನು ನಮೂದಿಸಿ ಮತ್ತು ವೆರಿಫೈ ಯುಎಚ್‌ಐಡಿ ಕ್ಲಿಕ್ ಮಾಡಬೇಕು. ಬಳಕೆದಾರರು ಯುಹೆಚ್‌ಐಡಿ ಹೊಂದಿಲ್ಲದಿದ್ದರೆ ಐ ಡೋಂಟ್ ಹ್ಯಾವ್ ಯುಎಚ್‌ಐಡಿ ಕ್ಲಿಕ್ ಮಾಡಿ ಎಸ್ಕಾಂ ಖಾತೆ ಐಡಿ ನಮೂದಿಸಬೇಕು. ಸಮೀಕ್ಷೆಯಲ್ಲಿ ಭಾಗವಹಿಸುವವರ ಫೋಟೋ ಕ್ಲಿಕ್ ಮಾಡಿ ಅಪ್‌ಲೋಡ್ ಮಾಡಬೇಕು. ಬಳಕೆದಾರರು ಪಡಿತರ ಚೀಟಿ ಅಥವಾ ಆಧಾರ್ ಕಾರ್ಡ್ ಆಯ್ಕೆ ಮಾಡಿಕೊಳ್ಳಬೇಕು. ಪಡಿತರ ಚೀಟಿ ಆಗಿದ್ದರೆ: ಬಳಕೆದಾರರು ತಮ್ಮ ಪಡಿತರ ಚೀಟಿ ಸಂಖ್ಯೆಯನ್ನು ನಮೂದಿಸಿ 'ಸಬ್‌ಮಿಟ್ ಆರ್‌ಸಿ ಇನ್ಫೋ ಮೇಲೆ ಕ್ಲಿಕ್ ಮಾಡಿ ನಂತರ ಮುಂದುವರಿಸಲು 'ಸಲ್ಲಿಸಿ' ಮೇಲೆ ಕ್ಲಿಕ್ ಮಾಡಬೇಕು.


ಆಧಾರ್ ಆಗಿದ್ದರೆ: ಬಳಕೆದಾರರು ಮನೆಯ ಮುಖ್ಯಸ್ಥರ ಆಧಾರ್ ಕಾರ್ಡನಲ್ಲಿರುವಂತೆ ಹೆಸರನ್ನು ನಮೂದಿಸಬೇಕು ಮತ್ತು ಆಧಾರ್ ಒಟಿಪಿ ಅನ್ನು ದೃಢೀಕರಿಸಿ ಮೇಲೆ ಕ್ಲಿಕ್ ಮಾಡಬೇಕು. ಬಳಕೆದಾರರು ಒಟಿಪಿ ಅಥವಾ ಫೇಸ್ ಕ್ಯಾಪ್ಚರ್ ಆಯ್ಕೆ ಮಾಡಬಹುದು. ಒಟಿಪಿ ಆಗಿದ್ದರೆ, ಮೊಬೈಲ್ ಸಂಖ್ಯೆಗೆ ಕಳುಹಿಸಲಾದ ಒಟಿಪಿ ಅನ್ನು ನಮೂದಿಸಬೇಕು. ಫೇಸ್ ಕ್ಯಾಪ್ಚರ್ ಆಗಿದ್ದರೆ, ಬಳಕೆದಾರರು ಸಿಇಜಿ ಫೇಸ್ ಕೆವೈಸಿ ಮೊಬೈಲ್ ಅಪ್ಲಿಕೇಶನ್‌ನೊಂದಿಗೆ ಕ್ಯೂರ್ ಕೋಡ್ ಅನ್ನು ಸ್ಕ್ಯಾನ್ ಮಾಡಬೇಕು.

ಬಳಕೆದಾರರು ಅಪ್ಲಿಕೇಶನ್ ಇರುವ ಫೋನ್‌ನ ಮೊಬೈಲ್ ಸಂಖ್ಯೆಯನ್ನು ನಮೂದಿಸಬೇಕು. ಮತ್ತು ಸ್ಕ್ಯಾನ್ ಕ್ಯೂಆರ್ ಮೇಲೆ ಕ್ಲಿಕ್ ಮಾಡಬೇಕು. ಸ್ಕ್ಯಾನ್ ಮಾಡಿದ ನಂತರ, ಬಳಕೆದಾರರು ಅಪ್ಲಿಕೇಶನ್‌ನಲ್ಲಿ ಫೇಸ್ ಕ್ಯಾಪ್ಚರ್ ಅನ್ನು ಪೂರ್ಣಗೊಳಿಸಬೇಕು. ಇ ಕೆವೈಸಿ ನಂತರ ಗೇಟ್ ಡಾಟಾ ಮೇಲೆ ಕ್ಲಿಕ್ ಮಾಡಿ ಮುಂದುವರೆಸಬೇಕು. ಮನೆಯ ಮುಖ್ಯಸ್ಥರ ಇ ಕೆವೈಸಿ ನಚಿತರ ಬಳಕೆದಾರರು ಕುಟುಂಬದ ಸದಸ್ಯರನ್ನು ಸೇರಿಸಬೇಕು. ಸದಸ್ಯರನ್ನು ಸೇರಿಸಲು, ಸದಸ್ಯರನ್ನು ಸೇರಿಸಿ ಮೇಲೆ ಕ್ಲಿಕ್ ಮಾಡಿ ಮತ್ತು ಸದಸ್ಯರ ಇ–ಕೆವೈಸಿಯನ್ನ ಪೂರ್ಣಗೊಳಿಸಬೇಕು. ಸದಸ್ಯರ ಮಾಹಿತಿಯನ್ನು ಪಡಿತರ ಚೀಟಿಯಿಂದ ಪಡೆಯಲಾಗಿದ್ದರೆ ಮತ್ತು ಯಾವುದೇ ಸದಸ್ಯರು ಜೀವಂತವಾಗಿಲ್ಲದಿದ್ದರೆ, ಸದಸ್ಯರನ್ನು ಮೃತ ಎಂದು ಗುರುತಿಸಬೇಕು. ಮೃತ ಮೇಲೆ ಕ್ಲಿಕ್ ಮಾಡಿ ಖಚಿತ ಪಡಿಸಬೇಕು. ಎಲ್ಲಾ ಕುಟುಂಬದ ಸದಸ್ಯರನ್ನು ಸೇರಿಸಿದ ನಂತರ, ಮನೆಯ ಮುಖ್ಯಸ್ಥರನ್ನು ಆಯ್ಕೆಮಾಡಿ, ಮೊಬೈಲ್ ಸಂಖ್ಯೆ ಮತ್ತು ಒಟಿಪಿ ನಮೂದಿಸಿ ಸಮೀಕ್ಷೆಯನ್ನು ಪ್ರಾರಂಭಿಸಬೇಕು. ಬಳಕೆದಾರರು ಎಲ್ಲಾ ಸದಸ್ಯರಿಗೆ ವೈಯಕ್ತಿಕ ಸಮೀಕ್ಷೆಯನ್ನು ಪೂರ್ಣಗೊಳಿಸಬೇಕು ಮತ್ತು ನಂತರ ಕುಟುಂಬದ ಸಮೀಕ್ಷೆಯನ್ನು ಪೂರ್ಣಗೊಳಿಸಬೇಕು.

ವೈಯಕ್ತಿಕ ಸಮೀಕ್ಷೆಗಾಗಿ ಮಾದರಿ ಪ್ರಶ್ನೆಗಳು ಇರುವುದನ್ನು ಗಮನಿಸಬೇಕು. ಉಪ–ಜಾತಿ ಮತ್ತು ಜಾತಿಯ ಸಮಾನಾರ್ಥಕ ಹೆಸರುಗಳು ಐಚ್ಚಿಕ ಕ್ಷೇತ್ರಗಳಾಗಿವೆ. ಪ್ರಶ್ನಾವಳಿಯನ್ನು ಪೂರ್ಣಗೊಳಿಸಿದ ನಂತರ, ಸಲ್ಲಿಸಿ ಕ್ಲಿಕ್ ಮಾಡಬೇಕು. ಬಳಕೆದಾರರು ಸಮೀಕ್ಷೆಯನ್ನು ಸಲ್ಲಿಸುವ ಮೊದಲು ಅದರ ಪೂರ್ವವೀಕ್ಷಣೆಯನ್ನು ನೋಡಬಹುದು. ಬಳಕೆದಾರರು ಸ್ವಯಂ ಘೋಷಣೆ ದಾಖಲೆಯ ಫೋಟೋವನ್ನು ಕ್ಲಿಕ್ ಮಾಡಿ ಅಪ್‌ಲೋಡ್ ಮಾಡಬೇಕು. ಸಲ್ಲಿಸಿದ ನಂತರ, ಬಳಕೆದಾರರಿಗೆ ಅಪ್ಲಿಕೇಶನ್ ಸಂಖ್ಯೆ ಸಿಗುತ್ತದೆ ಎಂದು ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಭವಾನಿ, ರಾಜರಾಜೇಶ್ವರಿ ದೇವಿಗೆ ಪೂಜೆ ಸಲ್ಲಿಸಿದ ಪಾಟೀಲ್ ಪರಿವಾರಸ್ಥರು

# ಹಮನಾಬಾದನಲ್ಲಿ ವಿಜಯ ದಶಮಿ ಸಂಭ್ರಮಾಚರಣೆ







ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್ : ನಗರದ ಹೊರವಲಯದ ರಾಜರಾಜೇಶ್ವರಿ ದೇವಸ್ಥಾನದಲ್ಲಿ ಮಾಜಿ ಸಚಿವ ರಾಜಶೇಖರ ಪಾಟೀಲ್ ನೇತೃತ್ವದಲ್ಲಿ ವಿಜಯ ದಶಮಿ ಸಂಭ್ರಮದಿಂದ ಆಚರಿಸಲಾಯಿತು. ಬೆಳಗ್ಗೆ ಭವಾನಿ ಮಾತೆ, ಐತಿಹಾಸಿಕ ದೇವಸ್ಥಾನ ಹಾಗೂ ರಾಜರಾಜೇಶ್ವರಿ ದೇವಸ್ಥಾನಕ್ಕೆ ಪಾಟೀಲ್ ಪರಿವಾಸ್ಥರು ಭೇಟಿ ನೀಡಿ, ಮಾಜಿ ಸಚಿವ ರಾಜಶೇಖರ ಪಾಟೀಲ್, ಎಂಎಲ್ಸಿ ಡಾ. ಚಂದ್ರಶೇಖರ ಪಾಟೀಲ್, ಎಂಎಲ್ಸಿ ಭೀಮರಾವ ಪಾಟೀಲ್ ದಂಪತಿಗಳು ಧಾರ್ಮಿಕ ವಿಧಿ ವಿಧಾನದಂತೆ ವಿಶೇಷ ಪೂಜೆ ಸಲ್ಲಿಸಿ, ನಾಡಿನ ಒಳಿತಿಗಾಗಿ ಪ್ರಾರ್ಥಿಸಿದರು. ಬಳಿಕ ದೇವಸ್ಥಾನದಲ್ಲಿ ಪಾಟೀಲ ಪರಿವಾರದ ಸದಸ್ಯರು ಸರತಿ ಸಾಲಿನಲ್ಲಿ ನಿಂತು ದೇವಿಯ ದರ್ಶನ ಪಡೆದರು. ಈ ಸಂದರ್ಭದಲ್ಲಿ ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಅಭಿಷೇಕ ಪಾಟೀಲ್, ಯುವ ಮುಖಂಡರಾದ ಅಕ್ಷಯ ಪಾಟೀಲ್, ರುದ್ರಂ ಪಾಟೀಲ್ ಸೇರಿದಂತೆ ಪಾಟೀಲ್ ಪರಿವಾಸ್ಥರು ಉಪಸ್ಥಿತರಿದ್ದರು.

# ನೈಟ್ ಟರ್ಫ್ ಕ್ರಿಕೆಟ್ ಟ್ರೋಫಿಗೆ ಡಾ. ಕೆ.ಎಂ.ಸೈಯದ್ ಚಾಲನೆ

ಮಲ್ಲಮ್ಮ ನುಡಿವಾರ್ತೆ

ಕೊಪ್ಪಳ : ನಗರದ ಗದಗ ರಸ್ತೆಯ ಶಿಲ್ಪಾ ಗ್ರಾಂಡ್ ಹೋಟೆಲ್ ಪಕ್ಕದಲ್ಲಿ ನೈಟ್ ಟರ್ಫ್ ಕ್ರಿಕೆಟ್ ಟ್ರೊಫಿಗೆ ಕೆಪಿಸಿಸಿ ಸಂಯೋಜಕ ಹಾಗೂ ಸೈಯದ್ ಫೌಂಡೇಶನ್ ಅಧ್ಯಕ್ಷ ಡಾ.ಕೆ.ಎಂ. ಸೈಯದ್ ಚಾಲನೆ ನೀಡಿದರು.

ನಂತರ ಮಾತನಾಡಿ ಕ್ರಿಕೆಟ್ ಎಲ್ಲರ ಅಚ್ಚುಮೆಚ್ಚಿನ ಆಟವಾಗಿದ್ದು, ಕ್ರೀಡೆ ದೈಹಿಕ ಮಾನಸಿಕ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ, ಕ್ರೀಡೆಯಲ್ಲಿ ಸೋಲು ಗೆಲುವು ಮುಖ್ಯವಲ್ಲ ಪಾಲ್ಗೊಳ್ಳುವುದು ಮುಖ್ಯ ಎಂದರು.

ಪಲ್ಲೆದರ ಓಣಿಯ ಶಂಕರ ಪಾಟೀಲ್ ಮತ್ತು ಜಹೀರ್ ಹುಸೈನಿಯವರು ನೈಟ್ ಟರ್ಫ್ ಕ್ರಿಕೆಟ್ ಟ್ರೊಫಿಯ ಆಯೋಜಿಸಿದ್ದರು.

ಈ ಸಂದರ್ಭದಲ್ಲಿ ಮುಖಂಡರಾದ ಸೈಯದ್ ನಾಸೀರ್ ಹುಸೇನ್, ಯುವ ಮುಖಂಡ ರವಿಚಂದ್ರ ಮಾಲಿ ಪಾಟೀಲ್ ಓಜಿನಹಳ್ಳಿ, ಜಹೀರ್ ಹುಸೇನ್ , ಕ್ರೀಡಾ ಪ್ರೇಮಿಗಳು ಪಾಲ್ಗೊಂಡಿದ್ದರು.



ಮಹಾತ್ಮ ಗಾಂಧೀಜಿ 156ನೇ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಜಿಪಂ ಸಿಇಒ ಮಹಮ್ಮದ್ ಹ್ಯಾರೀಸ್ ಸುಮೈರ್ ಕರೆ

# ಸತ್ಯ–ಅಹಿಂಸಾ ಮಾರ್ಗದಲ್ಲಿ ಸಾಗೋಣ

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಅ.02–ಪ್ರತಿಯೊಬ್ಬರೂಸತ್ಯ–ಅಹಿಂಸಾ ಮಾರ್ಗದಲ್ಲಿನಡೆಯೋಣ ಎಂದು ಜಿಲ್ಲಾ ಪಂಚಾಯತ್‌ನ ಮುಖ್ಯಕಾರ್ಯನಿರ್ವಾಹಕಅಧಿಕಾರಿ ಮಹಮ್ಮದ್ ಹ್ಯಾರೀಸ್ ಸುಮೈರ್ ಅವರು ಕರೆ ನೀಡಿದರು.

ಜಿಲ್ಲಾಡಳಿತ,ಜಿಲ್ಲಾ ಪಂಚಾಯತ್ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಮಹಾತ್ಮ ಗಾಂಧೀಜಿಯವರ 156ನೇ ಜಯಂತ್ಯೋತ್ಸವದ ಅಂಗವಾಗಿ ನಗರದ ಹಳೆಯ ಜಿಲ್ಲಾಧಿಕಾರಿಗಳ ಕಚೇರಿ ಆವರಣದ ಗಾಂಧಿ ಭವನದಲ್ಲಿ ಗುರುವಾರ ಏರ್ಪಡಿಸಿದ್ದ ಬಾಪೂಜಿ ಪ್ರಬಂಧ ಸ್ಪರ್ಧೆ ವಿಜೇತರಿಗೆ ಪ್ರಮಾಣ ಪತ್ರ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತಸಮಾಜದಲ್ಲಿಮಾನವೀಯ ಮೌಲ್ಯಗಳು ಕ್ಷೀಣಿಸುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದ ಅವರು, ಯುವ ಪೀಳಿಗೆಯು ಉತ್ತಮ ಶಿಕ್ಷಣ ಪಡೆದುಕೊಳ್ಳುವ ಮೂಲಕ ಸಮಾಜಕ್ಕೆ ಕೊಡುಗೆ ನೀಡಬೇಕು ಎಂದು ಕಿವಿಮಾತು ಹೇಳಿದರು.

ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್ ಅವರು ಮಾತನಾಡಿ, ರಾಷ್ಟ್ರಪಿತಮಹಾತ್ಮಗಾಂಧೀಜಿಯವರು ಶಾಂತಿ ಮಂತ್ರದಿಂದ ಸ್ವಾತಂತ್ರ್ಯ ದೊರಕಿಸಿಕೊಟ್ಟವರು. ಮಹಾತ್ಮ ಗಾಂಧೀಜಿ ಅವರು 'ನನ್ನ ಜೀವನವೇ ನನ್ನ ಸಂದೇಶ' ಎಂದು ಮತ್ತು ಲಾಲ್ ಬಹದ್ದೂರು ಶಾಸ್ತ್ರೀ ಅವರು 'ಜೈ ಜವಾನ್, ಜೈ ಕಿಸಾನ್' ಎಂದು ಹೇಳಿದ್ದಾರೆ. ಈ ಇಬ್ಬರು ಮಹಾನ್ ನಾಯಕರಆದರ್ಶ ಪಾಲನೆಮಾಡಿದರೆ ನಾವು ಉತ್ತಮ ಸಮಾಜ ನಿರ್ಮಾಣ




ಮಾಡಬಹುದು.ಈನಿಟ್ಟಿನಲ್ಲಿನಾವೆಲ್ಲರೂ ಒಟ್ಟಾಗಿ ಮಹನೀಯರ ಜೀವನ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಮೂಲಕ ಅವರು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯೋಣ ಎಂದು ಹೇಳಿದರು.

ಬಳ್ಳಾರಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ ಅವರು ಮಾತನಾಡಿ, ಮಹಾತ್ಮ ಗಾಂಧೀಜಿ ಅವರುಬಳ್ಳಾರಿಯೊಂದಿಗೆಅವಿನಾಭಾವ ಸಂಬಂಧ ಹೊಂದಿದ್ದರು. ಸ್ವಾತಂತ್ರ್ಯ ಹೋರಾಟಕ್ಕೆ ಅವರು ಧುಮುಕುವ ಮುನ್ನಾ ದೇಶದ್ಯಾಂತ ಸಂಚರಿಸಿ, ಜನಸಾಮಾನ್ಯರನ್ನು ಭೇಟಿಯಾಗಲು ನಿರ್ಧರಿಸಿದ್ದರು. ಅದರಂತೆ, ಅವರು 1921ರ ಅ.01ರಂದು ಪ್ರಥಮ ಬಾರಿಗೆ ಬಳ್ಳಾರಿಗೆ ಭೇಟಿ ನೀಡಿದ್ದರು, ಆ ಸಂದರ್ಭದಲ್ಲಿ ಬಳ್ಳಾರಿ ರೈಲು ನಿಲ್ದಾಣದಲ್ಲಿ ಒಂದು ರಾತ್ರಿ ನಿದ್ರಿಸಿ ಮರು ದಿನ ಧಾರವಾಡಕ್ಕೆ ಪ್ರಯಾಣಿಸಿದುದ್ದನ್ನು ನಾವು ಸ್ಮರಿಸಬಹುದಾಗಿದೆ ಎಂದರು.

ಬಾಪೂಜಿಯವರು, 1934ರ ಮಾ.03ರಂದು ಸ್ವಾತಂತ್ರ್ಯ ಹೋರಾಟಕ್ಕಾಗಿ ಸಾರ್ವಜನಿಕರಿಂದ ದೇಣಿಗೆ ಸಂಗ್ರಹಣೆಗಾಗಿ ಎರಡನೇ ಬಾರಿ ಬಳ್ಳಾರಿಗೆ ಆಗಮಿಸಿದ್ದರು ಹಾಗೂ ಇಲ್ಲಿಂದ ಸಂಡೂರಿಗೆ ಸಹ ಪ್ರಯಾಣಿಸಿ, ಅಲ್ಲಿರುವ ಪರಿಶಿಷ್ಟರಿಗೆ ಕುಮಾರಸ್ವಾಮಿದೇವಸ್ಥಾನದಪ್ರವೇಶಕ್ಕೆ ಅಂದಿನ ಘೋರ್ಪಡೆ ರಾಜಮನೆತನ ಅವಕಾಶ ನೀಡಿದ್ದ ಹಿನ್ನಲೆಯಲ್ಲಿ ಅವರನ್ನು ಅಭಿನಂದಿಸಿದ್ದರು ಎಂದು ಹೇಳಿದರು.

ಗಾಂಧೀಜಿಯವರಮರಣದನಂತರ ಅವರ ಚಿತಾಭಸ್ಮವನ್ನು ಅಖಂಡ ಬಳ್ಳಾರಿಯಾಗಿದ್ದ ಸಂದರ್ಭದಲ್ಲಿ ಕೂಡ್ಲಿಗಿ ತಾಲ್ಲೂಕಿನಲ್ಲಿ ಅಂದಿನ ಗಾಂಧಿವಾದಿಗಳು ತಂದು ಸ್ಮಾರಕವನ್ನು ನಿರ್ಮಿಸಿರುವುದು ನಮ್ಮ ಬಳ್ಳಾರಿಯ ಹೆಮ್ಮೆಯಾಗಿದೆ ಎಂದು ಸ್ಮರಿಸಿದರು.

ಬಳ್ಳಾರಿಯಆಕಾಶವಾಣಿಉದ್ಘೋಷಕರು ಹಾಗೂ ಉಪನ್ಯಾಸಕರಾದ ಅಮಾತಿ ಬಸವರಾಜ ಅವರು ವಿಶೇಷ ಉಪನ್ಯಾಸದಲ್ಲಿ ಮಾತನಾಡಿ, ಮಹಾತ್ಮ ಗಾಂಧೀಜಿ ಅವರು ಒಬ್ಬ ಮನುಷ್ಯ ಉತ್ತಮ ನಾಗರಿಕನಾಗಿ ಬಾಳಲು, ಸುಸೂತ್ರವಾಗಿ ಜೀವನ ನಡೆಸಲು 11 ಸೂತ್ರಗಳನ್ನು ನೀಡಿದ್ದು, ಅದರಂತೆ ನಾವೆಲ್ಲರೂ ಜೀವಿಸಬೇಕಿದೆ. ಹಾಗೇಯೇ ಅವರ ನುಡಿಯಂತೆ ತತ್ವವಿಲ್ಲದ ರಾಜಕೀಯ, ಶ್ರಮವಿಲ್ಲದ ದುಡಿಮೆ ಎರಡೂ ವ್ಯರ್ಥ ಎಂದು ಮಹಾತ್ಮರು ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿಮಹಾತ್ಮಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರೀ ಅವರ ಭಾವಚಿತ್ರಗಳಿಗೆ ಗಣ್ಯರು ಪುಷ್ಪನಮನ ಸಲ್ಲಿಸಿದರು ಮತ್ತು ಕಾರ್ಯಕ್ರಮ ಆರಂಭಕ್ಕೂ ಮುನ್ನ ಗಾಂಧಿಭವನ ಆವರಣದಲ್ಲಿರುವ ಗಾಂಧೀಜಿಯವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು.

ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳು ಸರ್ವಧರ್ಮ ಗ್ರಂಥಗಳ ಬೋಧನೆ ಮಾಡಿದ್ದು, ವಿಶೇಷವಾಗಿತ್ತು. ಬಳ್ಳಾರಿ ತಾಲ್ಲೂಕಿನ ಇಬ್ರಾಹಿಂಪುರದ ಎಸ್.ಎಂ.ಹುಲುಗಪ್ಪ ತಂಡದಿಂದ ಮಹಾತ್ಮ ಗಾಂಧೀಜಿ ಜಯಂತಿಯ ಅಂಗವಾಗಿ ಗಾಂಧೀಜಿ ಕುರಿತು ಭಜನಾ ಗೀತೆ ಪ್ರಸ್ತುತ ಪಡಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಬಾಪೂಜಿ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ನಗದು ಬಹುಮಾನ ಹಾಗೂ ಪ್ರಮಾಣ ಪತ್ರ ವಿತರಣೆ ಮಾಡಲಾಯಿತು.

**ಬಹುಮಾನ ವಿಜೇತರು:**

**ಪ್ರೌಢಶಾಲೆ ವಿಭಾಗ:**

ಪ್ರಥಮ–ಚಿನ್ನ (ಸರ್ಕಾರಿ ಪ್ರೌಢಶಾಲೆ, ತಾಳೂರು, ಸಂಡೂರು(ತಾ), ದ್ವಿತೀಯ–ಸುಷ್ಮಿತಾ (ಸರ್ಕಾರಿ ಪ್ರೌಢಶಾಲೆ, ತೋರಣಗಲ್ಲು, ಸಂಡೂರು(ತಾ), ತೃತೀಯ–ಶಾಂತಿ.ಹೆಚ್ (ಸಂತ ಜಾನ್ ಸರ್ಕಾರಿ ಪ್ರೌಢ ಶಾಲೆ, ಬಳ್ಳಾರಿ ಪಶ್ಚಿಮ),

**ಪದವಿಪೂರ್ವ ಕಾಲೇಜು ವಿಭಾಗ:**

ಪ್ರಥಮ–ಕೆ.ಪದ್ಮಾವತಿ (ಸರ್ಕಾರಿ (ಮಾಪು) ಪದವಿ ಪೂರ್ವ ಕಾಲೇಜು ಬಳ್ಳಾರಿ), ದ್ವಿತೀಯ–ಎಸ್.ಮಾರುತಮ್ಮ (ಸರ್ಕಾರಿ ಪದವಿ ಪೂರ್ವ ಕಾಲೇಜು, ತೆಕ್ಕಲಕೋಟೆ), ತೃತೀಯ–ರೇವತಿ (ಡಾ.ಎಪಿಜೆ ಅಬ್ದುಲ್ ಕಲಾಂ ಪದವಿಪೂರ್ವ ಕಾಲೇಜು, ಕೊಳಗಲ್ಲು, ಬಳ್ಳಾರಿ ತಾಲ್ಲೂಕು).

**ಪದವಿ/ಸ್ನಾತಕೋತ್ತರ ವಿಭಾಗ:**

ಪ್ರಥಮ–ದೇವೆಂದ್ರ ನಾಯ್ಕ ಕಾರೇಕಲ್ಲು (ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ), ದ್ವಿತೀಯ–ಜಿ.ವಿಜಯ್ ಕುಮಾರ್ (ಸಸಅ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಳ್ಳಾರಿ), ತೃತೀಯ–ಮಾನ್ಯ.ಎನ್ (ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಬಳ್ಳಾರಿ), ಈ ಸಂದರ್ಭದಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನವೀನ್ ಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಬಿ.ಉಮಾದೇವಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವಾರ್ತಾ ಸಹಾಯಕ ವಿ.ಸಿ.ಗುರುರಾಜ ಸೇರಿದಂತೆ ಶಾಲಾ–ಕಾಲೇಜುಗಳ ಉಪನ್ಯಾಸಕರು, ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಸ್ವಚ್ಛತೆಗೆ ಆದ್ಯತೆ ನೀಡೋಣ: ಗಾದಿಲಿಂಗಪ್ಪ



**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಅ.02–ಗಾಂಧೀಜಿಯವರು ಕಂಡ ಕನಸು ಸ್ವಚ್ಛ ಭಾರತ. ಪ್ರತಿಯೊಬ್ಬ ನಾಗರಿಕರು ವಾರದಲ್ಲಿ ಎರಡು ಗಂಟೆಗಳ ಕಾಲ ಶ್ರಮದಾನ ಮಾಡಿದರೆ ಗಾಂಧೀಜಿ ಅವರ ಕನಸು ನನಸಾಗುವುದು. ಹಾಗಾಗಿ ಪ್ರತಿಯೊಬ್ಬ ನಾಗರಿಕರು ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂದು ಕೊಳಗಲ್ಲು ಗ್ರಾಮ ಪಂಚಾಯಿತಿಯ ಅಧ್ಯಕ್ಷ ಗಾದಿಲಿಂಗಪ್ಪ ಅವರು ಹೇಳಿದರು.

ಕೇಂದ್ರ ಸಂವಹನ ಇಲಾಖೆ, ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸರ್ಕಾರಿ ಪ್ರೌಢಶಾಲೆ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಗ್ರಾಮ ಪಂಚಾಯತಿ ಕೊಳಗಲ್ಲು ಇವರ ಸಂಯುಕ್ತಾಶ್ರಯದಲ್ಲಿ ಕೊಳಗಲ್ಲು ಗ್ರಾಮದ ಈರಣ್ಣ ಸ್ವಾಮಿ ಕಲ್ಯಾಣ ಮಂಟಪದಲ್ಲಿ ಗಾಂಧೀಜಿ ಜಯಂತಿ ಅಂಗವಾಗಿ ಗುರುವಾರ ಆಯೋಜಿಸಿದ್ದ ಸ್ವಚ್ಛತೆಯೇ ಸೇವೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಗಾಂಧೀಜಿಯವರ ತತ್ವಗಳನ್ನು ನಾವೆಲ್ಲರೂ ಪಾಲಿಸೋಣ. ಅವರು ಕಂಡ ಕನಸು ನನಸು ಮಾಡಬೇಕಾದರೆ ಮೊದಲು ಗ್ರಾಮಗಳು ಸ್ವಚ್ಛವಾಗಬೇಕು ಎಂದು ಹೇಳಿದರು. ಸ್ವಚ್ಛ ಭಾರತ ಜಿಲ್ಲಾ ಸಂಯೋಜಕ ಮರಿಸ್ವಾಮಿ ಅವರು ಮಾತನಾಡಿ, ಗ್ರಾಮಗಳಲ್ಲಿ ಕಡ್ಡಾಯವಾಗಿ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಬೇಕು. ಪ್ಲಾಸ್ಟಿಕ್ ಪರಿಸರಕ್ಕೆ ಮಾರಕ ಎಂದು ತಿಳಿಸಿದರು.

ಕೊಳಗಲ್ಲು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎಂ.ಶಾಷಾವಲಿ ಮಾತನಾಡಿ, ಪ್ರತಿಯೊಬ್ಬ ನಾಗರಿಕರು ಹಸಿ ಕಸ ಒಣ ಕಸವನ್ನು ಬೇರ್ಪಡಿಸಿ ಪಂಚಾಯಿತಿಯವರು ನಿಯೋಜಿಸಿರುವ ಸ್ವಚ್ಛತಾ ವಾಹನಗಳಿಗೆ ತಪ್ಪದೇ ಕಸವನ್ನು ನಿಡಬೇಕೆಂದು ಸಾರ್ವಜನಿಕರಲ್ಲಿ ವಿನಂತಿಸಿದರು. ಗಾಂಧೀಜಿ ಜಯಂತಿ ಅಂಗವಾಗಿ ಕೇಂದ್ರ ಸಂವಹನ ಇಲಾಖೆ ವತಿಯಿಂದ ರಂಗೋಲಿ, ಚಿತ್ರಕಲೆ ಮತ್ತು ಪ್ರಬಂಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ವಿಜೇತರಿಗೆ ಕಾರ್ಯಕ್ರಮದಲ್ಲಿ ಬಹುಮಾನಗಳನ್ನು ವಿತರಿಸಲಾಯಿತು. ಕಾರ್ಯಕ್ರಮದ ಅಂಗವಾಗಿ ಏರ್ಪಡಿಸಿದ್ದ ಜಾಗೃತಿ ಜಾಥದಲ್ಲಿ ಎಲ್ಲಾ ಶಾಲಾ ಮಕ್ಕಳು ಉತ್ಸಾಹದಿಂದ ಭಾಗವಹಿಸಿದ್ದರು. ಸಂಗೀತ ಮತ್ತು ನಾಟಕ ವಿಭಾಗದ ಕಲಾ ತಂಡದವರಿಂದ ಜನಪದ ಗೀತೆಗಳ ಮೂಲಕ ಜಾಗೃತಿ ಮೂಡಿಸಲಾಯಿತು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಸದಸ್ಯರಾದ ಹೊನ್ನೂರಪ್ಪ, ರಾಮಕೃಷ್ಣ, ಪಲ್ಲವಿ, ಈರಣ್ಣ, ಸ್ಥಳೀಯ ವೈದ್ಯಾಧಿಕಾರಿಗಳಾದ ಡಾ.ದಿವ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೇಲ್ವಿಚಾರಕಿಯಾದ ಕಲ್ಯಾಣಮ್ಮ, ಕೇಂದ್ರ ಸಂವಹನ ಇಲಾಖೆಯ ಎನ್.ರಾಮಕೃಷ್ಣ ಸೇರಿದಂತೆ ಗ್ರಾಮದ ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಕೊಪ್ಪಳ ಜಿಲ್ಲೆಯನ್ನು ರೇಬಿಸ್ ಮುಕ್ತ ಜಿಲ್ಲೆಯನ್ನಾಗಿಸಲು ಎಲ್ಲರೂ ಒಟ್ಟಾಗಿ ಪ್ರಯತ್ನಿಸಿ: ಡಾ. ಸುರೇಶ ಬಿ.ಇಟ್ನಾಳ

**ಮಲ್ಲಮ್ಮ ನುಡಿ ವಾರ್ತೆ**

ಕೊಪ್ಪಳ : ನೀನು, ನಾನು ಮತ್ತು ನಮ್ಮ ಸಮಾಜ ಎನ್ನುವ ಮಾತಿನಂತೆ ನಮ್ಮ ಕೊಪ್ಪಳ ಜಿಲ್ಲೆಯನ್ನು ರೇಬಿಸ್ ಮುಕ್ತ ಜಿಲ್ಲೆಯನ್ನಾಗಿಸಲು ಎಲ್ಲರೂ ಒಟ್ಟಾಗಿ ಪ್ರಯತ್ನಿಸಬೇಕು ಎಂದು ಕೊಪ್ಪಳ ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಪ್ರಾಣಿ ದಯಾ ಸಂಘ ಹಾಗೂ ಕೊಪ್ಪಳ ಕೃಷಿ ತಂತ್ರಜ್ಞರ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಮಂಗಳವಾರ ಕೊಪ್ಪಳ ಜಿಲ್ಲಾ ಪಂಚಾಯತ್‌ನ ಜೆ.ಹೆಚ್ ಪಟೇಲ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿಶ್ವ ರೇಬಿಸ್ ದಿನದ ಅಂಗವಾಗಿ ಒಂದು ಆರೋಗ್ಯ ಕಾರ್ಯಕ್ರಮದ ಅಡಿಯಲ್ಲಿ ರೇಬಿಸ್ ರೋಗದ ಕುರಿತು ಒಂದು ದಿನದ ಜಿಲ್ಲಾ ಮಟ್ಟದ ತಾಂತ್ರಿಕ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಗ್ರಾಮೀಣ ಪ್ರದೇಶಗಳಲ್ಲಿ ಈ ರೇಬಿಸ್ ರೋಗದ ಕುರಿತು ಹೆಚ್ಚಾಗಿ ಜಾಗೃತಿ ಕಾರ್ಯಕ್ರಮ ಮಾಡಬೇಕು. ಅಂತಹ ಪ್ರದೇಶಗಳಲ್ಲಿ ಹೈನುಗಾರಿಕೆ, ದನ–ಕರುಗಳ ಸಾಕಾಣಿಕೆ ಹೆಚ್ಚಾಗಿ ಇರುವುದರಿಂದ ಅಲ್ಲಿ ರೇಬಿಸ್ ಬಗ್ಗೆ ಮಾಹಿತಿ ನೀಡುವ ಮೂಲಕ ಅವರಿಗೆ ಜಾಗೃತಿ ಮೂಡಿಸಬೇಕು. ಗ್ರಾಮ ಪಂಚಾಯತಿ ಮಟ್ಟದಲ್ಲಿ ಬೀದಿನಾಯಿ ಸಂಖ್ಯೆಯನ್ನು ತಡೆಗಟ್ಟಬೇಕು. ಹಾಗೆಯೇ ತಾಲ್ಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಅಧ್ಯಕ್ಷತೆಯಲ್ಲಿ ಇದಕ್ಕಾಗಿ ಒಂದು ಸಮಿತಿಯನ್ನು ಸಹ ಮಾಡಲಾಗಿದೆ. ಎಲ್ಲರೂ ಸೇರಿ ನಮ್ಮ ಜಿಲ್ಲೆಯನ್ನು ರೇಬಿಸ್ ಮುಕ್ತ ಜಿಲ್ಲೆಯನ್ನಾಗಿಸಲು ಶ್ರಮಿಸಬೇಕು. ಇದರ ಜೊತೆಗೆ ವೆಟರ್ನರಿ ವೈದ್ಯರು ಸಹ ಸಾರ್ವಜನಿಕರಿಗೆ ರೇಬಿಸ್ ಕುರಿತು ಜಾಗೃತಿ ಮೂಡಿಸುವ ಕೆಲಸ ಮಾಡಬೇಕು ಎಂದರು.

ಇತ್ತೀಚಿನ ದಿನಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ಬೀದಿನಾಯಿಗಳ ಸಂಖ್ಯೆ ಬಹಳ ಹೆಚ್ಚಾಗಿದೆ. ಎಲ್ಲಾ ಕಡೆಗೂ ಅದೇ ಸಮಸ್ಯೆ, ಎಲ್ಲರೂ ಕೂಡ ಒಟ್ಟಾಗಿ ಬೀದಿನಾಯಿಗಳನ್ನು ಅನಿಮಲ್ ಕಂಟ್ರೋಲ್ ಬೋರ್ಡ್‌ಗೆ ಸೇರಿಸುವ ಕೆಲಸ ಮಾಡಿ ರೇಬಿಸ್ ಕಡಿಮೆ ಮಾಡಲು ನಾವು ಪ್ರಯತ್ನ ಮಾಡಿದಾಗ ಮಾತ್ರ 2030ಕ್ಕೆ ನಮ್ಮ ರಾಜ್ಯವನ್ನು ರೇಬಿಸ್ ಮುಕ್ತ ರಾಜ್ಯವನ್ನಾಗಿಸಲು ಸಾಧ್ಯ ಎಂದು ಹೇಳಿದರು. ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವರ್ಣಿತ್ ನೇಗಿ ಅವರು ಮಾತನಾಡಿ, ಈ ಒಂದು ಆರೋಗ್ಯ ಕಾರ್ಯಕ್ರಮ ಅಂದರೆ ಪ್ರಾಣಿಗಳು ಮತ್ತು ಮಾನವರ ಆರೋಗ್ಯ ಎರಡು ಒಂದೇ ಎಂದು ಅರ್ಥ. ಪ್ರಾಣಿಗಳು ಆರೋಗ್ಯವಾಗಿದ್ದರೆ ನಾವು ಸಹ ರೇಬಿಸ್‌ನಂತಹ ರೋಗದಿಂದ ದೂರವಿರಲು ಸಾಧ್ಯ, ಹಸುವಿನ ಹಾಲು ಸೇರಿದಂತೆ ಇತರೆ ಪದಾರ್ಥಗಳನ್ನು ನಾವು ಉಪಯೋಗಿಸುತ್ತೇವೆ. ಹಾಗಾಗಿ ನಮಗೆ ನಮ್ಮ ಆರೋಗ್ಯದ ಕಾಳಜಿಯ ಜತೆಗೆ ಸಾಕು ಪ್ರಾಣಿಗಳ ಆರೋಗ್ಯವು ಸಹ ಬಹಳ ಮುಖ್ಯ. ಅದಕ್ಕಾಗಿ ಆರೋಗ್ಯ ಇಲಾಖೆ ಮತ್ತು ಪಶು ವೈದ್ಯಕೀಯ ಇಲಾಖೆಯ ಸಹಯೋಗದೊಂದಿಗೆ ಇಂತಹ ಕಾರ್ಯಾಗಾರಗಳು ನಡೆಯಬೇಕು ಎಂದು ಹೇಳಿದರು. ಕೊಪ್ಪಳ ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾದ ನಿರ್ಮಲಾ ಎಮ್.ಕೆ ಅವರು ಮಾತನಾಡಿ, ರೇಬಿಸ್ ರೋಗದ ಕುರಿತು ತಾಂತ್ರಿಕ ಕಾರ್ಯಗಾರದ ಸದುಪಯೋಗ ಪಡಿಸಿಕೊಂಡು, 2030 ಕ್ಕೆ ರೇಬಿಸ್ ಮುಕ್ತ ರಾಜ್ಯವನ್ನಾಗಿ ಮಾಡುವಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಪಾತ್ರ ಬಹಳ ಮುಖ್ಯ ಎಂದು ಹೇಳಿದರು. ಈ ಸಂದರ್ಭ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ವಿಶ್ವ ರೇಬಿಸ್ ದಿನದ ಅಂಗವಾಗಿ ರೇಬಿಸ್ ತಡೆಗಟ್ಟಲು ಮುಂದಾಗೋಣ: ನೀವು, ನಾನು, ನಮ್ಮ ಸಮಾಜ ಎನ್ನುವ ಪೋಸ್ಟರ್ ಬಿಡುಗಡೆ ಮಾಡಲಾಯಿತು. ಕಾರ್ಯಾಗಾರದಲ್ಲಿ ಬೆಂಗಳೂರು, ಹೆಬ್ಬಾಳದ ಪಶು ವೈದ್ಯಕೀಯ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕರಾದ ಡಾ. ಜಿ.ಕವಿತಾ ಹಾಗೂ ಕೊಪ್ಪಳದ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕ ಡಾ.ಗವಿಸಿದ್ದೇಶ ವಿ.ಆರ್ ಅವರು ರೇಬಿಸ್ ರೋಗದ ಕುರಿತು ಒಂದು ದಿನದ ಜಿಲ್ಲಾ ಮಟ್ಟದ ತಾಂತ್ರಿಕ ಕಾರ್ಯಾಗಾರದ ಬಗ್ಗೆ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಗುಲ್ಬರ್ಗಾದ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಜಂಟಿ ನಿರ್ದೇಶಕ ಡಾ.ರಮೇಶ ದೊಡ್ಡಮನಿ, ಕೊಪ್ಪಳ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ನಿರ್ದೇಶಕ ಡಾ. ಪಿ. ಮಲ್ಲಯ್ಯ, ಮುನಿರಾಬಾದ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಉಪ ನಿರ್ದೇಶಕ ಡಾ. ಶ್ರೀಧರ ಕೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ನಂದಕುಮಾರ, ಕೊಪ್ಪಳ ಕೃಷಿ ತಂತ್ರಜ್ಞರ ಸಂಸ್ಥೆಯ ಉಪಾಧ್ಯಕ್ಷ ಹಾಗೂ ರಾಜ್ಯ ಕೃಷಿ ತಂತ್ರಜ್ಞರ ಸಂಸ್ಥೆ, ಬೆಂಗಳೂರು ಇದರ ನಿಕಟಪೂರ್ವ ಕಾರ್ಯದರ್ಶಿಗಳಾದ ಡಾ. ವೀರಣ್ಣ ಕಮತರ ಸೇರಿದಂತೆ ಕೊಪ್ಪಳ ಜಿಲ್ಲೆಯ ವೆಟರ್ನರಿ ವೈದ್ಯರು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರೀ ಅವರ ಜೀವನ ಮೌಲ್ಯ ಅಳವಡಿಸಿಕೊಳ್ಳೋಣ: ಪ್ರೊ.ಎಂ ಮುನಿರಾಜು

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಅ.02–ಮಹಾತ್ಮಾಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರೀ ಅವರು ನಮ್ಮ ದೇಶವು ಸದಾ ಗೌರವಿಸುವ ಎರಡು ಮೇರು ವ್ಯಕ್ತಿತ್ವಗಳು, ಇವರ ಸ್ಮರಣೆ ಇಂದಿನ ಕಾಲಘಟ್ಟದಲ್ಲಿ ಅಗತ್ಯವಿದೆ. ಅವರ ಜೀವನ ಮೌಲ್ಯಗಳನ್ನು ಅಳವಡಿಸಿಕೊಳ್ಳೋಣ ಎಂದು ವಿಶ್ರೀಕೃ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಂ ಮುನಿರಾಜು ಅವರು ಹೇಳಿದರು.



ರಾಷ್ಟ್ರೀಯ ಸೇವಾ ಯೋಜನೆಯ ಸಹಯೋಗದಲ್ಲಿ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದಲ್ಲಿ ಗುರುವಾರ ಆಚರಿಸಿದ ಮಹಾತ್ಮ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರೀ ಅವರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ವಿಶ್ವವಿದ್ಯಾಲಯದ ಕುಲಸಚಿವ ನಾಗರಾಜು ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಮಹಾತ್ಮ ಗಾಂಧೀಜಿ ಅವರ ಜೀವನವೇ ಒಂದು ಸಂದೇಶ ಆ ಸಂದೇಶವು ನಮಗೆಲ್ಲರಿಗೂ ಮಾದರಿಯಾಗಿದೆ. ಶಾಸ್ತ್ರೀಜಿಯವರ ಸರಳತೆಯನ್ನು ಅವರ ಜೀವನದ ಕೆಲವು ಘಟನೆಗಳನ್ನು ವಿವರಿಸುವ ಮೂಲಕ ಸ್ಮರಿಸಿದರು. ಆ ಮೂಲಕ ಸರಳತೆಯ ಮಹತ್ವವನ್ನು ಪ್ರತಿಯೊಬ್ಬರೂ ಪಾಲಿಸಬೇಕು ಮತ್ತು ಅದರ ಮೌಲ್ಯವನ್ನು ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ವಿಶ್ವವಿದ್ಯಾಲಯದ ಆಂಗ್ಲ ವಿಭಾಗದ ಪ್ರಾಧ್ಯಾಪಕ ಪ್ರೊ.ರಾಬರ್ಟ್ ಜೋಸ್ ಅವರು ಮಾತನಾಡಿ, ಗಾಂಧೀಜಿ ಮತ್ತು ಶಾಸ್ತ್ರೀಜಿಯವರ ಜೀವನ ಮತ್ತು ಅವರು ಅನುಸರಿಸಿದ ಮಾರ್ಗಗಳನ್ನು ತಿಳಿದು ಅದನ್ನು ಪಾಲಿಸುವುದು ಇಂದಿನ ಯುವ ಪೀಳಿಗೆಯ ಕರ್ತವ್ಯವಾಗಿದೆ ಎಂದು ತಿಳಿಸಿದರು.

ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಡಾ.ಕುಮಾರ್ ಕಾರ್ಯಕ್ರಮವನ್ನು ನಿರ್ವಹಿಸಿದರು. ಕಾರ್ಯಕ್ರಮದನಂತರ ಸಸಿ ನೆಡುವ ಕಾರ್ಯಕ್ರಮವನ್ನು ವಿಶ್ವವಿದ್ಯಾಲಯದಲ್ಲಿ ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಎಲ್ಲಾ ವಿಭಾಗಗಳ ಮುಖ್ಯಸ್ಥರು, ಬೋಧಕರು ಮತ್ತು ಬೋಧಕೇತರ ವರ್ಗದವರು ಉಪಸ್ಥಿತರಿದ್ದರು.

# ಇಂದು 25ನೇ ವರ್ಷದ ಶ್ರೀದೇವಿ ಪುರಾಣ ಮಹಾಮಂಗಲೋತ್ಸವ

ಮಲ್ಲಮ್ಮ ನುಡಿವಾರ್ತೆ

ಕುಕನೂರ : 25ನೆಯ ವರ್ಷದ ಅಧಿದೇವತೆ ಶ್ರೀ ದೇವಿ ಪುರಾಣದ ಮಹಾಮಂಗಲ ಕಾರ್ಯಕ್ರಮ ಇಂದು 02 ಅಕ್ಟೋಬರ್ 2025 ರಂದು ಆಯೋಜಿಸಲಾಗಿದ್ದು ಈ ವೇಳೆ ಗ್ರಾಮ ದೇವತೆ ದೇವಸ್ಥಾನದಲ್ಲಿ ಹಲವಾರು ಧಾರ್ಮಿಕ ವಿಧಿ ವಿಧಾನಗಳು ನೆರವೇರಿಸುವುದಾಗಿ ದೇವಸ್ಥಾನದ ಸೇವಾ ಸಮಿತಿ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ. ತಾಲೂಕಿನ ಮಂಡಲಗಿರಿ ಗ್ರಾಮದ ಗ್ರಾಮ ದೇವತೆ ಶ್ರೀ ದ್ಯಾಮವ್ವ ದೇವಿ ದೇವಸ್ಥಾನದಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಸಹ ಸತತವಾಗಿ 25 ವರ್ಷಗಳ ಕಾಲ ಪುರಾಣ ಪ್ರವಚನ ಕಾರ್ಯಕ್ರಮ ಆಯೋಜಿಸಲಾಗಿದ್ದು ಈ ಬಾರಿಯ 25ನೇ ವರ್ಷದ ಪುರಾಣ ಮಹಾಮಂಗಳ ಕಾರ್ಯಕ್ರಮವು ಅಕ್ಟೋಬರ್ 2ರ ಗುರುವಾರ



ಸಂಪನ್ನಗೊಳ್ಳಲಿದ್ದು ಈ ದಿನ ಗ್ರಾಮದೇವತೆ ದೇವಸ್ಥಾನದಲ್ಲಿ ವಿವಿಧ ಪೂಜಾ ವಿಧಿ ವಿಧಾನಗಳು ಹಾಗೂ ಗ್ರಾವ ೨ ದೇವತೆ ಶ್ರೀದ್ಯಾಮವ್ವ ದೇವಿಯ ಪಲ್ಲಕ್ಕಿ ಉತ್ಸವ ಜರಗುವುದಾಗಿ ಮಂಡಲಗಿರಿ ಗ್ರಾಮದ ಗ್ರಾಮದೇವತೆ ಶ್ರೀ ದ್ಯಾಮವ್ವ ದೇವಸ್ಥಾನದ ಸೇವಾ ಸಮಿತಿ ಸದಸ್ಯರು ಪತ್ರಿಕಾ ಪ್ರಕಟಣೆಗೆ ತಿಳಿಸಿರುತ್ತಾರೆ.

ಜಾಹೀರಾತಿಗಾಗಿ ಸಂಪರ್ಕಿಸಿರಿ: 9449732000

# 2025ನೇ ಸಾಲಿನ "ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ ಕರ್ನಾಟಕ"ಕ್ಕೆ ಇತಿಹಾಸಕಾರ, ಲೇಖಕ ಡಾ.ರಾಮಚಂದ್ರ ಗುಹಾ ಆಯ್ಕೆ

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಅ.02–ಪ್ರಸಿದ್ಧ ಭಾರತೀಯ ಇತಿಹಾಸಕಾರ, ಅಂಕಣಕಾರ ಮತ್ತು ಚಿಂತಕರಾದ ಡಾ.ರಾಮಚಂದ್ರ ಗುಹಾ ಅವರನ್ನು 2025ನೇ ಸಾಲಿನ ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ ಕರ್ನಾಟಕಕ್ಕೆ ಕರ್ನಾಟಕ ರಾಜ್ಯ ಸರ್ಕಾರ ಆಯ್ಕೆ ಮಾಡಿದೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವತಿಯಿಂದ ಪ್ರತಿ ವರ್ಷ ನೀಡಲಾಗುವ ಈ ಗೌರವಾನ್ವಿತ ಪ್ರಶಸ್ತಿಯನ್ನು, ಗಾಂಧೀಜಿಯವರ ಜೀವನ ಮೌಲ್ಯಗಳನ್ನು ಸಮಾಜದಲ್ಲಿ ಹರಡಲು ಮಹತ್ತರ ಕೊಡುಗೆ ನೀಡಿದ ವ್ಯಕ್ತಿ ಹಾಗೂ ಸಂಸ್ಥೆಗಳಿಗೆ ಪ್ರದಾನ ಮಾಡಲಾಗುತ್ತದೆ. ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಜಯಂತಿಯನ್ನು ರಾಜ್ಯಾದ್ಯಂತ ಅರ್ಥಪೂರ್ಣವಾಗಿ, ಜನಸಾಮಾನ್ಯರು, ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯಿಂದ ಆಚರಿಸಲು ರಾಜ್ಯ ಸರ್ಕಾರವು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈ ಆಚರಣೆಯ ಅಂಗವಾಗಿ ಗಾಂಧೀಜಿಯವರ ತತ್ವ, ಮೌಲ್ಯ ಹಾಗೂ ಸಮಾಜಮುಖಿ ಚಿಂತನೆಗಳನ್ನು ಜನಮನಗಳಲ್ಲಿ ಬಿತ್ತುವಲ್ಲಿ ಮಹತ್ವದ ಪಾತ್ರವಹಿಸಿರುವ ಡಾ. ರಾಮಚಂದ್ರ ಗುಹಾ ಅವರನ್ನು ಈ ವರ್ಷದ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.



ಡಾ.ಗುಹಾ ಅವರು ಭಾರತದ ಸಮಕಾಲೀನ ಇತಿಹಾಸ, ರಾಜಕೀಯ ಚಳವಳಿಗಳು, ಪರಿಸರ ಹೋರಾಟಗಳು ಹಾಗೂ ಕ್ರಿ–ಕೆಟ್ ಕುರಿತ ತಮ್ಮ ಅಧ್ಯಯನ ಮತ್ತು ಗ್ರಂಥ ರಚನೆಗಳ ಮೂಲಕ ಅಂತರರಾಷ್ಟ್ರೀಯ ಮಟ್ಟದಲ್ಲಿ ವಿಶಿಷ್ಟ ಸ್ಥಾನ ಪಡೆದಿದ್ದಾರೆ.

**ಅವರ ಪ್ರಮುಖ ಕೃತಿಗಳು:**

India After Gandhi (ಸ್ವಾತಂತ್ರ್ಯಾನಂತರ ಭಾರತದ ಇತಿಹಾಸ) A Corner of a Foreign Field (ಭಾರತೀಯ ಕ್ರಿಕೆಟ್‌ನ ಸಾಮಾಜಿಕ ಇತಿಹಾಸ)

Gandhi Before India (ಮಹಾತ್ಮ ಗಾಂಧೀಜಿಯವರ ಜೀವನಚರಿತ್ರೆಯ ಮೊದಲ ಭಾಗ)

Gandhi: The Years That Changed the World (ಜೀವನಚರಿತ್ರೆಯ ಎರಡನೇ ಭಾಗ)

The Unquiet Woods (ತಳಸ್ಥರದ ಪರಿಸರ ಚಳವಳಿಗಳ ಅಧ್ಯಯನ)

ಈ ಕೃತಿಗಳು ಇತಿಹಾಸ ಅಧ್ಯಯನವನ್ನು ಶ್ರೀಮಂತಗೊಳಿಸುವುದಷ್ಟೇ ಅಲ್ಲದೆ, ಸಾಮಾನ್ಯ ಓದುಗರಿಗೂ ಸುಲಭವಾಗಿ ತಲುಪುವ ಶೈಲಿಯಲ್ಲಿ ಬರೆದಿರುವುದರಿಂದ ಸಮಾಜದಲ್ಲಿ ಚಿಂತನ–ಮನನಕ್ಕೆ ಪ್ರೇರಣೆಯಾಗಿವೆ. ವಿಶೇಷವಾಗಿ ಗಾಂಧೀ ತತ್ವಗಳನ್ನು ಆಳವಾಗಿ ವಿಶ್ಲೇಷಿಸಿ ಅವನ್ನು ಸಮಕಾಲೀನ ಭಾರತಕ್ಕೆ ಸಂಬಂಧಿಸಿದಂತೆ ಅರ್ಥೈಸುವಲ್ಲಿ ಡಾ. ಗುಹಾ ಅವರಿಗೆ ಒಂದು ವಿಶಿಷ್ಟ ಸ್ಥಾನವಿದೆ. ಅವರ ಗಾಂಧೀಜಿಯವರ ಎರಡು ಸಂಪುಟಗಳ ಜೀವನಚರಿತ್ರೆ ಕನ್ನಡ ಸೇರಿದಂತೆ ಅನೇಕ ಭಾಷೆಗಳಿಗೆ ಅನುವಾದಗೊಂಡಿದೆ.

ರಾಜ್ಯ ಸರ್ಕಾರವು ಈ ಪ್ರಶಸ್ತಿಯ ಮೂಲಕ ಯುವ ಪೀಳಿಗೆಗೆ ಗಾಂಧೀಜಿಯವರ ಆದರ್ಶಗಳನ್ನು ಪರಿಚಯಿಸಿ, ಸತ್ಯ, ಅಹಿಂಸೆ, ಶಾಂತಿ ಮತ್ತು ಸೇವಾ ಮನೋಭಾವನೆಗಳನ್ನು ಬಲಪಡಿಸಲು ಬದ್ಧವಾಗಿದೆ. ಡಾ. ರಾಮಚಂದ್ರ ಗುಹಾ ಅವರಿಗೆ ಈ ಪ್ರಶಸ್ತಿ ಪ್ರದಾನವಾಗುವುದು, ಸಮಾಜದಲ್ಲಿ ಗಾಂಧೀಜಿಯವರ ಆದರ್ಶಗಳ ಪ್ರಚುರತೆ, ಸಂವಾದ ಮತ್ತು ಅಧ್ಯಯನಕ್ಕೆ ಪ್ರೇರಣೆಯಾದಂತಾಗಿದೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಹೇಮಂತ್ ಎಂ.ನಿಂಬಾಳ್ಕರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ಛಲವಾದಿ ನೇತೃತ್ವದ ತಂಡದಿಂದ ಪ್ರವಾಹ, ಬೆಳೆ ಹಾನಿ ಪರಿಶೀಲನೆ





ಮಲ್ಲಮ್ಮನುಡಿ ವಾರ್ತೆ ಯಾದಗಿರಿ: ಭಾರತೀಯ ಜನತಾ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನ ಪರಿಷತ್ತಿನ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಮಾಜಿ ಸಚಿವ ರಾಜೂಗೌಡ ಅವರು ಜಿಲ್ಲಾ ಬಿಜೆಪಿ ತಂಡದೊಂದಿಗೆ ಮಂಗಳವಾರ ಜಿಲ್ಲೆಯ ಬೆಳೆ ಹಾನಿ ಪ್ರದೇಶ ಮತ್ತು ಪ್ರವಾಹ ಪೀಡಿತ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲಿಸಿತು.

ಜೇವರ್ಗಿಯಿಂದ ಸ್ವಾದಿಪುರಕ್ಕೆ ಬಂದ ಈ ಇಬ್ಬರು ನಾಯಕರು, ಅಲ್ಲಿನ ಹಾಳಾದ ಬೆಳೆಗಳುಳ್ಳ ಹೊಲಗಳಿಗೆ ತೆರಳಿ ಹತ್ತಿ ನಾಶವಾಗಿದ್ದನ್ನು ನೋಡಿದರು. ಈ ವೇಳೆ ಸ್ಥಳದಲ್ಲಿದ್ದ ರೈತರನ್ನು ಮಾತಾಡಿಸಿದ ವಿಜಯೇಂದ್ರ ಅವರು, ಸಾಲ ಮಾಡಿ ಬಿತ್ತಿದ ಬೆಳೆ ಹೀಗೆ ಮಳೆಗೆ ಸರ್ವನಾಶವಾಗಿದೆ. ನಮ್ಮ ಪರಸ್ಥಿತಿ ದೇವರೇ ಬಲ್ಲ ಎಂಬ ನೋವಿನ ಮಾತುಗಳಿಗೆ ಸ್ಪಂದಿಸಿದ ಅವರು, ಅನ್ನದಾತರಾದ ನೀವು ಧೈರ್ಯ ಬೀಡಬೇಡಿ. ಸರ್ಕಾರದ ಒತ್ತಡ ಹಾಕಿ ಸೂಕ್ತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಬಿಜೆಪಿ ಪಕ್ಷ, ನಾವು, ನಮ್ಮ ಹಿರಿಯ ನಾಯಕರು ಶಕ್ತಿಮೀರಿ ಪ್ರಯತ್ನ ಮಾಡುವುದಾಗಿ ಹೇಳಿದರು. ಈ ವೇಳೆ ಹಾಳಾದ ಬೆಳೆ ಬಗ್ಗೆ ರೈತರಿಂದಲೇ ಮಾಹಿತಿ ಪಡೆದರು. ಈ ವೇಳೆ ಮಾತನಾಡಿದ. ಛಲವಾದಿ, ನಿಮ್ಮ ಜೊತೆ ನಾವಿದ್ದೇವೆ. ಯಾವುದಕ್ಕೂ ಅಂಜಬೇಡಿ, ಆತ್ಮಸ್ಥೈರ್ಯ ಗಟ್ಟಿ ಮಾಡಿಕೊಳ್ಳಿ ಎಂದರು.

**ನಾಯ್ಕಲ್ ಗೆ ಭೇಟಿ -- ಪ್ರವಾಹದ ಬೀತಿ ಕಂಡು ನಲುಗಿದ ಬಿಜೆಪಿ ತಂಡ.**

**ಹಸಿ ಬರಗಾಲ ಘೋಷಣೆಗೆ ವಿಜಯೇಂದ್ರ ಆಗ್ರಹ.**

ಯಾದಗಿರಿ: ಅಲ್ಲಿಂದ ನೇರವಾಗಿ ನಾಯ್ಕಲ್ ಗ್ರಾಮಕ್ಕೆ ಆಗಮಿಸಿದ ಈ ತಂಡ ಊರೊಳಗೆ ತೆರಳಿ ಪ್ರವಾಹದಿಂದ ಹಾನಿಗೀಡಾದ ಮನೆಗಳನ್ನು ಪರಿಶೀಲಿಸಿತು.

ಅಲ್ಲಿನ ಬಡವರು ಮನೆಗಳನ್ನು ಕಳೆದುಕೊಂಡಿದ್ದು ಗಮನಿಸಿದ ಅವರು ಜಿಲ್ಲಾಡಳಿತ ಕೂಡಲೇ ಪರ್ಯಾಯ ವ್ಯವಸ್ಥೆ ಮಾಡಬೇಕೆಂದರು.

ಊರಿನ ಮುಖ್ಯರಸ್ತೆಯ ಅಕ್ಕ,ಪಕ್ಕ ಇರುವ ಗದ್ದೆಗಳಿಗೆ ಇಳಿದ ವಿಜಯೇಂದ್ರ, ಛಲವಾದಿ,ರಾಜೂಗೌಡ,ಮಹೇಶರೆಡ್ಡಿ ಮುದ್ನಾಳ್ ಇತರರು ಹಾಳಾದ ಭತ್ತದ ಪೈರುಗಳನ್ನು ಪರಿಶೀಲಿಸಿದರು. ಸುತ್ತಲು ಒಮ್ಮೆ ಕಣ್ಣಾಡಿಸಿ ನೋಡಿದರು. ಆಗ ನೈಜ ಸ್ಥಿತಿ ಕಣ್ಣುಮುಂದೆ ಬಂದಾಗ ಮರುಗಿದಂತೆಯೇ ಕಂಡು ಬಂದ ಅವರೆಲ್ಲರೂ ಇಷ್ಟೇಲ್ಲ ಹಾಳಾದರೂ ರಾಜ್ಯ ಸರ್ಕಾರ ರೈತರ ನೆರವಿಗೆ ಬಾರದ ಇರುವುದಕ್ಕೆ ಕಿಡಿ ಕಾರಿದರು.

ಈ ವೇಳೆ ಮಾತನಾಡಿದ ವಿಜಯೇಂದ್ರ, ಸರ್ಕಾರ ಈ ಕೂಡಲೇ ಹಸಿ ಬರಗಾರ ಘೋಷಣೆ ಮಾಡಿ ಸೂಕ್ತ ಪರಿಹಾರ ವಿತರಿಸುವ ಮೂಲಕ ರೈತರನ್ನು ಬದುಕಿಸಬೇಕೆಂದರು.

ಅಲ್ಲಿಂದ ಬೆಂಡೆಗುಂಬಳ್ಳಿಗೆ ತೆರಳಿದ ಟೀಮ್, ಅಲ್ಲಿ ಭೀಮಾ ನದಿ ಪ್ರವಾಹದಿಂದ ಹಾಳಾದ ಬೆಳೆ, ಮನೆಗಳನ್ನು ವಿಕ್ಷೀಸಿತು. ಮುರಾರ್ಜಿ ದೇಸಾಯಿ ಶಾಲೆಯಲ್ಲಿರುವ ಶಿವಪುರದ ಗ್ರಾಮಸ್ಥರನ್ನು ಭೇಟಿ ಮಾಡಿದ ಈ ತಂಡಕ್ಕೆ ಅಲ್ಲಿನ ಜನರು ಶಿವಪುರ ಗ್ರಾಮ ಸ್ಥಳಾಂತರ ಮಾಡುವ ಕುರಿತು ಮನವಿ ಮಾಡಿದ್ದರು.

ಈ ಹಿಂದೇ ಶಾಸಕರಾಗಿದ್ದ ದಿ. ವೆಂಕಟರೆಡ್ಡಿ ಮುದ್ನಾಳ್ ಅವರ ಕಾಲದಿಂದಲ್ಲೂ ಈ ಸಮಸ್ಯೆ ಎದುರಾಗಿದ್ದು, ಈಗಲಾದರೂ ಮಾಡಿ ಎಂದು ನೋವು ತೊಂಡಿಕೊಂಡ ಗ್ರಾಮಸ್ಥರಿಗೆ ವಿಜಯೇಂದ್ರ ಮತ್ತು ಛಲವಾದಿ ಈ ಕುರಿತು ಸೂಕ್ತ ಭರವಸೆ ನೀಡಿದರು. ಜಿಲ್ಲೆಯಲ್ಲಿಯೇ ವಡಗೇರಾ ಭಾಗದ ಹಳ್ಳಿಗಳು ಪ್ರವಾಹಕ್ಕೆ ಸತತ ಮಳೆಗೆ ತುತ್ತಾಗಿ ಬೆಳೆ, ಮನೆಗಳನ್ನು ಹಾಳು ಆಗಿದ್ದರ ಕುರಿತು ರೈತರಿಂದ ಮಾಹಿತಿ ಪಡೆದರು. ಈ ವೇಳೆ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲುವಾದಿ ನಾರಾಯಣ ಸ್ವಾಮಿ,ಮಾಜಿ ಸಚಿವ ರಾಜುಗೌಡ ನಾಯಕ, ಜಿಲ್ಲಾಧ್ಯಕ್ಷ ಬಸವರಾಜ ವಿಭೂತಿಹಳ್ಳಿ,ರೈತ ಮೋರ್ಚಾ ರಾಜ್ಯಾಧ್ಯಕ್ಷ ಎ ಎಸ್ ಪಾಟೀಲ್ ನಡಹಳ್ಳಿ,ರಾಜ್ಯ ಕಾರ್ಯದರ್ಶಿ ಮತ್ತು ನಗರಸಭೆ ಅಧ್ಯಕ್ಷೆ ಕು.ಲಲಿತಾ ಅನಪುರ, ಮಾಜಿ ವಿಧಾನ ಪರಿಷತ್ ಸದಸ್ಯ ಅಮರನಾಥ ಪಾಟೀಲ್,ಮಾಜಿ ಜಿಲ್ಲಾಧ್ಯಕ್ಷ ಅಮೀನರಡ್ಡಿ ಯಾಳಗಿ,ಮಾಜಿ ಜಿಲ್ಲಾಧ್ಯಕ್ಷ ಡಾ.ಶರಣಭೂಪಾಲರಡ್ಡಿ, ಹಿರಿಯ ಮುಖಂಡ ರಾಚಣ್ಣಗೌಡ ಮುದ್ನಾಳ,ಯುವ ಮುಖಂಡ ಮಹೇಶರಡ್ಡಿ ಮುದ್ನಾಳ, ನಾಗರತ್ನ ಕುಪ್ಪಿ,ಚಂದ್ರಶೇಖರಗೌಡ ಮಾಗನೂರ,ದೇವಿಂದ್ರನಾಥ ನಾದ,ದೇವರಾಜ ನಾಯಕ ಉಳ್ಳೆಸೂಗುರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗುರು ಕಾಮ ಮತ್ತು ಪರುಶುರಾಮ ಕುರಕುಂದಿ ಹಾಗೂ ಮೆಲಪ್ಪ ಗುಳಗಿ, ಜಿಲ್ಲಾ ವಕ್ತಾರ ಹಣಮಂತ ಇಟಗಿ, ಸಿದ್ದಣ್ಣಗೌಡ ಕಾಡಂನೋರ,ಜಿಲ್ಲಾ ಉಪಾಧ್ಯಕ್ಷ ಬಸವರಾಜ ಸೊನ್ನದ ಮತ್ತು ಅಡಿವೆಪ್ಪ ಜಾಕ, ಯುವ ಮೋರ್ಚಾ ಜಿಲ್ಲಾಧ್ಯಕ್ಷ ಶ್ರೀಧರ ಆರ್ ಸಾಹುಕಾರ,ರಾಜುಗೌಡ ಉಕ್ಕನಾಳ, ವೆಂಕಟರೆಡ್ಡಿ ಅಬ್ಬೆತೂಮಕುರ,ರಾಜಶೇಖರ್ ಕಾಡಂನೊರ,ಚಂದ್ರಶೇಖರ ಯಾಳಗಿ, ತಿರುಪತಿ ಹತ್ತಿಕಟ್ಟಿಗಿ,ಪರ್ವತರಡ್ಡಿಗೌಡ ಮಲ್ಹಾರ ಬೆಂಡಗೊಂಬಳ್ಳಿ,ಯಂಕಣ್ಣ ನಾಯಕ,ಗೋವಿಂದಪ್ಪ ಖಾನಾಪುರ,ಜಿಲ್ಲಾ ಮಾಧ್ಯಮ ಸಂಚಾಲಕ ವಿರುಪಾಕ್ಷಯ್ಯ ಸ್ವಾಮಿ ಹೆಡಗಿಮದ್ರಾ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

**ಸುದ್ದಿಗೋಷ್ಠಿ**

**ಪ್ರತಿ ಎಕರೆಗೆ 25 ರಿಂದ 30 ಸಾವಿರ ರೂ. ಪರಿಹಾರಕ್ಕೆ ವಿಜಯೇಂದ್ರ ಆಗ್ರಹ.**

ಶಹಾಪುರ: ಜಿಲ್ಲೆಯ ಸುರಿದ ಸತತ ಮಳೆಯಿಂದ ಮತ್ತು ಪ್ರವಾಹದಿಂದ ಹಾನಿಯಾದ ಬೆಳೆಗಳಿಗೆ ಪ್ರತಿ ಎಕ-ರೆಗೆ 25 ರಿಂದ 30 ಸಾವಿರ ರೂ. ಪರಿಹಾರ ಕೂಡಲೇ ನೀಡಬೇಕೆಂದು ಬಿಜೆಪಿ ರಾಜ್ಯಧ್ಯಕ್ಷ ಬಿ.ವೈ.ವಿಜಯೇಂದ್ರ ಆಗ್ರಹಿಸಿದರು.

ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಅಮೀನ್ ರೆಡ್ಡಿ ಯಾಳಗಿ ಅವರ ಮನೆಯಲ್ಲಿ ಮಂಗಳವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕಳೆದ ಎರಡು ತಿಂಗಳಿಂದ ಸತತ ಮಳೆಯಾಗಿ ಮತ್ತು ಮಹಾರಾಷ್ಟದಿಂದ ಭೀಮಾನದಿಗೆ ಹರಿದು ಬಂದ ನೀರಿನಿಂದಾಗಿ ಉಂಟಾದ ಪ್ರವಾಹದಿಂದ ಜಿಲ್ಲೆಯ ರೈತರ ಶೇ.70 ರಷ್ಟು ಬೆಳೆಗಳು ಹಾಳಾಗಿವೆ. ಆದರೂ ರಾಜ್ಯ ಸರ್ಕಾರ ಕೂಡಲೇ ಪರಿಹಾರ ನೀಡುವ ನಿಟ್ಟಿನಲ್ಲಿ ಗಮನ ಹರಿಸದೇ ಸಭೆ, ವೈಮಾನಿಕ ಸಮೀಕ್ಷೆ ಅಂತಾ ಕಾಲ ಹರಣ ಮಾಡುತ್ತಿದೆ ಎಂದು ದೂರಿದರು.

ಇಷ್ಟೇಲ್ಲಾ ಅನಾಹುತವಾಗಿ ರೈತರು ಸಾಯುವ ಸ್ಥಿತಿಗೆ ಬಂದರೂ ಕಂದಾಯ,ಕೃಷಿ ಸಚಿವರು ಜಿಲ್ಲೆಯತ್ತ ಮುಖ ಮಾಡದೇ ಎಲ್ಲಿ ಮಾಯವಾಗಿದ್ದಾರೆಂದು ಗರಂ ಆಗಿಯೇ ಪ್ರಶ್ನಿಸಿದರು.

ಹಿಂದೆ ಈ ರೀತಿಯೇ ತೆ-ಊಂದರೆಯಾದಾಗ ಆಗಿನ ಸಿಎಂ ಯಡಿಯೂರಪ್ಪ ಅವರು ಸಂಪುಟ ರಚನೆಯಾಗದಿದ್ದರೂ ಪಕ್ಷದ ಮುಖಂಡ, ಶಾಸಕರೊಂದಿಗೆ ಬೆಳಗಾವಿ, ಸುರಪುರ ಸೇರಿದಂತೆ-ಯೇ ಎಲ್ಲಡೆ ಭೇಟಿ ತಕ್ಷಣವೇ ಪರಿಹಾರ ಘೋಷಿಸಿ ರೈತರಿಗೆ ಮುಟ್ಟುವಂತೆಯೇ ಮಾಡಿದ್ದರು. ಆದರೇ ಸಿಎಂ ಸಿದ್ದರಾಮಯ್ಯ ಅವರು ಈ ನಿಟ್ಟಿನಲ್ಲಿ ದಿಟ್ಟ ನಿರ್ಧಾರ ತೆಗೆದುಕೊಂಡು ರೈತರಿಗೆ ಪರಿಹಾರ ಘೋಷಿಸಲು ಇನ್ನೂ ಮುಂದಾಗದೇ ಇರುವುದನ್ನು ನೋಡಿದರೇ ಈ ಸರ್ಕಾರಕ್ಕೆ ರೈತರ ಬಗ್ಗೆ ಕಾಳಜಿ ಇಲ್ಲ ಎಂದು ವಿಜಯೇಂದ್ರ ಗಂಭೀರವಾಗಿ ಆರೋಪಿಸಿದರು.

ಮೊದಲು ತನ್ನ ಕೆಲಸ ತಾನು ಮಾಡಿ ಪರಿಹಾರ ನೀಡುವ ಕೆಲಸ ಮಾಡುವುದು ಬಿಟ್ಟು ಹಾನಿಯಾದ ಬಗ್ಗೆ ಪರಿಹಾರ ಕೋರಿ ಕೇಂದ್ರಕ್ಕೆ ಪತ್ರ ಬರೆಯುವುದಾಗಿ ಸಿಎಂ ಅವರು ಹೇಳಿದ್ದನ್ನು ಗಮನಿಸಿದರೇ ಕಾಲ ಹರಣ ಮಾಡಲು ಮುಂದಾಗಿದ್ದಾರೆ ಎಂದು ಅನಿಸುತ್ತದೆ ಎಂದ ಅವರು, ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಏನು ಮಾಡಬೇಕು ಅದು ಮಾಡುತ್ತದೆ, ನಾವು ಈ ಬಗ್ಗೆ ಮಾಹಿತಿ ನೀಡಿ ಪರಸ್ಥಿತಿ ತಿಳಿಸುತ್ತವೆ ಎಂದರು.

ಕಲ್ಯಾಣ ಕರ್ನಾಟಕದಲ್ಲಿ ಆದ ಬೆಳೆ ಹಾನಿ ಪರಿಹಾರಕ್ಕೆ ರಾಜ್ಯ ಸರ್ಕಾರ ಕೆಕೆ ಭಾಗಕ್ಕೆ ವಿಶೇಷ ಪ್ಯಾಕೇಜ್ ಘೋಷಣೆ ಮಾಡಬೇಕೆಂದು ವಿಜಯೇಂದ್ರ ಆಗ್ರಹಿಸಿದರು. ಈ ವೇಳೆ ....... ಇದ್ದರು.

**ಮೊದಲು ಚಿತ್ತಾಪುರ ರೈತರ ಗೋಳಿಗೆ ಸಚಿವ ಪ್ರಿಯಾಂಕ್ ಸ್ಪಂದಿಸಲಿ: ವಿಜಯೇಂದ್ರ ಚಾಟಿ**

ಮೊದಲು ತಮ್ಮ ಮತಕ್ಷೇತ್ರ ಚಿತ್ತಾಪುರದಲ್ಲಿ ಹಾಳಾದ ಬೆಳೆಗಳ ವೀಕ್ಷಣೆ ಮಾಡಿ ರೈತರಿಗೆ ಪರಿಹಾರ ನೀಡುವ ಕೆಲಸ ಸಚಿವ ಪ್ರಿಯಾಂಕ್ ಖರ್ಗೆ ಮಾಡಲಿ, ನಂತರ ಪ್ರಧಾನಿ ಮೋದಿ ಮತ್ತು ಕೇಂದ್ರ ಸರ್ಕಾರದ ಕೆಲಸ ಕುರಿತು ಮಾತಾಡಲಿ ಎಂದು ಪ್ರಶ್ನೆಯೊಂದಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಚಾಟಿ ಬೀಸಿದರು.

ಎಲ್ಲ ಖಾತೆಗಳ ಸಚಿವರಂತೆ ವರ್ತಿಸುವ ಕೆಲಸ ಬಿಟ್ಟು ತೊಂದರೆಯಲ್ಲಿರುವ ರೈತರ ಕಣ್ಣಿರು ಒರೆಸಲಿ, ಅದರಲ್ಲೂ ಚಿತ್ತಾಪುರ ಮತಕ್ಷೇತ್ರದ ಜನರ ಗೋಳು ಕೇಳಲು ಹಳ್ಳಿಗಳಿಗೇ ಭೇಟಿ ನೀಡಲಿ ಎಂದು ಟಾಂಗ್ ಕೊಟ್ಟರು.

# 2025ರ "ಈ ವರ್ಷದ ವಿಶೇಷ ವ್ಯಕ್ತಿ" ಪ್ರಶಸ್ತಿಗೆ ಸಂಗಣ್ಣ ಸಾಹುಕಾರ ತುಂಬಿಗಿ



ಮಲ್ಲಮ್ಮನುಡಿ ವಾರ್ತೆ ಕೆಂಭಾವಿ, ಕೆಂಭಾವಿ ಪಟ್ಟಣದಲ್ಲಿ ಅದ್ದೂ-ರಿಯಾಗಿ ಜರುಗಿದ ದಸರಾ ಉತ್ಸವದ ಸಂದರ್ಭದಲ್ಲಿ, ಸಮಾಜ ಸೇವೆಯಲ್ಲಿ ಅಮೂಲ್ಯ ಕೊಡುಗೆ ನೀಡಿದ ಶ್ರೀ ಸಂಗಣ್ಣಸಾಹುಕಾರ್ ತುಂಬಗಿಯವರು ಅವರಿಗೆ 2025ನೇ ಸಾಲಿನ "ಈ ವರ್ಷದ ವಿಶೇಷ ವ್ಯಕ್ತಿ" ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಈ ಪ್ರಶಸ್ತಿ ಕೆಂಭಾವಿ ದಸರಾ ಉತ್ಸವ ಸಮಿತಿ ವತಿಯಿಂದ, ಮಠದ ಪೀಠಾಧಿಪತಿಗಳ ಸಾನ್ನಿಧ್ಯದಲ್ಲಿ, ಸಾರ್ವಜನಿಕರ ಸಮ್ಮುಖದಲ್ಲಿ ಶ್ರದ್ಧಾಪೂರ್ವಕವಾಗಿ ಪ್ರದಾನಿಸಲಾಯಿತು.

ಸಮಾಜ ಸೇವೆಯ ವೈಭವ ಸಂಗಣ್ಣ ಸೌಕಾರ್ ಅವರ ಸಾಧನೆ

ಶ್ರೀ ಸಂಗಣ್ಣ ಸಾಹುಕಾರ್ ತುಂಬಗಿಯವರು ತಮ್ಮ ಜೀವನದ ಬಹುಪಾಲು ಸಮಯವನ್ನು ಬಡವರ ಸೇವೆ, ಶಿಕ್ಷಣದ ಪ್ರೋತ್ಸಾಹ, ಆರ್ಥಿಕ ಸಹಾಯ, ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು, ನಿಷ್ಕಾಮ ಸೇವೆಯ ದ್ವಾರಾ ನೂರಾರು ಕುಟುಂಬಗಳಿಗೆ ಬೆಳಕಾದವರು. ಅವರ ಸೇವಾಭಾವನೆಗೆ ಸಮ್ಮಾನವಾಗಿ ಈ ಪ್ರಶಸ್ತಿಯನ್ನು ನೀಡಲಾಗಿದೆ.

ಮಠದ ಶ್ರೀಗಳು ತಮ್ಮ ಆಶೀರ್ವಚನದಲ್ಲಿ ಹೇಳಿದರು:

"ಈ ಪ್ರಶಸ್ತಿ ಕೇವಲ ಒಬ್ಬ ವ್ಯಕ್ತಿಗೆ ನೀಡಿದ ಗೌರವವಲ್ಲ; ಇದು ಸಮಾಜಮುಖಿ ಚಿಂತನೆಯ ಗೌರವ. ಸಂಗಣ್ಣ ಸೌಕಾರ್ ಅವರು ಈ ತಲೆಮಾರಿಗೆ ಪ್ರೇರಣೆಯ ಪ್ರತಿರೂಪ."

ಉತ್ಸವ ಸಮಿತಿಯ ಅಧ್ಯಕ್ಷರು ಹೇಳಿದರು:

"ಈ ವರ್ಷದ ವಿಶೇಷ ವ್ಯಕ್ತಿ ಪ್ರಶಸ್ತಿಯು ಅವರ ಸೇವೆಯ ವೈಶಿಷ್ಟತೆ ಮತ್ತು ನಿಷ್ಠೆಯನ್ನು ಗುರುತಿಸುತ್ತದೆ. ಅವರ ಆದರ್ಶ ಬದುಕು, ನಿಜಕ್ಕೂ ಎಲ್ಲರಿಗೂ ಮಾದರಿ."

ಕಾರ್ಯಕ್ರಮದ ವೈಶಿಷ್ಟತೆಗಳು:

ಸಂಗೀತ ಮತ್ತು ನೃತ್ಯ ಕಾರ್ಯಕ್ರಮಗಳೊಂದಿಗೆ ದಸರಾ ಉತ್ಸವಕ್ಕೆ ಸಾಂಸ್ಕೃತಿಕ ಛಾಯೆ.

ಬಹುಮಾನ ಪ್ರದಾನ ಸಮಾರಂಭದಲ್ಲಿ ಸಾರ್ವಜನಿಕರ ಭಾರಿ ಹಾಜರಾತಿ.

ಸ್ಮರಣಿಕೆಯೊಂದಿಗೆ ಫಲಕ ಪ್ರದಾನ.

ಈ ಸನ್ಮಾನದ ಮೂಲಕ, ಶ್ರೀ ಸಂಗಣ್ಣಸಾಹುಕಾರ್ ತುಂಬಗಿಯವರು ಮಾತ್ರವಲ್ಲದೆ, ಸಮಾಜ ಸೇವೆ ಮಾಡುತ್ತಿರುವ ಅನೇಕರಿಗೂ ಒಂದು ಪ್ರೇರಣೆಯ ಬೆಳಕು.

# ಯಾದಗಿರಿ ಬೆಟ್ಟದ ದೇವಿಗೆ ವಿಶೇಷ ಪೂಜೆ.

ಮಲ್ಲಮ್ಮನುಡಿ ವಾರ್ತೆ ಯಾದಗಿರಿ : ದಸರಾ ಹಬ್ಬ ಮತ್ತು ನವರಾತ್ರಿ ಉತ್ಸವ ಮನುಷ್ಯನ ಮನದ ಕತ್ತಲೆ ಕಳೆದು ಶುದ್ದಿ ಮಾಡುವ ಸಂಕೇತವೆಂದು ಶಾಸಕ ಶರಣಗೌಡ ಕಂದಕೂರು ಹೇಳಿದರು. ಇಲ್ಲಿನ ಬೆಟ್ಟದ ಭುವನೇಶ್ವರಿ ಮಂದಿರ ಟ್ರಸ್ಟ್ ಆಯೋಜಿಸಿದ್ದ 44 ನೇ ವರ್ಷದ ದಸರಾ ಉತ್ಸವ ಮತ್ತು ಶತಚಂಡಿ ಹೋಮಯಜ್ಞ ದರ್ಶನ ಹಾಗೂ ಮಹಾಪ್ರಸಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಪೂಜೆ ನೆರವೇರಿಸಿ ಮಾತನಾಡಿದ ಅವರು. ಒಂಬತ್ತು ದಿನಗಳ ದೇವಿ ಆರಾಧನೆಯಿಂದ ಪ್ರತಿಯೊಬ್ಬರ ಬದುಕು ಹೊಸದಿಕ್ಕಿನಡೆಗೆ ಹೊಗುತ್ತದೆ ಎಂದರು.ಶಿಷ್ಟರನ್ನು ರಕ್ಷಿಸಿ,

ದುಷ್ಟರನ್ನು ಸಂಹರಿಸುವ ದೇವಿ ಜಗನ್ಮಾತೆಯನ್ನು ಎಲ್ಲರೂ ಭಕ್ತಿಯಿಂದ ಆರಾಧಿಸುವ ಮೂಲಕ

ಜೀವನದಲ್ಲಿ ಸರಿದಾರಿಯಲ್ಲಿ ನಡೆಯೊಣ ಎಂದರು.

ಗುಡ್ಡದ ಮೇಲೆ 44 ವರ್ಷಗಳಿಂದ ಆಚರಿಸಿಕೊಂಡು ಬರಲಾಗುತ್ತಿರುವ ದಸರಾ ಮಹೋತ್ಸವದಿಂದ ಈ ಸ್ಥಳ ಪುಣ್ಯದ ಜಾಗವಾಗಿದೆ ಎಂದು ಶಾಸಕರು ಹೇಳಿದರು. ಸೇರಿದ ಭಕ್ತರೊಂದಿಗೆ ಸಾಮೂಹಿಕ ಪ್ರಸಾದ ಸ್ವೀಕರಿದರು.

ಟ್ರಸ್ಟ್‌ನ ಪೂಜಾರಿಗಳಾದ ಶಿವರಾಮ ಕಟ್ಟಿಮನಿ, ಶರಣಬಸವ ಕಟ್ಟಮನಿ ಮಂಗಳಾರುತಿ ನೇರವೇರಿಸಿದರು.

ಈ ವೇಳೆ ಜೆಡಿಎಸ್ ಜಿಲ್ಲಾಧ್ಯಕ್ಷ ಸುಭಾಶ್ಚಂದ್ರ ಕಟಕಟಿ, ಮಲ್ಲನಗೌಡ ಹಳಿಮನಿ, ಅಜಯರೆಡ್ಡಿ ಎಲ್ಹೇರಿ, ವಿಕಾಸ್ ಸಿಂದೆ, ಲಕ್ಷ್ಮಣ ಕೂಡ್ಲೂರ್, ಬಾಲು ದಾಸರಿ, ರಜನಿಕಾಂತ್ ಕಟ್ಟಾ, ತಾಯಪ್ಪ ನಾಗಲಾಪೂರ್, ಮಲ್ಲುಗೌಡ ಹೊಸಳ್ಳಿ, ರಾಜೇಶೆಟ್ಟಿ, ಸಾಗರ್ ಸೈದಾಪೂರ್, ಆನಂದರಡ್ಡಿ ವಡವಟ್, ಗುರುನಾಥ ತಲಾರಿ, ಸಿದ್ದಲಿಂಗರೆಡ್ಡಿ ಅರಕೇರಾ ಬಿ, ಸೇರಿದಂತೆ ಇತರರು ಇದ್ದರು.

# ಬೀದರ ಜಿಲ್ಲಾ ಬಿಜೆಪಿ ಅಧ್ಯಕ್ಷರಾಗಿ ಸೋಮನಾಥ ಪಾಟೀಲ ಹುಡಗಿ ನಿಯುಕ್ತಿ




ಮಲ್ಲಮ್ಮ ನುಡಿ ವಾರ್ತೆ

ಬೀದರ. ಅ. 02 : ಬೀದರ ಜಿಲ್ಲಾ ಭಾರತೀಯ ಜನತಾ ಪಾರ್ಟಿಯ ಅಧ್ಯಕ್ಷರಾಗಿ ಸೋಮನಾಥ ಪಾಟೀಲ ಹುಡಗಿ ಅವರನ್ನು ನಿಯೋಕ್ತಿ ಮಾಡಲಾಗಿದೆ. ಬೆಂಗಳೂರಿನ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ದಿನಾಂಕ 18-06-2025 ರಂದು ಪಕ್ಷದ ನೂತನ ಜಿಲ್ಲಾಧ್ಯಕ್ಷರ ಅಭಿನಂದನಾ ಸಮಾರಂಭದಲ್ಲಿ ರಾಜ್ಯಾಧ್ಯಕ್ಷ ಹಾಗೂ ಶಾಸಕರಾದ ಬಿ.ವೈ ವಿಜಯೇಂದ್ರ ಅವರು ಸೋಮನಾಥ ಪಾಟೀಲ ಹುಡಗಿ ಇವರಿಗೆ ಬೀದರ ಜಿಲ್ಲಾ ಬಿಜೆಪಿ ಅಧ್ಯಕ್ಷರ ನೇಮಕಾತಿ ಪತ್ರವನ್ನು ನೀಡಿದರು. 3 ವರ್ಷ ಕಾಲ ಅವಧಿಗೆ ಜಿಲ್ಲಾಧ್ಯಕ್ಷರಾಗಿ ಸೋಮನಾಥಪಾಟೀಲ ಅವರು ನೇಮಕ ಗೊಂಡಿದ್ದಾರೆ. ದಿನಾಂಕ 18-06-2025 ರಂದು ಬೆಂಗಳೂರಿನ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ನೂತನ ಪಕ್ಷದ ಜಿಲ್ಲಾಧ್ಯಕ್ಷರ ಅಭಿನಂದನಾ ಸಮಾರಂಭದಲ್ಲಿ ವಿಧಾನ ಪರಿಷತ್ ವಿಪಕ್ಷನಾಯಕ ಛಲವಾದಿ ನಾರಾಯಣ ಸ್ವಾಮಿ, ಮಾಜಿ ಸಚಿವ ಸಿ.ಟಿ.ರವಿ. ರಾಜ್ಯ ಪ್ರಧಾನಕಾರ್ಯದರ್ಶಿಗಳಾದ ಟಿ.ರಾಜು. ನಂದೀಶ್ ರೆಡ್ಡಿ, ಪ್ರೀತಮ್ ಗೌಡ, ಪಕ್ಷದ ಚುನಾವಣಾ ಸಂಚಾಲಕ ಕ್ಯಾಪ್ಟನ್ ಗಣೇಶ ಕಾರ್ಣಿಕ್ ರಾಜ್ಯ ಪದಾಧಿಕಾರಿಗಳು ಸೇರಿದಂತೆ ಅನೇಕ ಬಿಜೆಪಿ ಮುಖಂಡರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು ಎಂದು ಬೀದರ ಜಿಲ್ಲಾ ಭಾರತೀಯ ಜನತಾ ಪಾರ್ಟಿಯ ಮಾಧ್ಯಮ ಪ್ರಕೋಷ್ಠದ ಸಂಚಾಲಕರಾದ ಶ್ರೀನಿವಾಸ ಚೌದರಿಯವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಸವ ಸಂಸ್ಕೃತಿ ಅಭಿಯಾನದಲ್ಲಿ ಭಾಗವಹಿಸಿ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಅ.2: ಬಸವ ಸಂಸ್ಕೃತಿ ಅಭಿಯಾನದಲ್ಲಿ ಪಾಲ್ಗೊಳ್ಳಲು ಬಸವ ಭಕ್ತರಿಗೆ ವಿಶೇಷ ರೈಲು ಸೇವೆ ಒದಗಿಸಿದ ಸಂಸದ ಸಾಗರ ಖಂಡ್ರೆ ಅವರನ್ನು ಬಸವ ಭಕ್ತರು ಸನ್ಮಾನಿಸಿ, ಕೃತಜ್ಞತೆ ಸಲ್ಲಿಸಿದರು.

ಪಟ್ಟಣದ ಸಂಸದ ಸಾಗರ ಖಂಡ್ರೆ ನಿವಾಸಕ್ಕೆ ಬುಧವಾರ ಬಸವ ಭಕ್ತರು ಭೇಟಿ ನೀಡಿ ಸಾಗರ ಖಂಡ್ರೆ ಅವರನ್ನು ಸನ್ಮಾನಿಸಿ, ಬೆಂಗಳೂರಿನ ಅರಮನೆ ಮೈದಾನದಲ್ಲಿ ಅ.5 ರಂದು ನಡೆಯುವ ಬಸವ ಸಂಸ್ಕೃತಿ ಅಭಿಯಾನದಲ್ಲಿ ಪಾಲ್ಗೊಳ್ಳುವ ಜಿಲ್ಲೆಯ ಬಸವ ಭಕ್ತರಿಗಾಗಿ ಸಂಸದ ಸಾಗರ ಖಂಡ್ರೆ ಅವರು ವಿಶೇಷ ರೈಲು ಸೌಲಭ್ಯ ಒದಗಿಸಿರುವುದು ಸಂತಸ ತರಿಸಿದೆ.

ಅ.4 ರಂದು ಮಧ್ಯಾಹ್ನ 2 ಗಂ-ಟೆಗೆ ಬೀದರ್ ನಿಂದ ಈ ವಿಶೇಷ ರೈಲು ಬೆಂಗಳೂರಿಗೆ ತೆರಳುತ್ತಿದ್ದು ಜಿಲ್ಲೆಯ ಬಸವ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮಾಡಿದರು.

ಈ ಸಂದರ್ಭದಲ್ಲಿ ಭಾತಂಬ್ರಾ ಗ್ರಾಪಂ ಅಧ್ಯಕ್ಷ ಮಹಾಂತೇಶ ಪಾಟೀಲ್, ಮಾಜಿ ಉಪಾಧ್ಯಕ್ಷ ಮಹಾದೇವ ಬೇಲೂರೆ, ಪ್ರಮುಖರಾದ ಶಂಕರ ಭೋರಾಳೆ, ರವೀಂದ್ರ ಚಿಡಗುಪ್ಪೆ, ಬಾಬುರಾವ ಭೋರಾಳೆ, ಓಂಕಾರ ರಾಮಶೆಟ್ಟಿ, ಕಾಶಿನಾಥ ಲದ್ದೆ, ಅನಿಲಕುಮಾರ ದಾಡಗೆ, ನಾಗನ್ನಾಥ ಗಾಮಾ, ಬಾಬುರಾವ ಬೇಲೂರೆ, ಶಾಂತವೀರ ನಳಗಾಂವೆ, ಸನ್ಮುಖಯ್ಯ ಸ್ವಾಮಿ, ಮುತ್ತುರಾಜ ಚಿಡಗುಪ್ಪೆ ಸೇರಿದಂತೆ ಹಲವರು ಇದ್ದರು.

# ಸಂಗೀತ ದಸರಾ । ರೇಖಾ ಸೌದಿ ಅವರಿಂದ ಭಕ್ತಿ ಸಂಗೀತ ಮೈಸೂರು ಅರಮನೆ ವೇದಿಕೆಯಲ್ಲಿ ಭಕ್ತಿ ಸಂಗೀತ ಸುಧೆ



ಬೀದರ. ಅ. 02 : ಬೀದರ್ ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಅರಮನೆ ಆವರಣದಲ್ಲಿ ಸಾಂಸ್ಕೃತಿಕ ವೇದಿಕೆಯಲ್ಲಿ ನಡೆದ ಸಂಗೀತ ಕಾರ್ಯಕ್ರಮದಲ್ಲಿ ಬೀದರ್‌ನ ಖ್ಯಾತ ಗಾಯಕಿ, ಬಿದರಿ ಸಾಂಸ್ಕೃತಿಕ ವೇದಿಕೆಯ ಅಧ್ಯಕ್ಷೆ ರೇಖಾ ಸೌದಿ ಅವರು ಭಕ್ತಿ ಸಂಗೀತ ಕಾರ್ಯಕ್ರಮ ಪ್ರಸ್ತುತಪಡಿಸಿದರು.

ಸಾವಿರದ ಶರಣು, ಹಾಲಲ್ಲಾದರೂ ಹಾಕು, ಎಂಥ ಶ್ರೀಮಂಥನಂತಾನೋ, ಮಾನವ ಮೂಳೆ ಮಾಂಸದ ತಡಿಕೆ, ಶಂಭೋ ಸ್ವಯಂಭೋ ಸಂಭವ, ತೋರಾ ಮನ್ ದರ್ಪಣ್ ಕಹಲಾಯ-ಪತಾ ನಹಿ ಕಿಸ್ ರೂಪ್ ಮೇ ಆ ಕರ್, ಎಲ್ಲಿ ಕಾಣೆ, ಎಲ್ಲಿ ಕಾಣೆ... ಗೀತೆಗಳನ್ನು ಹಾಡಿದರು. ರೇಖಾ ಸೌದಿ ಅವರೊಟ್ಟಿಗೆ ಲಕ್ಷ್ಮಿ ಸೌದಿ, ಮಧುಶ್ರೀ, ವೈಷ್ಣವಿ ಕೊಪ್ಪ ಸಹಗಾಯಕರಾಗಿ, ಮಧುಸೂಧನ್ ಕೊಪ್ಪ- ತಬಲ, ವಸಂತ ಕುಂಬೈ- ಕೀಬೋರ್ಡ್, ಪೂರ್ಣಪ್ರಸಾದ- ಬುಲ್ ಬುಲ್ ತರಂಗ ಹಾಗೂ ಗುರುದತ್ತ - ರಿಥಂ ಪ್ಯಾಡ್ ಸಾಥ್ ನೀಡಿದರು.

ಬೀದರ್ ಜಿಲ್ಲಾ ಉಸ್ತುವಾರಿ ಮಂತ್ರಿಗಳೂ ಆದ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ವೇದಿಕೆಯಲ್ಲಿ ಗಾಯಕಿ ರೇಖಾ ಸೌದಿ ಹಾಗೂ ತಂಡದವರಿಗೆ ಸನ್ಮಾನಿಸಿ ಮಾತನಾಡಿ, ಮೈಸೂರು ದಸರಾ ವೇದಿಕೆಯಲ್ಲಿ ಭಕ್ತಿಗೀತೆಗಳನ್ನು

ಪ್ರಸ್ತುತಪಡಿಸಿದ ರೇಖಾ ಸೌದಿ ಅವರ ತಂಡ ಈಗಾಗಲೇ ರಾಜ್ಯ ಹಾಗೂ ಹೊರರಾಜ್ಯದಲ್ಲಿ ಹಲವಾರು ಸಂಗೀತ ಕಾರ್ಯಕ್ರಮಗಳನ್ನು ನೀಡುವ ಮೂಲಕ ಜಿಲ್ಲೆಗೆ ಹೆಮ್ಮೆ ಎನಿಸಿಕೊಂಡಿದ್ದಾರೆ. ಬೀದರ್ ಉತ್ಸವ ಹಾಗೂ ಬಸವ ಉತ್ಸವ ಕಾರ್ಯಕ್ರಮಗಳನ್ನೂ ದಸರಾ ಮಾದರಿಯಲ್ಲಿಯೇ ಸರ್ಕಾರ ಆಯೋಜಿಸುತ್ತಬಂದಿದೆ ಎಂದರು.

ಈ ಸಂದರ್ಭದಲ್ಲಿ ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್ ಸುಬ್ರಹ್ಮಣ್ಯ, ಸಾಂಸ್ಕೃತಿಕ ಉಪ ಸಮಿತಿ ಅಧ್ಯಕ್ಷ ಕೆ.ವಿ. ಮಲ್ಲೇಶ, ಕ್ಯಾತನಹಳ್ಳಿ ಎಚ್. ಪ್ರಕಾಶ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ. ವಿಜಯಕುಮಾರ, ವಕೀಲ ಶಿವಪ್ರಸಾದ್ ಮತ್ತಿತರರು ಇದ್ದರು.

# ಅತಿವೃಷ್ಟಿಗೆ ಅಪಾರ ಹಾನಿ ತುರ್ತು ಪರಿಹಾರಕ್ಕೆ ಎಂಎಲ್ಸಿ ಎಂ. ಜಿ. ಮುಳೆ ಒತ್ತಾಯ



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ : ಅ 2 – ಕಳೆದ ಸುಮಾರು ಎರಡು ವಾರಗಳ ದಿನಗಳ ಕಾಲ ಎಡೆ ಬಿಡದೆ ಹಗಲು ರಾತ್ರಿ ಎನ್ನದೆ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ಬೆಳೆ ಕಳೆದುಕೊಂಡ ರೈತರು ಸಂಕಷ್ಟಕ್ಕೆ ಸಿಲುಕಿದ ರೈತರಿಗೆ ತಕ್ಷಣ ಬೆಳೆ ಪರಿಹಾರ ಕೊಡಬೇಕು ಎಂದು ವಿಧಾನ ಪರಿಷತ್ ಸದಸ್ಯರಾದ ಎಂ. ಜಿ. ಮುಳೆ ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ. ಅತಿವೃಷ್ಟಿಯಿಂದ ಬೀದರ ಜಿಲ್ಲೆಯ ರೈತರ ಮಳೆಯಿಂದ ಬೆಳೆ ಹಾನಿಯಾಗಿದೆ ಕೆಲವೆಡೆ ಪ್ರವಾಹದಿಂದಾಗಿ ರೈತರ ಜಮೀನಿನಲ್ಲಿಯ ಫಲವತ್ತಾದ ಮಣ್ಣು ಸಹಿತ ಬೆಳೆಗಳು ಕೊಚ್ಚಿಕೊಂಡು ಹೋಗಿವೆ ಕೆಲವು ಗ್ರಾಮಗಳಲ್ಲಿ ಮನೆಗಳು ನೆಲಸಮಗೊಂಡಿದ್ದು. ಪ್ರವಾಹಕ್ಕೆ

ಸಿಲುಕಿ ಧನ ಕರುಗಳು ಪ್ರಾಣ ಕಳೆದುಕೊಂಡಿವೆ ಎಂದು ತಿಳಿಸಿದರು. ಬೆಳೆ ಕಳೆದುಕೊಂಡ ರೈತರಿಗೆ ಸೂಕ್ತ ಪರಿಹಾರ ಕಲ್ಪಿಸಬೇಕು ಅದೆರಿತಿ ಮಳೆಯಿಂದ ಕುಸಿತ ಗೊಂಡ ಗೋಡೆಗಳ ದುರಸ್ತಿಗೆ ಹಾಗೂ ಮರು ನಿರ್ಮಾಣಕ್ಕೆ ನೆರವು ಕಲ್ಪಿಸಬೇಕು. ಧನ ಕರುಗಳು ಕಳೆದ ಕೊಂಡ ರೈತರಿಗೆ ಪರಿಹಾರ ನೀಡಬೇಕು ಎಂದು ಮುಖ್ಯಮಂತ್ರಿಗಳಿಗೆ ಎಂ. ಜಿ. ಮುಳೆ ಮನವಿ ಮೂಲಕ ಒತ್ತಾಯಿಸಿದ್ದಾರೆ.

# ಸಂಭ್ರಮದ ಚನ್ನವೀರ ಶಿವಾಚಾರ್ಯರ ಪಲ್ಲಕ್ಕಿ ಉತ್ಸವ ಅ. 4ರಂದು
# ಜಾತ್ರಾ, ಅಮೃತ ಮಹೋತ್ಸವದ ಭಿತ್ತಿಪತ್ರ ಬಿಡುಗಡೆ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್: ಅ.2:ನಗರದ ಮಾಜಿ ಸಚಿವರ ಗೃಹ ಕಚೇರಿಯಲ್ಲಿ ಗುರುವಾರ ಯರಬಾಗ ಗ್ರಾಮದಲ್ಲಿ ಅ. 4ರಂದು ನಡೆಯಲಿರುವ ಸದ್ಗುರು ಚನ್ನವೀರ ಶಿವಾಚಾರ್ಯರ ಪಲ್ಲಕ್ಕಿ ಉತ್ಸವ, ರಥೋತ್ಸವ ಹಾಗೂ ಜಾತ್ರಾ ಮಹೋತ್ಸವದ ಭಿತ್ತಿಪತ್ರ ಮಾಜಿ ಸಚಿವ ರಾಜಶೇಖರ ಪಾಟೀಲ್ ಬಿಡುಗಡೆ ಮಾಡಿದರು.

ಉತ್ಸವ ಸಮಿತಿ ಪದಾಧಿಕಾರಿಗಳು ಮಾತನಾಡಿ, ಚನ್ನವೀರ ಶಿವಾಚಾರ್ಯರ ಜಾತ್ರಾ ಮಹೋತ್ಸವ ನಿಮಿತ್ತ ದೇವಸ್ಥಾನದಲ್ಲಿ ಅ. 03ರಂದು ಬೆಳಗ್ಗೆ 8 ಗಂಟೆಗೆ ಚನ್ನವೀರ ಶಿವಾಚಾರ್ಯರ ಗದ್ದುಗೆಗೆ ರುದ್ರಾಭಿಷೇಕ ಹಾಗೂ ಸಹಸ್ರ ಬಿಲ್ವಾರ್ಚನೆ, ಅ 4ರಂದು ಬೆಳಗ್ಗೆ 10 ಗಂಟೆಗೆ ಪಲ್ಲಕ್ಕಿ ಉತ್ಸವ ಹಾಗೂ ಸಂಜೆ 5 ಗಂಟೆಗೆ ರಥೋತ್ಸವ ಹಾಗೂ ಅ. 8ರಂದು ಸಂಜೆ 7 ಗಂಟೆಗೆ ಜಾತ್ರಾ ಸಮಾರೋಪ ಸಮಾರಂಭ ನೆರವೇರಲಿದೆ ಎಂದು ಮಾಹಿತಿ ನೀಡಿದರು.

ನಾನಾ ಮಠ ಮಾನ್ಯಗಳ ಮಠಾಧೀಶರ ಸಾನಿಧ್ಯದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಸಂಗೀತ ಕಾರ್ಯಕ್ರಮ, ಚನ್ನವೀರ ಶಿವಾಚಾರ್ಯರ ಭಜನ ಮಂಡಳಿ ಮತ್ತು ಮಹಾಲಕ್ಷ್ಮಿ ಮಹಿಳಾ ಭಜನ ಮಂಡಳಿ ವತಿಯಿಂದ ಭಜನೆ ಕಾರ್ಯಕ್ರಮ ಜರುಗಲಿವೆ. ಹೀಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾಧಿಗಳು ಆಗಮಿಸಿ ಜಾತ್ರಾ ಮಹೋತ್ಸವ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಡಾ. ಚಂದ್ರಶೇಖರ ಪಾಟೀಲ್, ಉತ್ಸವ ಸಮಿತಿ ಪದಾಧಿಕಾರಿಗಳಾದ ಬಾಬು ಬುಕ್ಕಾ, ಪ್ರಭಾಕರ ನಾಗರಾಳೆ, ಬಸವರಾಜ ಗೌಣಿ, ಸೋಮನಾಥ ಬುಕ್ಕಾ, ಸಿದ್ದು ಚಿಕನಗಾಂವ, ಅಣೇಪ್ಪ ರಟಕಲೆ, ಚಂದ್ರಪ್ಪ ಕಲಮೂಡ, ನಾಗರೆಡ್ಡಿ ಪೂಜಾರಿ, ಮನೋಹರ ಹಲಗೆ ಸೇರಿ ಅನೇಕರಿದ್ದರು.



ಬಸವಕಲ್ಯಾಣ: ನಗರದಲ್ಲಿ ಜರುಗುತ್ತಿರುವ ಶ್ರೀಮದ್ ರಂಭಾಪುರಿ ಜಗದ್ಗುರುಗಳವರ ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನದಲ್ಲಿ ತಾಲೂಕಿನ ಹಾರಕೂಡ ಶ್ರೀಮಠದ ಪೀಠಾಧಿಪತಿಗಳಾದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ರಂಭಾಪುರಿ ಜಗದ್ಗುರುಗಳಿಗೆ 10ತೊಲೆ ಚಿನ್ನ ನೀಡಿ ಸತ್ಕರಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಶಾಸಕ ಶರಣು ಸಲಗರ, ಬಿ. ಕೆ. ಹಿರೇಮಠ, ಪಿ. ಕೆ. ಹಿರೇಮಠ, ಮಲ್ಲಿನಾಥ ಹಿರೇಮಠ ಹಾರಕೂಡ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಕಮಲನಗರ:ನಾಡ ಹಬ್ಬ ಮೈಸೂರ ದಸರಾ ಉತ್ಸವದಲ್ಲಿ ತಾಲೂಕಿನ ಮುಧೋಳ (ಬಿ ) ಕಲಾ ತಂಡದವರ ಕೋಲಾಟ ಎಲ್ಲರ ಗಮನ ಸೆಳೆಯಿತು.ಗಡಿ ಭಾಗದ ಕಲಾವಿಧರಿಗೆ ಗುರುತಿಸಿ ಕೋಲಾಟ ನೃತ್ಯ ಮಾಡಲು ಅವಕಾಶ್ಯ ನೀಡಿದಕ್ಕೆ ಪಿ.ಕೆ.ಪಿ.ಎಸ್ ಅಧ್ಯಕ್ಷ ಗುರುನಾಥ ವಟಗೆ ಹರ್ಷ ವ್ಯಕ್ತಪಡಿಸಿದರು.

# ಗಾಂಧೀಜಿಯವರ ತತ್ವ-ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು: ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ



ಮಲ್ಲಮ್ಮ ನುಡಿ ವಾರ್ತೆ

ಬೀದರ, ಅ.02 : ರಾಷ್ಟ್ರಪೀತ ಮಹಾತ್ಮ ಗಾಂಧೀಜಿಯವರ ಅಹಿಂಸೆ, ಸತ್ಯ ಮತ್ತು ಸರಳತೆಯಿಂದ ಕೂಡಿದ ತತ್ವ– ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳಾದ ಶಿಲ್ಪಾ ಶರ್ಮಾ ತಿಳಿಸಿದರು.ಅವರು ಗುರುವಾರ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೀದರ ಇವರ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಮಹಾತ್ಮ ಗಾಂಧೀಜಿಯವರ 156 ನೇ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಮಹಾತ್ಮ ಗಾಂಧೀಜಿಯವರು ಶಾಂತಿಯ ಮೂಲಕ ನಮ್ಮ ದೇಶಕ್ಕೆ ಸ್ವಾತಂತ್ರ ತಂದು ಕೊಟ್ಟು, ನುಡಿದಂತೆ ನಡೆದರು ಹಾಗಾಗಿ ಅವರನ್ನು ನಾವು ರಾಷ್ಟ್ರಪಿತ ಎಂದು ಕರೆಯುತ್ತೇವೆ. ಮಹಾತ್ಮ ಗಾಂಧಿಯವರು ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ನೀತಿಯ ವಿರುದ್ಧ ಹೋರಾಟ ಮಾಡಿದ್ದರು. ಭಾರತದಲ್ಲಿ ದಂಡಿ ಸತ್ಯಾಗ್ರಹ, ಅಸಹಕಾರ ಚಳುವಳಿ, ಕ್ವಿಟ್ ಇಂಡಿಯಾ ಚಳುವಳಿ ಸೇರಿದಂತೆ ಹಲವಾರು ಹೋರಾಟಗಳನ್ನು ಮಾಡುವ ಮೂಲಕ ನಮ್ಮ ದೇಶದ ಸ್ವಾತಂತ್ರ ಹೋರಾಟದ ಅವರ ಕೊಡುಗೆ ಅಪಾರವಾಗಿದೆ. ಅವರು ದೇಶಕ್ಕೆ ನೀಡಿದ ಕೊಡುಗೆಗಳ ಬಗ್ಗೆ ಯುವ ಜನರು ತಿಳಿದುಕೊಳ್ಳಬೇಕಿದೆ. ನಮ್ಮ ಮನೆಯಂತೆ ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಛತೆ ಕಾಪಾಡಬೇಕು. ಈ ಕುರಿತು ನಮ್ಮ ಅಕ್ಕ–ಪಕ್ಕದ ಜನರಿಗೂ ಸ್ವಚ್ಛತೆ ಕಾಪಾಡುವಂತೆ ತಿಳಿಹೇಳಬೇಕು. ಸ್ವಚ್ಛ ಪರಿಸರದಿಂದ ಆರೋಗ್ಯವಂತ ಸಮಾಜ ನಿರ್ಮಾಣವಾಗುತ್ತದೆ ಎಂದು ಹೇಳಿದರು.

ಕರ್ನಾಟಕ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಾದ ಬಸವರಾಜ ಬಲ್ಲೂರ ಅವರು ಅತಿಥಿ ಉಪನ್ಯಾಸ ನೀಡಿದರು.

ಮಹಾತ್ಮ ಗಾಂಧೀಜಿಯವರ 156 ನೇ ಜಯಂತಿ ಅಂಗವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಬೀದರ ವತಿಯಿಂದ ವಿವಿಧ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳಿಗೆ ಹಮ್ಮಿಕೊಳ್ಳಲಾಗಿದ್ದ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಇದೇ ಸಂದರ್ಭದಲ್ಲಿ ಪ್ರಶಸ್ತಿ ಪತ್ರ ಹಾಗೂ ಬಹುಮಾನ ನೀಡಿ ಸನ್ಮಾನಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಬೀದರ ಸಹಾಯಕ ಆಯುಕ್ತರಾದ ಮಹಮ್ಮದ ಶಕೀಲ್, ಜಿಲ್ಲಾ ಪಂಚಾಯತ ಮುಖ್ಯ ಯೋಜನಾಧಿಕಾರಿ ಕಿಶೋರ್ ದುಬೆ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಚಂದ್ರಕಾಂತ ಶಹಾಬಾದಕರ್, ಶಾಲಾ ಶಿಕ್ಷಣ ಇಲಾಖೆಯ ಸಹಾಯಕ ಯೋಜನಾಧಿಕಾರಿ ಹುಡಗೆ ಗುಂಡಪ್ಪಾ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕರಾದ ಮಂಜುನಾಥ ಸುಳ್ಳೊಳ್ಳಿ, ವಾರ್ತಾ ಇಲಾಖೆಯ ಪ್ರಭಾರಿ ವಾರ್ತಾ ಸಹಾಯಕ ವಿಜಯಕೃಷ್ಣ, ನರೇಶ ಕುಮಾರ, ತನ್ವೀರ ಇಕ್ಬಾಲ್, ಗೀತಮ್ಮ, ನಾಗಶೆಟ್ಟಿ, ಆಶೀಶ್ ಹಜಾರೆ, ಜಗನ್ನಾಥ ಜಮಾದಾರ, ಅವಿನಾಶ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ವಿವಿಧ ಶಾಲಾ ಕಾಲೇಜಿನ ಶಿಕ್ಷಕರು, ವಿದ್ಯಾರ್ಥಿಗಳು ಸೇರಿದಂತೆ ಹಲವಾರು ಜನರು ಉಪಸ್ಥಿತರಿದ್ದರು.

## ಅಹಿಂಸಾ ತತ್ವವೆ ಗಾಂಧೀಯನ್ನು "ಮಹಾತ್ಮ" ರನ್ನಾಗಿಸಿದೆ:ಶಶೀಲ ಜಿ. ನಮೋಶಿ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಅ.2: ಸತ್ಯ, ಅಹಿಂಸಾ ತತ್ವದ ಮೂಲಕ ಭಾರತಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಗಾಂಧೀಜಿಯನ್ನು ವಿಶ್ವದಲ್ಲಿಯೇ "ಮಹಾತ್ಮ"ರನ್ನಾಗಿಸಿದೆ ಎಂದು ವಿಧಾನ ಪರಿಷತ್ ಶಾಸಕರುಗಳಾದ ಶಶೀಲ ಜಿ. ನಮೋಶಿ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಮಹಾನಗರ ಪಾಲಿಕೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಭಾರತ ಸೇವಾದಳ ಜಿಲ್ಲಾ ಸಮಿತಿ ಇವುಗಳ ಸಂಯುಕ್ತಾಶ್ರಯದಲ್ಲಿ ಗುರುವಾರ ಕಲಬುರಗಿ ನಗರದ ಎಸ್.ವಿ.ಪಿ. ವೃತ್ತದಲ್ಲಿನ ಕನ್ನಡ ಭವನದಲ್ಲಿ ಆಯೋಜಿಸಿದ "ಮಹಾತ್ಮ ಗಾಂಧೀಜಿಯರವರ 156ನೇ ಜಯಂತಿ" ಅಂಗವಾಗಿ ಗಾಂಧೀಜಿಯವರ ತತ್ವ–ಸಂದೇಶ ಕುರಿತು ವಿಶೇಷ ಉಪನ್ಯಾಸ, ಪ್ರಬಂಧ ಸ್ಪರ್ಧೆ ವಿಜೇತರಿಗೆ ನಗದು ಬಹುಮಾನ ವಿತರಣೆ ಹಾಗೂ ಸರ್ವಧರ್ಮ ಪ್ರಾರ್ಥನೆ–ಸದ್ಭಾವನಾ ಗೀತಗಾಯನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ತಮ್ಮ 21ನೇ ವಯಸ್ಸಿನಲ್ಲಿಯೆ ದಕ್ಷಿಣ ಆಫ್ರಿಕಾದಿಂದ ವಕೀಲ ವ್ಯಾಸಂಗ ಮುಗಿಸಿಕೊಂಡು ಭಾರತ–ಕ್ಕೆ ಬಂದ ಗಾಂಧೀಜಿ ಅವರು ಭಾರತದ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು. ಇಡೀ ದೇಶವನ್ನು ಒಗ್ಗೂಡಿಸಿದರು. ಇವರ ಅಹಿಂಸೆ ತತ್ವ ಮತ್ತು ದೃಢವಾದ ನಾಯಕತ್ವದ ಪರಿಣಾಮ ಭಾರತವು ಸ್ವಾತಂತ್ರ್ಯದ ಹಕ್ಕಿಯಾಗಿ ಉದಯಿಸಿತು. ಹೀಗಾಗಿಯೇ ಗಾಂಧಿಯನ್ನು ಭಾರತದ "ರಾಷ್ಟ್ರ ಪಿತಾಮಹ" ಎಂದು ಕರೆಯಲಾಗುತ್ತದೆ ಎಂದರು.

ಇಂದು ಬಾಪೂಜಿ ಜೊತೆಗೆ ದೇಶಕ್ಕೆ ಹೊಸ ದಿಕ್ಕನ್ನು ನೀಡಿದ ದಕ್ಷ ಆಡಳಿತಗಾರ ಮಾಜಿ ಪ್ರಧಾನಮಂತ್ರಿ ಲಾಲ್ ಬಹಾದ್ದೂರ ಅವರ ಜಯಂತಿ ಸಹ ನಾವಿಂದಿಲ್ಲಿ ಅವರನ್ನು ನೆನೆಯುವ ಅರ್ಥಪೂರ್ಣವಾಗಿ ಆಚರಿಸಿದ್ದೇವೆ. ಅನ್ನ ನೀಡುವ ರೈತ ಮತ್ತು ದೇಶ ಕಾಯುವ ವೀರ ಸೈನಿಕರ ಬಗ್ಗೆ ಅಪಾರ ಗೌರವ ಹೊಂದಿದ ಶಾಸ್ತ್ರೀಜಿ ಅವರ ಜೈ ಜವಾನ್–ಜೈ ಕಿಸಾನ್ ಘೋಷಣೆ ಇಂದಿಗೂ ನಮಗೆಲ್ಲ ಪ್ರೇರಣೆ–ಯಾಗಿದೆ. ದಾಂಧಿಜಿ–ಶಾಸ್ತ್ರೀಜಿ ಅವರ ಆದರ್ಶ ಗುಣಗಳನ್ನು ನಮ್ಮ ಜೀವಣದಲ್ಲಿ ಅಳವಡಿಸಿಕೊಳ್ಳಬೇಕಿದೆ ಎಂದು ಶಶೀಲ ಜಿ. ನಮೋಶಿ ಅಭಿಪ್ರಾಯಪಟ್ಟರು.

ಸಮಾಜ ಬದಲಾವಣೆಗೆ ನಾವೇ ಮೊದಲಿಗರಾಗಬೇಕು: ಡಾ ಕಲಬುರಗಿಯ ಜೇವರ್ಗಿ ಕಾಲೋನಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕಿ ಸವಿತಾ ಬಿ. ನಾಸಿ ಅವರು ವಿಶೇಷ ಉಪನ್ಯಾಸದಲ್ಲಿ ಮಾತನಾಡಿ, ಹಳ್ಳಿಗಳ ಬದುಕು ಹಸನಾದರೆ ಮಾತ್ರ ದೇಶ ಅಭಿವೃದ್ಧಿ ಹೊಂದಲು ಸಾಧ್ಯ ಎಂದಿದ್ದ ಅವರು ಗ್ರಾಮ ಸ್ವರಾಜ್ಯ ಪರಿಕಲ್ಪನೆಯ ಪರಿಣಾಮವೇ ಇಂದು ಪಂಚಾಯತ್ ರಾಜ್ಯ ಕೇಂದ್ರಿಕರಣ ವ್ಯವಸ್ಥೆ ನಮ್ಮುಂದಿದೆ. ನುಡಿದಂತೆ ನಡೆದ ಗಾಂಧೀಜಿಯು ಸತ್ಯ, ಪ್ರಮಾಣಿಕತೆ, ಸರಳತೆ, ಅಹಿಂಸೆಯನ್ನೆ ಪ್ರತಿಪಾದಿಸಿದರು. ಭ್ರಷ್ಟಾಚಾರ ರಹಿತ ಸಮಾಜ ನಿರ್ಮಾಣ ಮಾಡಬೇಕಾದರೆ ಮೊದಲು ನಾವು ಬದಲಾಗಬೇಕು ಎನ್ನುವ ಸಂಕಲ್ಪ ನಾವಿಂದು ಮಡೋಣ ಎಂದರು.

ಮಧ್ಯರಾತ್ರಿಯಲ್ಲಿ ಹೆಣ್ಣು ಸುರಕ್ಷಿತವಾಗಿ ಓಡಾಡಿದಾಗ ಮಾತ್ರ ನಿಜವಾದ ಮಹಿಳಾ ಸ್ವಾತಂತ್ರ್ಯ ಎಂದಿದ್ದರು. ಆದರೆ ಇಂದು ಪ್ರತಿ ಒಂದು ಗಂಟೆಯಲ್ಲಿ 17 ಅಪರಾಧ ಪ್ರಕರಣಗಳು ದಾಖಲಾಗುತ್ತಿವೆ. ಮಹಿಳಾ ದೌರ್ಜನ್ಯ ಹೆಚ್ಚುತ್ತಿದೆ. ಇದುವೇ ಬಾಪೂಜಿ ಕಂಡ ಕನಸಾ? ಎಂಬುದನ್ನು ನಾವು ಯೋಚಿಸಬೇಕಿದೆ. ಜೀವನದುದ್ದಕ್ಕೂ ಸರಳತೆ ಮೆರೆದ ಗಾಂಧೀಜಿ ಅವರ ಜೀವನವೇ ನಮಗೆ ಸಂದೇಶವಾಗಿದೆ. ಅವರ ಸತ್ಯ, ಅಹಿಂಸೆ ತತ್ವ ಹಿಂದಿಗ್ಗಿಂತ ಇಂದು ಅತ್ಯಂತ ಅವಶ್ಯಕವಾಗಿವೆ ಎಂದರು.

ಇದಕ್ಕು ಮುನ್ನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ ಅವರು ರಾಷ್ಟ್ರಪಿತ ಮಹಾತ್ಮ ಗಾಂಧಿ ಮತ್ತು ಮಾಜಿ ಪ್ರಧಾನಮಂತ್ರಿ ಲಾಲ್ ಬಹಾದ್ದೂರ ಶಾಸ್ತ್ರೀ ಅವರ ಭಾವಚಿತ್ರಕ್ಕೆ ಪುಷ್ಪಾರ್ಚಣೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಬಾಪೂಜಿ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತ ಮಕ್ಕಳಿಗೆ ನಗದು ಬಹುಮಾನ ವಿತರಿಸಿ ಶುಭ ಕೋರಿದರು.

ಗಾಂಧಿ ಪ್ರತಿಮೆಗೆ ಮಾಲಾರ್ಪಣೆ: ಕಾರ್ಯಕ್ರಮಕ್ಕೂ ಮುನ್ನ ಟೌನ್ ಹಾಲ್‌ನಲ್ಲಿರುವ ಗಾಂಧಿ ಪ್ರತಿಮೆಗೆ ಶಾಸಕ ಅಲ್ಲಮಪ್ರಭು ಪಾಟೀಲ, ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್, ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ. ಎಸ್.ಡಿ. ಶರಣಪ್ಪ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ ಅವರು ಮಾಲಾರ್ಪಣೆ ಮಾಡಿ ಬಾಪೂಜಿಗೆ ಗೌರವ ನಮನ ಸಲ್ಲಿಸಿದರು.

ಧಾರ್ಮಿಕ ಪಠಣ ಬೋಧಿಸಿದ ಪೂಜ್ಯರು: ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಶ್ರೀಸೈಲಂ ಸಾರಂಗಮಠದ ಪೂಜ್ಯ ಡಾ.ಸಾರಂಗಧರ ದೇಶಿಕೇಂದ್ರ ಮಹಾಸ್ವಾಮಿಗಳು ಹಿಂದೂ ಧರ್ಮ, ಮೌಲಾನಾ ಸೈಯದ್ ಖಾಸಿಂ ಬುಖಾರಿ ಖಾದ್ರಿ ಅವರು ಇಸ್ಲಾಂ ಧರ್ಮ, ಸಿದ್ದಾರ್ಥ ವಿಹಾರದ ಪೂಜ್ಯ ಸಂಗಾನಂದ ಭಂತೇಜಿ ಅವರು ಬೌದ್ಧ ಧರ್ಮ, ಕಲಬುರಗಿ ಸೆಂಟ್ ಮೇರಿ ಚರ್ಚ್‌ನ ಫಾದರ್ ಸ್ಟ್ಯಾನ್ಲಿ ಲೋಬೋ ಅವರು ಕ್ರಿಶ್ಚಿಯನ್ ಧರ್ಮ, ಮಳಖೇಡದ 1008 ಶ್ರೀ ಮಲ್ಲಿನಾಥ ದಿಗಂಬರ ಜೈನ್ ಮಂದಿರದ ಕಾರ್ಯದರ್ಶಿ ದೀಪಕ್ ಪಂಡಿತ್ ಅವರು ಜೈನ್ ಧರ್ಮ ಹಾಗೂ ಕಲಬುರಗಿಯ ಶ್ರೀ ಗುರುನಾನಕ್ ಮಠದ ಪೂಜ್ಯ ಭಾಯ್ ದೀಪ್ ಸಿಂಗ್ (ಗ್ರಂಥಿ) ಅವರು ಸಿಖ್ ಧರ್ಮದ ಪಠಣ ಬೋಧಿಸಿದರು.

ವಿದ್ಯಾರ್ಥಿಗಳಿಗೆ ನಗದು ಬಹುಮಾನ ವಿತರಣೆ: ಇದೇ ಸಂದರ್ಭದಲ್ಲಿ ಗಾಂಧಿ ಜಯಂತಿ ಅಂಗವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಬಾಪೂಜಿ ಕುರಿತು ಆಯೋಜಿಸಿದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ಪ್ರೌಢ, ಪದವಿ ಪೂರ್ವ ಹಾಗೂ ಪದವಿ–ಸ್ನಾತಕೋತ್ತರ ವಿಭಾಗದಿಂದ ತಲಾ ಮೂವರು ಸೇರಿ ಒಟ್ಟು 9 ಜನ ವಿದ್ಯಾರ್ಥಿಗಳಿಗೆ ನಗದು ಬಹುಮಾನ, ಪ್ರಮಾಣ ಪತ್ರ ನೀಡಿ ಸತ್ಕರಿಸಲಾಯಿತು.

ಸರ್ವಧರ್ಮಿಯ ಪ್ರಾರ್ಥನೆ, ಸದ್ಭಾವನಾ ಗೀತಗಾಯನ: ಭಾರತ ಸೇವಾ ದಳದ ಜಿಲ್ಲಾ ಸಂಘಟಿಕ ಚಂದ್ರಶೇಖರ ಜಮಾದಾರ ನೇತೃತ್ವದಲ್ಲಿ ಸರ್ವಧರ್ಮೀಯ ಪ್ರಾರ್ಥನೆ ನಡೆಯಿತು. ಕಲಾವಿದ ಶ್ರೀಧರ ಹೊಸಮನಿ ಮತ್ತು ಅವರ ತಂಡದಿಂದ ಸದ್ಭಾವನಾ ಗೀತ ಗಾಯನಗಳ ಜೊತೆಗೆ ಗಾಂಧಿ ಅವರಿಗೆ ಪ್ರಿಯವಾದ ಹಾಡುಗಳನ್ನು ಹಾಡಿದರು. ಕೊನೆಯದಾಗಿ "ರಘುಪತಿ ರಾಘವ ರಾಜಾ ರಾಮ್" ಭಜನ್ ಗೀತೆ ಮತ್ತು ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮಕ್ಕೆ ಮಂಗಳ ಹಾಡಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವಿಜಯಕುಮಾರ ತೇಗಲತಿಪ್ಪಿ, ಗೌರವ ಕಾರ್ಯದರ್ಶಿ ಶಿವರಾಜ ಅಂಡಗಿ, ಭಾರತ ಸೇವಾದಳದ ಕಾರ್ಯದರ್ಶಿ ಸುರೇಶ ಬಡಿಗೇರ ಉಪಸ್ಥಿತರಿದ್ದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪನಿರ್ದೇಶಕ ಜಡಿಯಪ್ಪ ಗೆದ್ಲಗಟ್ಟಿ ಸ್ವಾಗತಿಸಿದರು. ಶಿವರಾಜ ಅಣಜಗಿ ನಿರೂಪಿಸಿದರು.

# ಜಂಬೂಸವಾರಿ ವೀಕ್ಷಣೆ ವೇಳೆ ನೂಕುನುಗ್ಗಲು : ಯುವತಿ ಅಸ್ವಸ್ಥ



ಮಲ್ಲಮ್ಮನುಡಿವಾರ್ತೆಮೈಸೂರು:ಅ.2:ವಿಶ್ವವಿಖ್ಯಾತ ದಸರಾ ಜಂಬೂಸವಾರಿ ವೀಕ್ಷಣೆ ವೇಳೆ ನೂಕುನುಗ್ಗಲು ಉಂಟಾಗಿ ಯುವತಿ ಅಸ್ವಸ್ಥಗೊಂಡಿರುವ ಘಟನೆ ಮೈಸೂರಿನಲ್ಲಿ ನಡೆದಿದೆ.

ಜಂಬೂಸವಾರಿ ಕೆಆರ್ ಆಸ್ಪತ್ರೆ ಬಳಿ ತಲುಪುತ್ತಿದ್ದಂತೆ ತಾಯಿ ಚಾಮುಂಡೇಶ್ವರಿಯನ್ನು ಕಣ್ತುಂಬಿಕೊಳ್ಳಲು ಭಾರೀ ಸಂಖ್ಯೆಯಲ್ಲಿ ಭಕ್ತರು ಸೇರಿದ್ದರು. ಈ ವೇಳೆ ತಳ್ಳಾಟ–ನೂಕಾಟ ಉಂಟಾಗಿ ಯುವತಿ ಅಸ್ವಸ್ಥಗೊಂಡಿದ್ದಾಳೆ. ಕೂಡಲೇ ಅಸ್ವಸ್ಥಗೊಂಡ ಯುವತಿಯನ್ನು ಬ್ಯಾರಿಕೇಡ್‌ನಿಂದ ಆಚೆ ತಂದ ಪೊಲೀಸರು ಅಂಬುಲೆನ್ಸ್ ಮೂಲಕ ಆಸ್ಪತ್ರೆಗೆ ರವಾನಿಸಿದ್ದಾರೆ.

# ಭಾರತದಲ್ಲಿ ಪ್ರತಿ ಗಂಟೆಗೆ ಒಬ್ಬ ರೈತ ಆತ್ಮಹತ್ಯೆ

ನವದೆಹಲಿ: ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ ದ ಇತ್ತೀಚಿನ ವರದಿಯ ಪ್ರಕಾರ, 2023 ರಲ್ಲಿ, ದೇಶದಲ್ಲಿ ಪ್ರತಿ ಗಂಟೆಗೊಮ್ಮೆ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ತಿಳಿದುಬಂದಿದೆ. ಕೃಷಿಯಲ್ಲಿ ತೊಡಗಿರುವವರು ಎದುರಿಸುತ್ತಿರುವ ಆರ್ಥಿಕ ಒತ್ತಡವನ್ನು ಇದು ಎತ್ತಿ ತೋರಿಸುತ್ತದೆ.

ಆತ್ಮಹತ್ಯೆಗೆ ಬಲಿಯಾದವರಲ್ಲಿ ಹೆಚ್ಚಿನವರು ಮಹಾರಾಷ್ಟ್ರ (38.5%), ನಂತರ ಕರ್ನಾಟಕ (22.5%), ಆಂಧ್ರಪ್ರದೇಶ (8.6%), ಮಧ್ಯಪ್ರದೇಶ (7.2%) ಮತ್ತು ತಮಿಳುನಾಡು (5.9%) ಪ್ರದೇಶಗಳವರು, ಒಂದು ಕಾಲದಲ್ಲಿ ಶ್ರೀಮಂತ ಕೃಷಿ ಪರಂಪರೆಯನ್ನು ಹೊಂದಿದ್ದ ಈ ರಾಜ್ಯಗಳ ರೈತರು ಇಂದು ತೀವ್ರ ಆರ್ಥಿಕ ಒತ್ತಡ, ಹತಾಶೆ, ನೋವಿನಿಂದ ಬಳಲುತ್ತಿದ್ದಾರೆ.

ಹಿಂದಿನ ವರ್ಷ, 2022 ಕ್ಕೆ ಹೋಲಿಸಿದರೆ ಆತ್ಮಹತ್ಯೆಗಳ ಸಂಖ್ಯೆ ತುಲನಾತ್ಮಕವಾಗಿ ಕಡಿಮೆಯಾಗಿದೆ. ಆದರೆ ತೀವ್ರತೆ ಮಾತ್ರ ಹಾಗೆಯೇ ಇದೆ.2023 ರಲ್ಲಿ, ಕೃಷಿ ಕೆಲಸದಲ್ಲಿ ತೊಡಗಿಸಿಕೊಂಡಿದ್ದ 10,786 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಇದು ದೇಶದಲ್ಲಿ ಒಟ್ಟು ಆತ್ಮಹತ್ಯೆ ಮಾಡಿಕೊಂಡ ಜನರಲ್ಲಿ (171,418) 6.3% ರಷ್ಟಿದೆ. ಒಟ್ಟು ಆತ್ಮಹತ್ಯೆಗಳಲ್ಲಿ 43 ಶೇಕಡಾ ರೈತರು, ಉಳಿದವರು ಕೃಷಿ ಕಾರ್ಮಿಕರು ಎಂದು ಅಂಕಿಅಂಶ ತೋರಿಸುತ್ತದೆ. ಒಟ್ಟು 4,690 ರೈತರು ಮತ್ತು 6,096 ಕೃಷಿ ಕಾರ್ಮಿಕರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆ ಮಾಡಿಕೊಂಡ ಒಟ್ಟು ರೈತರಲ್ಲಿ 4,553 ಪುರುಷರು ಮತ್ತು 137 ಮಹಿಳೆಯರಾಗಿದ್ದಾರೆ.

ಆದರೆ ಪಶ್ಚಿಮ ಬಂಗಾಳ, ಬಿಹಾರ, ಒಡಿಶಾ, ಜಾರ್ಖಂಡ್, ಹಿಮಾಚಲ ಪ್ರದೇಶ, ಅರುಣಾಚಲ ಪ್ರದೇಶ, ಗೋವಾ, ಮಣಿಪುರ, ಮಿಜೋರಾಂ, ನಾಗಾಲ್ಯಾಂಡ್, ತ್ರಿಪುರ, ಚಂಡೀಗಢ, ದೆಹಲಿ ಮತ್ತು ಲಕ್ಷದ್ವೀಪಗಳಲ್ಲಿ ಈ ವರ್ಷಗಳಲ್ಲಿ ರೈತರ ಆತ್ಮಹತ್ಯೆಗಳು ವರದಿಯಾಗಿಲ್ಲ.

2022 ರಲ್ಲಿ ಉತ್ತರಾಖಂಡ್‌ನಲ್ಲಿ ಯಾವುದೇ ಆತ್ಮಹತ್ಯೆಗಳು ವರದಿಯಾಗಿಲ್ಲ, ಈ ವರ್ಷ, ಜಾರ್ಖಂಡ್, ಹಿಮಾಚಲ ಪ್ರದೇಶ ಮತ್ತು ಅರುಣಾಚಲ ಪ್ರದೇಶದಲ್ಲಿ ಯಾವುದೇ ಆತ್ಮಹತ್ಯೆ ವರದಿಯಾಗಿಲ್ಲ, ಕಳೆದ ವರ್ಷ ಈ ರಾಜ್ಯಗಳಲ್ಲಿ ವರದಿಯಾಗಿದೆ.

2022 ರಲ್ಲಿ, ರೈತರ ಆತ್ಮಹತ್ಯೆಗಳ ಸಂಖ್ಯೆ ತುಲನಾತ್ಮಕವಾಗಿ ಹೆಚ್ಚಿತ್ತು. 2022 ರಲ್ಲಿ ಕೃಷಿ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಒಟ್ಟು 11,290 ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದರಲ್ಲಿ 5,207 ರೈತರು ಮತ್ತು 6,083 ಕೃಷಿ ಕಾರ್ಮಿಕರು ಸೇರಿದ್ದಾರೆ. ಒಟ್ಟು 5,207 ರೈತರ ಆತ್ಮಹತ್ಯೆಗಳಲ್ಲಿ, 4,999 ಪುರುಷರು ಮತ್ತು 208 ಮಹಿಳೆಯರಾಗಿದ್ದಾರೆ. ಅದೇ ರೀತಿ, 2022 ರಲ್ಲಿ ಕೃಷಿ ಕಾರ್ಮಿಕರು 6,083 ಆತ್ಮಹತ್ಯೆಗಳಲ್ಲಿ, 5,472 ಪುರುಷರು ಮತ್ತು 611 ಮಹಿಳೆಯರಾಗಿದ್ದಾರೆ.

2023 ರಲ್ಲಿ ದೇಶದಲ್ಲಿ ಒಟ್ಟು 1,71,418 ಆತ್ಮಹತ್ಯೆಗಳು ನಡೆದಿವೆ ಎಂದು ಎನ್‌ಸಿಆರ್‌ಬಿ ವರದಿ ಮಾಡಿದೆ. ಇದು 2022 ಕ್ಕೆ ಹೋಲಿಸಿದರೆ ಶೇ. 0.3 ರಷ್ಟು ಹೆಚ್ಚಳವಾಗಿದೆ.

# ವಿಂಡೀಸ್ ವಿರುದ್ಧ ಭಾರತ ಮೇಲುಗೈ

ಅಹ್ಮದಾಬಾದ್:ಅ.2: ಭಾರತ ಮತ್ತು ವೆಸ್ಟ್ ಇಂಡೀಸ್ ನಡುವಿನ ಮೊದಲ ಟೆಸ್ಟ್ ಪಂದ್ಯದ ಮೊದಲ ದಿನದಾಟ ಅಂತ್ಯವಾಗಿದ್ದು, ದೈತ್ಯ ವಿಂಡೀಸ್ ವಿರುದ್ಧ ಭಾರತ ಸಂಪೂರ್ಣ ಮೇಲುಗೈ ಸಾಧಿಸಿದೆ. ಗುಜರಾತ್ ನ ಅಹ್ಮದಾಬಾದ್ ನಲ್ಲಿ ನಡೆಯುತ್ತಿರುವ ಮೊದಲ ಟೆಸ್ಟ್ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ್ದ ವಿಂಡೀಸ್ ತಂಡ ಮೊದಲ ಇನ್ನಿಂಗ್ಸ್ ನಲ್ಲಿ ಕೇವಲ 162 ರನ್ ಗೆ ಆಲೌಟ್

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330. Editor: Ramesh Reddy, Office Ph. No: +91 9449732000.